ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು–೫೭೦ ೦೦೬

KARNATAKA STATE OPEN UNIVERSITY
Muktha Gangotri, Mysore-570 006

# ಎಂ.ಎ. (ಅಂತಿಮ)
# ಸಾರ್ವಜನಿಕ ಆಡಳಿತ




# ಅಭಿವೃದ್ಧಿ ಆಡಳಿತ
(ಭಾರತಕ್ಕೆ ಸಂಭದಿಸಿದಂತೆ)

ಕೋರ್ಸ್–9

ಬ್ಲಾಕ್: 1–7

# ಕರಾಮುವಿ

## ರಾಷ್ಟ್ರೀಯ ಅಂತಾರಾಷ್ಟ್ರೀಯ ಮಾನ್ಯತೆ

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಜೂನ್ ೧, ೧೯೯೬ ರಂದು ಸರ್ಕಾರಿ ಅದೇಶ ಸಂಖ್ಯೆ : ED1/UOV/dated 12 February 1996 (Karnataka State Open University Act - 1992) ರ ಪ್ರಕಾರ ಕರ್ನಾಟಕ ರಾಜ್ಯಪಾಲರ ಅನುಮೋದನೆಯೊಂದಿಗೆ ಪೂರ್ಣಪ್ರಮಾಣದ ವಿಶ್ವವಿದ್ಯಾನಿಲಯವಾಗಿ ಸ್ಥಾಪನೆಗೊಂಡಿತು. ರಾಜ್ಯದ ಶೈಕ್ಷಣಿಕ ಪದ್ಧತಿಯಲ್ಲಿ 'ದೂರ ಶಿಕ್ಷಣ ಪದ್ಧತಿ'ಯನ್ನು ಆರಂಭಿಸುವ ಮತ್ತು ಉತ್ತೇಜಿಸುವ ದೃಷ್ಟಿಯಿಂದ ಈ ಮುಕ್ತ ವಿಶ್ವವಿದ್ಯಾನಿಲಯವನ್ನು ಅಧಿನಿಯಮದ ಮೂಲಕ ಸ್ಥಾಪಿಸಲಾಯಿತು.

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿನಿಯಮ ೧೯೯೨ ರಂತೆ ಈ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯದ ಒಳಗೆ ಸಂಸ್ಥೆಗಳನ್ನು, ಕಾಲೇಜುಗಳನ್ನು, ಪ್ರಾದೇಶಿಕ ಕೇಂದ್ರಗಳನ್ನು ಮತ್ತು ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವ, ನಿರ್ವಹಿಸುವ ಮತ್ತು ಮಾನ್ಯತೆ ಕೊಡುವ ಅಧಿಕಾರವನ್ನು ಹೊಂದಿದೆ. ಅಗತ್ಯವಿದ್ದ ಸಂದರ್ಭಗಳಲ್ಲಿ ಕರ್ನಾಟಕ ರಾಜ್ಯದ ಹೊರಗಿನ ಸ್ಥಳಗಳಲ್ಲೂ ಪ್ರಾದೇಶಿಕ ಕೇಂದ್ರ ಮತ್ತು ಅಧ್ಯಯನ ಕೇಂದ್ರಗಳನ್ನು ತೆರೆಯಲು ಅಧಿಕಾರವನ್ನು ಪಡೆದಿದೆ.

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳು 'ದೂರ ಶಿಕ್ಷಣ ಮಂಡಳಿ' (DEC), ಮಾನವಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (MHRD), ನವದೆಹಲಿಯ ಮಾನ್ಯತೆಯನ್ನು ಪಡೆದಿವೆ.

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ರಿಂದ ನವದೆಹಲಿಯಲ್ಲಿರುವ 'ಭಾರತೀಯ ವಿಶ್ವವಿದ್ಯಾನಿಲಯಗಳ ಸಂಘ'ದ (AIU) ಖಾಯಂ ಸದಸ್ಯತ್ವವನ್ನು ಹೊಂದಿದೆ.

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ರಿಂದ 'ಕಾಮನ್‌ವೆಲ್ತ್ ವಿಶ್ವವಿದ್ಯಾನಿಲಯಗಳ ಸಂಘ' (ACU), ಲಂಡನ್, ಯುನೈಟೆಡ್ ಕಿಂಗ್‌ಡಮ್‌ನ ಶಾಶ್ವತ ಸದಸ್ಯ ಸಂಸ್ಥೆಯಾಗಿದೆ. ಸದಸ್ಯತ್ವದ ಸಂಖ್ಯೆ : ZKASOPENUINI.

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ೧೯೯೯ ರಿಂದ 'ಏಷಿಯಾದ ಮುಕ್ತ ವಿಶ್ವವಿದ್ಯಾನಿಲಯಗಳ ಸಂಘ' (AAOU), ಬೀಜಿಂಗ್, ಚೀನಾ – ಇದರ ಶಾಶ್ವತ ಸದಸ್ಯ ಸಂಸ್ಥೆಯಾಗಿದೆ.

- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' (COL) ಕೆನಡ, ಇದರ ಸಹಯೋಗವನ್ನು ೨೦೦೩ ರಿಂದ ಹೊಂದಿದೆ. 'ಕಾಮನ್‌ವೆಲ್ತ್ ಆಫ್ ಲರ್ನಿಂಗ್' ಎನ್ನುವುದು ದೂರ ಶಿಕ್ಷಣದಲ್ಲಿ ಮುಕ್ತಕಲಿಕಾ ತಿಳಿವಳಿಕೆ, ಸಂಪನ್ಮೂಲಗಳು ಮತ್ತು ತಂತ್ರಜ್ಞಾನಗಳ ಅಭಿವೃದ್ಧಿ ಮತ್ತು ಹಂಚುವಿಕೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕಾಮನ್‌ವೆಲ್ತ್ ದೇಶಗಳ ಸರ್ಕಾರಗಳಿಂದ ನಿರ್ಮಾಣಗೊಂಡ ಅಂತಾರಾಷ್ಟ್ರೀಯ ಸರ್ಕಾರಿ ಸಂಸ್ಥೆಯಾಗಿದೆ.

**ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ**

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-006.

## ಸಾರ್ವಜನಿಕ ಆಡಳಿತ

## ಎಂ.ಎ. (ಅಂತಿಮ)

## ಪತ್ರಿಕೆ – 9 : ಅಭಿವೃದ್ಧಿ ಆಡಳಿತ

## (ಭಾರತಕ್ಕೆ ಸಂಬಂಧಿಸಿದಂತೆ)


**ಬ್ಲಾಕ್ : 1 ಪರಿಚಯ** — ಪುಟ ಸಂಖ್ಯೆ

| | | |
|---|---|---|
| ಘಟಕ – 1 : | ಅಭಿವೃದ್ಧಿ ಆಡಳಿತ : ಪರಿಕಲ್ಪನೆ, ಅರ್ಥ ಮತ್ತು ಪ್ರಾಮುಖ್ಯತೆ | 1 – 14 |
| ಘಟಕ – 2 : | ಅಭಿವೃದ್ಧಿ ಆಡಳಿತದ ಸ್ವಭಾವ ಮತ್ತು ವ್ಯಾಪ್ತಿ | 15 – 28 |
| ಘಟಕ – 3 : | ಅಭಿವೃದ್ಧಿಯ ಪರಿಕಲ್ಪನೆ ಮತ್ತು ವಿವಿಧ ಸಿದ್ಧಾಂತಗಳು | 29 – 53 |
| ಘಟಕ – 4 : | ಅಭಿವೃದ್ಧಿಗೂ ಆಡಳಿತಕ್ಕೂ ಇರುವ ಸಂಬಂಧ | 54 – 63 |

**ಬ್ಲಾಕ್ : 2 ಅಭಿವೃದ್ಧಿ ಆಡಳಿತದ ಪರಿಸರ**

| | | |
|---|---|---|
| ಘಟಕ – 5 : | ಅಭಿವೃದ್ಧಿ ಆಡಳಿತದ ಪರಿಸರದ ಆಯಾಮಗಳು | 64 – 77 |
| ಘಟಕ – 6 : | ಅಭಿವೃದ್ಧಿ ಆಡಳಿತದ ಐತಿಹಾಸಿಕ ಸನ್ನಿವೇಶಗಳು | 78 – 85 |
| ಘಟಕ – 7 : | ಅಭಿವೃದ್ಧಿ ಆಡಳಿತದ ಸಾಮಾಜಿಕ ಆಯಾಮಗಳು<br>ಅಭಿವೃದ್ಧಿಯ ಆಡಳಿತದ ಆರ್ಥಿಕ ಆಯಾಮಗಳು | 86 – 98 |
| ಘಟಕ – 8 : | ಅಭಿವೃದ್ಧಿ ಆಡಳಿತದ ರಾಜಕೀಯ ಆಯಾಮಗಳು | 99 – 110 |

**ಬ್ಲಾಕ್ : 3 ನೌಕರಶಾಹಿ ಮತ್ತು ಅಭಿವೃದ್ಧಿ ಆಡಳಿತ**

| | | |
|---|---|---|
| ಘಟಕ – 9 : | ನೌಕರಶಾಹಿಯ ರಚನೆ ಹಾಗೂ ಅಭಿವೃದ್ಧಿ ಆಡಳಿತ – ಹೊಂದಾಣಿಕೆಯ ಸಮಸ್ಯೆಗಳು | 111– 120 |
| ಘಟಕ – 10 : | ಅಭಿವೃದ್ಧಿಯಲ್ಲಿ ನೌಕರ ಶಾಹಿಯ ಸಮಸ್ಯೆಗಳು : ಸಾಮಾನ್ಯ ಆಡಳಿತಗಾರರು – ವಿಶೇಷ ತಜ್ಞರು ಹಾಗೂ ಬದ್ಧ ನೌಕರಶಾಹಿ ಮತ್ತು ತಟಸ್ಥ ನೌಕರಶಾಹಿ | 121– 132 |
| ಘಟಕ – 11 : | ನೌಕರಶಾಹಿಯ ಭ್ರಷ್ಟಾಚಾರ ಮತ್ತು ಅಭಿವೃದ್ಧಿ ನಾಗರೀಕ – ಮತ್ತು ಆಡಳಿತದ ಸಂಬಂಧ ಮತ್ತು ಅಭಿವೃದ್ಧಿ | 133 – 144 |
| ಘಟಕ – 12 : | ಅಭಿವೃದ್ಧಿಗೆ ನೌಕರಶಾಹಿಯ ಸ್ಪಂದಿಸುವಿಕೆ | 145 – 150 |

## ಬ್ಲಾಕ್ : 4 ಯೋಜನೆ ಮತ್ತು ಅಭಿವೃದ್ಧಿ


| | | |
|---|---|---|
| ಘಟಕ – 13 : | ಭಾರತದಲ್ಲಿ ಅಭಿವೃದ್ಧಿ ಯೋಜನೆ | 151 – 161 |
| ಘಟಕ – 14 : | ಭಾರತದಲ್ಲಿ ಯೋಜನಾ ವ್ಯವಸ್ಥೆ ಮತ್ತು ಪ್ರಕ್ರಿಯೆಯ ವಿವಿಧ ಹಂತಗಳು : ರಾಷ್ಟ್ರ, ರಾಜ್ಯ ಹಾಗೂ ಸ್ಥಳೀಯ ಮಟ್ಟಗಳಲ್ಲಿ | 162– 177 |
| ಘಟಕ – 15 : | ಅನುಷ್ಠಾನ ಮಾಡುವಲ್ಲಿ ಎದುರಾಗುವ ಸಮಸ್ಯೆಗಳು ಮತ್ತು ಯೋಜನಾ ನಿರ್ವಹಣೆ | 178– 189 |
| ಘಟಕ – 16 : | ಯೋಜನೆ ಮತ್ತು ಆಡಳಿತದ ಮೇಲೆ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳ ಪರಿಣಾಮ | 190– 203 |


## ಬ್ಲಾಕ್ : 5 ಅಭಿವೃದ್ಧಿ ಆಡಳಿತದಲ್ಲಿ ಸಂಘಟನೆ ಮತ್ತು ಹಣಕಾಸು ಆಡಳಿತಕ್ಕೆ ಸಂಬಂಧಿಸಿದ ವಿಷಯಗಳು


| | | |
|---|---|---|
| ಘಟಕ – 17 : | ಸಂಘಟನಾ ಸಮಸ್ಯೆಗಳು : ಅಭಿವೃದ್ಧಿ ಆಡಳಿತದಲ್ಲಿ ಸಂಘಟನಾ ತತ್ವಗಳು ಮತ್ತು ಪದ್ಧತಿಗಳು | 204– 211 |
| ಘಟಕ – 18 : | ಅಭಿವೃದ್ಧಿ ಆಡಳಿತದಲ್ಲಿ ಸ್ಥಳೀಯ ಸರ್ಕಾರಗಳ ಪಾತ್ರ ಮತ್ತು ವಿಶೇಷ ಉದ್ದೇಶಿತ ಸಂಘಟನೆಗಳ ಪಾತ್ರ | 212-- 224 |
| ಘಟಕ – 19 : | ಅಭಿವೃದ್ಧಿ ಆಡಳಿತದಲ್ಲಿ ನಾಗರೀಕ ಸಮಾಜ ಮತ್ತು ಸರ್ಕಾರೇತರ ಸಂಘಟನೆಗಳ ಪಾತ್ರ | 225– 234 |
| ಘಟಕ – 20 : | ಅಭಿವೃದ್ಧಿಯ ಹಣಕಾಸು ಆಡಳಿತ : ಸಾಂಪ್ರದಾಯಿಕ ಹಣಕಾಸು ಆಡಳಿತ ಮತ್ತು ಅಭಿವೃದ್ಧಿಗೆ ಅನುಗುಣವಾಗಿ ಮಾಡಿಕೊಳ್ಳಬಹುದಾದ ಅದರಲ್ಲಿನ ಬದಲಾವಣೆ | 235– 247 |


## ಬ್ಲಾಕ್ : 6 ಅಭಿವೃದ್ಧಿ ಆಡಳಿತದ ವಿವಿಧ ಮಾದರಿ– ೧ – ಪ್ರಾದೇಶಿಕ ಅಭಿವೃದ್ಧಿ ಆಡಳಿತ


| | | |
|---|---|---|
| ಘಟಕ – 21 : | ಪ್ರಾದೇಶಿಕ ಅಭಿವೃದ್ಧಿ ಆಡಳಿತ ಮತ್ತು ಪ್ರಾದೇಶಿಕ ಅಥವಾ ಪ್ರಾಂತೀಯ ಯೋಜನೆ, ಅರ್ಥ, ಪ್ರಾಮುಖ್ಯತೆ, ವ್ಯಾಪ್ತಿ ಮತ್ತು ವಿಧಗಳು | 248– 261 |
| ಘಟಕ – 22 : | ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಆಡಳಿತ | 262– 271 |
| ಘಟಕ – 23 : | ಗ್ರಾಮೀಣ ಅಭಿವೃದ್ಧಿ ಆಡಳಿತ | 272– 289 |
| ಘಟಕ – 24 : | ನಗರಾಭಿವೃದ್ಧಿ ಆಡಳಿತ | 290– 304 |


## ಬ್ಲಾಕ್ : 7 ಅಭಿವೃದ್ಧಿ ಆಡಳಿತದ ವಿವಿಧ ವಿಧಗಳು – ೨ – ಕ್ಷೇತ್ರಾಭಿವೃದ್ಧಿ ಹಾಗೂ ಮಾನವ ಅಭಿವೃದ್ಧಿ ಆಡಳಿತ


| | | |
|---|---|---|
| ಘಟಕ – 25 : | ಅಭಿವೃದ್ಧಿ ಆಡಳಿತದ ವಿವಿಧ ವಿಧಗಳು – ಕ್ಷೇತ್ರಾಭಿವೃದ್ಧಿ ಹಾಗೂ ಮಾನವ ಅಭಿವೃದ್ಧಿ ಆಡಳಿತ, ಕೈಗಾರಿಕಾ ಅಭಿವೃದ್ಧಿ ಆಡಳಿತ | 305– 322 |
| ಘಟಕ – 26 : | ವಿಜ್ಞಾನ ಮತ್ತು ತಾಂತ್ರಿಕ ಅಭಿವೃದ್ಧಿ ಆಡಳಿತ | 323– 340 |
| ಘಟಕ – 27 : | ಬುಡಕಟ್ಟು ಅಭಿವೃದ್ಧಿ ಆಡಳಿತ | 341– 358 |
| ಘಟಕ – 28 : | ಮಹಿಳಾ ಅಭಿವೃದ್ಧಿ ಆಡಳಿತ | 359 –376 |

ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್.ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಟಿ.ಡಿ. ದೇವೆಗೌಡ**
ಡೀನ್(ಅಧ್ಯಯನ ಕೇಂದ್ರ) ಮತ್ತು ಪ್ರಾಧ್ಯಾಪಕರು
ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮೈಸೂರು – ೬

**ಜಗದೀಶ್ ಬಾಬು ಹೆಚ್.ಕೆ**
ಅಧ್ಯಕ್ಷರು
ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮೈಸೂರು – ೬


ಪತ್ರಿಕೆ – ೧ ಪಠ್ಯಕ್ರಮ ನಿರೂಪಕರು


*ಪ್ರೊ. ಎಂ. ಉಮಾಪತಿ (ನಿವೃತ್ತ)*
ರಾಜ್ಯಶಾಸ್ತ್ರ ಪ್ರಾಧ್ಯಾಪಕರು
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು– 6


| | |
|---|---|
| *ಬ್ಲಾಕ್ 1.* | *ಘಟಕಗಳು 1 ರಿಂದ 4* |
| *ಬ್ಲಾಕ್ 2.* | *ಘಟಕಗಳು 5 ರಿಂದ 8* |
| *ಬ್ಲಾಕ್ 3.* | *ಘಟಕಗಳು 9 ರಿಂದ 12* |
| *ಬ್ಲಾಕ್ 4.* | *ಘಟಕಗಳು 13 ರಿಂದ 16* |
| *ಬ್ಲಾಕ್ 5.* | *ಘಟಕಗಳು 17 ರಿಂದ 20* |
| *ಬ್ಲಾಕ್ 6* | *ಘಟಕಗಳು 21 ರಿಂದ 24* |
| *ಬ್ಲಾಕ್ 7.* | *ಘಟಕಗಳು 25 ರಿಂದ 28* |


ಕ.ರಾ.ಮು.ವಿ., ನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ.


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 2014

ಎಲ್ಲಾ ಹಕ್ಕುಗಳನ್ನು ಕಾದಿರಿಸಲಾಗಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸ್‌ಗಳ ಹೆಚ್ಚಿನ ವಿವರಗಳನ್ನು ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮುಕ್ತಗಂಗೋತ್ರಿ, ಮೈಸೂರು – 6 ಇಲ್ಲಿಂದ ಪಡೆಯಬಹುದು.

# ಪತ್ರಿಕೆ – 9

## ಪರಿಚಯ

## ಅಭಿವೃದ್ಧಿ ಆಡಳಿತ (ಭಾರತದ ವಿಶೇಷ ಹೋಲಿಕೆಯೊಡನೆ)

ಪ್ರಿಯ ವಿದ್ಯಾರ್ಥಿ

ಈ ಪತ್ರಿಕೆ ಅಭಿವೃದ್ಧಿ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳನ್ನು ಒಳಗೊಂಡಿರುತ್ತದೆ. ಇತ್ತೀಚಿನ ದಿನಗಳಲ್ಲಿ ಪ್ರವರ್ಧಮಾನಕ್ಕೆ ಬಂದಿರುವ ಮತ್ತು ಓದುಗರ ಅಚ್ಚುಮೆಚ್ಚಿನ ವಿಷಯವಾಗಿ, ವಿದ್ಯಾರ್ಥಿಗಳ ಆಸಕ್ತಿಯನ್ನು ಕೆರಳಿಸುವಂತಹ ಸಾರ್ವಜನಿಕ ಆಡಳಿತದ ಒಂದು ಪ್ರಮುಖ ಭಾಗವೇ **'ಅಭಿವೃದ್ಧಿ ಆಡಳಿತ'**. ವಿಶ್ವದ ಎರಡನೆಯ ಮಹಾಯುದ್ಧದ ನಂತರ ಅನೇಕ ವಸಾಹತು ರಾಷ್ಟ್ರಗಳಿಗೆ ಸ್ವತಂತ್ರ ಲಭ್ಯವಾದದ್ದು ತಿಳಿದ ವಿಷಯವೇ ಆಗಿದೆ. ಇಂತಹ ವಸಾಹತು ರಾಷ್ಟ್ರಗಳಲ್ಲಿ ಭಾರತವೂ ಕೂಡ ಒಂದು ಎಂದರೆ ತಪ್ಪಾಗಲಾರದು. ಈ ರೀತಿ ಸ್ವತಂತ್ರ ಪಡೆದ ರಾಷ್ಟ್ರಗಳು ತಮ್ಮ ಅಭಿವೃದ್ಧಿಯ ಬಗ್ಗೆ ಚಿಂತನೆ ನಡೆಸುವುದರ ಜೊತೆಗೆ ಅಭಿವೃದ್ಧಿ ತರುವ ರೀತಿ ಹಾಗೂ ಅಭಿವೃದ್ಧಿ ಮಾಡುವವರು ಯಾರು ಎಂಬ ಪ್ರಶ್ನೆ ಹುಟ್ಟಿಕೊಂಡಿತು. ಈ ಸಮಯದಲ್ಲಿ ಅಸ್ಥಿತ್ವದಲ್ಲಿದ್ದ ರಾಜ್ಯಗಳು ಮತ್ತು ಅಲ್ಲಿನ ಸರ್ಕಾರ ಈ ಗುರುತರ ಜವಾಬ್ದಾರಿಯನ್ನು ಹೊತ್ತುಕೊಂಡಿತು. ಅಭಿವೃದ್ಧಿಗೋಸ್ಕರ ಸಾರ್ವಜನಿಕ ಆಡಳಿತವನ್ನು ಅವಲಂಭಿಸಲಾಯಿತು. ಸಾರ್ವಜನಿಕ ಆಡಳಿತ ನಿಷ್ಪಕ್ಷಪಾತವಾಗಿ ಅಭಿವೃದ್ಧಿಯಲ್ಲಿ ತೊಡಗಿಕೊಂಡಿತು. ಅಭಿವೃದ್ಧಿ ಆಡಳಿತವು ಈ ಸಂದರ್ಭದಲ್ಲಿ ಉದ್ಭವವಾಯಿತು. ಜೊತೆಗೆ ಎಫ್.ಡಬ್ಲ್ಯೂ ರಿಗ್ಸ್, ಡಬ್ಲ್ಯೂ ವೈಡ್ನರ್ ಡೇನಿಯಲ್ ಲರ್ನರ್‌ರ ವಾದ, ಅಭಿವೃದ್ಧಿ ಆಡಳಿತದ ಬಗ್ಗೆ ಮತ್ತಷ್ಟು ಆಸಕ್ತಿ ಕೆರಳಿಸುತ್ತದೆ. ಅಭಿವೃದ್ಧಿ–ಆಧುನಿಕತೆ, ಅಭಿವೃದ್ಧಿ–ಬೆಳವಣಿಗೆ ಮತ್ತು ಅಭಿವೃದ್ಧಿ ಮೊದಲೊ– ಆಡಳಿತ ಮೊದಲೊ ಹಾಗೂ ಅಭಿವೃದ್ಧಿ ತರುವಲ್ಲಿ ಅಧಿಕಾರಶಾಹಿಗಳ ಪಾತ್ರ ಇನ್ನೂ ಮುಂತಾದ ಅಭಿವೃದ್ಧಿಗೆ ಸಂಬಂಧಿಸಿದಂಥೆ ವಾದ, ತರ್ಕ ಮತ್ತು ವಿಶ್ಲೇಷಣೆಯನ್ನು ಈ ಪತ್ರಿಕೆಯಲ್ಲಿ ಅಭ್ಯಸಿಸುವಿರಿ.

**ಜಗದೀಶ್ ಬಾಬು ಹೆಚ್. ಕೆ.**
ಅಧ್ಯಕ್ಷರು
ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ ಮೈಸೂರು – 6

## ಬ್ಲಾಕ್– 1 ರ ಪರಿಚಯ

ಬ್ಲಾಕ್ 1ರಲ್ಲಿ ನಾಲ್ಕು ಘಟಕಗಳಿವೆ. ಘಟಕ 1ರಲ್ಲಿ ಅಭಿವೃದ್ಧಿ ಆಡಳಿತ ಎಂದರೇನು ಅದರ ಅರ್ಥ ಹಾಗೂ ಅದರ ಪರಿಕಲ್ಪನೆಯನ್ನು ಅಭ್ಯಸಿಸುವಿರಿ. ಹಾಗೂ ಅನೇಕ ಬರಹಗಾರರು ಮತ್ತು ಚಿಂತಕರು ನೀಡಿರುವ ವಿವಿಧ ವ್ಯಾಖ್ಯಾನ ಹಾಗೂ ಅರ್ಥ ಮತ್ತು ಇತ್ತೀಚಿನ ದಿನಗಳಲ್ಲಿ ಅದರ ಪ್ರಾಮುಖ್ಯತೆ ಬಗ್ಗೆ ವಿವರ ನೀಡಲಾಗಿದೆ. ಎರಡನೆಯ ಘಟಕದಲ್ಲಿ ಅಭಿವೃದ್ಧಿ ಆಡಳಿತ ಇತರ ವಿಷಯಗಳೊಡನೆ ಹೊಂದಿರುವ ಸಂಬಂಧ, ಅದರ ವಿಶಿಷ್ಟ ಲಕ್ಷಣ ಹಾಗೂ ಅದರ ವ್ಯಾಪ್ತಿಯ ಬಗ್ಗೆ ಚರ್ಚಿಸಲಾಗಿದೆ. ಘಟಕ ಮೂರರಲ್ಲಿ ಅಭಿವೃದ್ಧಿ ಬಗೆಗಿನ ಕಲ್ಪನೆ ಹಾಗೂ ಅಭಿವೃದ್ಧಿ ಆಡಳಿತಕ್ಕೆ ಸಂಬಂಧಿಸಿದಂತೆ ಇರುವ ಸಿದ್ಧಾಂತಗಳೂ ಘಟಕ ನಾಲ್ಕರಲ್ಲಿ ಅಭಿವೃದ್ಧಿ ಮತ್ತು ಆಡಳಿತದ ಬಗ್ಗೆ ಚರ್ಚಿಸಲಾಗಿದೆ.

## ಬ್ಲಾಕ್– 2 ರ ಪರಿಚಯ

ಬ್ಲಾಕ್ 2ರಲ್ಲಿ ನಾಲ್ಕು ಘಟಕಗಳಿದ್ದು ಘಟಕ 5ರಲ್ಲಿ ಪರಿಸರ ಹಾಗೂ ಅದರ ವಿವಿಧ ಆಯಾಮಗಳ ಬಗ್ಗೆ ಚರ್ಚೆ ಇದೆ. ಹಾಗೂ ಈ ಘಟಕದಲ್ಲಿ ಅಭಿವೃದ್ಧಿಗೂ ಪರಿಸರಕ್ಕೂ ಇರುವ ಸಂಬಂಧ ಮತ್ತು ಹೇಗೆ ಪರಿಸರ ಆಡಳಿತದ ಮೇಲೆ ತನ್ನ ಪರಿಣಾಮ ಬೀರುತ್ತದೆ ಎಂಬುದರ ಬಗ್ಗೆ ವಿವರ ಇದೆ. ಘಟಕ ಆರರಲ್ಲಿ ಅಭಿವೃದ್ಧಿ ಆಡಳಿತ ಹಾಗೂ ಚಾರಿತ್ರಿಕ ಹಿನ್ನೆಲೆ ಕುರಿತಾದ ವಿಷಯಗಳು ಮತ್ತು ಸ್ವತಂತ್ರ ಪೂರ್ವದಲ್ಲಿ ಅಭಿವೃದ್ಧಿ ದೇಶದಲ್ಲಿ ಇದ್ದಿತೆ ಎಂಬುದರ ಬಗ್ಗೆ ವಾದವೂ ಕೂಡ ಇದೆ. ಘಟಕ ಏಳರಲ್ಲಿ ಅಭಿವೃದ್ಧಿ ಆಡಳಿತ ಮತ್ತು ಆರ್ಥಿಕ ಪರಿಸರ ಹಾಗೂ ಅಭಿವೃದ್ಧಿ ಹಾಗೂ ಸಾಮಾಜಿಕ ಪರಿಸರದ ಬಗ್ಗೆ ವಿವರ ಇದೆ. ಘಟಕ ಎಂಟರಲ್ಲಿ ಅಭಿವೃದ್ಧಿ ಹಾಗೂ ರಾಜಕೀಯ ಪರಿಸರದ ಬಗ್ಗೆ ಚರ್ಚಿಸಲಾಗಿದೆ.

## ಬ್ಲಾಕ್– 3 ರ ಪರಿಚಯ

ಈ ಬ್ಲಾಕ್ ನಾಲ್ಕು ಘಟಕಗಳನ್ನು ಹೊಂದಿದೆ. ಘಟಕ ಒಂಭತ್ತರಲ್ಲಿ ನೌಕರ ಶಾಹಿಯ ರಚನೆ ಹಾಗೂ ಅಭಿವೃದ್ಧಿ ಆಡಳಿತ ಹಾಗೂ ಹೊಂದಾಣಿಕೆಯ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗಿದೆ. ಘಟಕ ಹತ್ತರಲ್ಲಿ ಅಭಿವೃದ್ಧಿಯಲ್ಲಿ ನೌಕರ ಶಾಹಿಯ ಸಮಸ್ಯೆಗಳು – ಸಾಮಾನ್ಯ ಆಡಳಿತಗಾರ ಮತ್ತು ವಿಶೇಷ ತಜ್ಞ ಹಾಗೂ ಬದ್ಧ ನೌಕರಶಾಹಿ ಮತ್ತು ತಟಸ್ಥ ನೌಕರಶಾಹಿಯ ಬಗ್ಗೆ ಚರ್ಚಿಸಲಾಗಿದೆ. ಘಟಕ ಹನ್ನೊಂದರಲ್ಲಿ ನೌಕರ ಶಾಹಿ ಭ್ರಷ್ಟಾಚಾರ ಮತ್ತು ಅಭಿವೃದ್ಧಿ ನಾಗರೀಕ ಮತ್ತು ಆಡಳಿತ ಸಂಬಂದ ಹಾಗೂ ಅಭಿವೃದ್ಧಿ ಬಗ್ಗೆ ಚರ್ಚಿಸಲಾಗಿದೆ. ಘಟಕ ಹನ್ನೆರಡರಲ್ಲಿ ಅಭಿವೃದ್ಧಿಗೆ ನೌಕರ ಶಾಹಿಯ ಸ್ಪಂದಿಸುವಿಕೆ ಬಗ್ಗೆ ಚರ್ಚಿಸಲಾಗಿದೆ.

## ಬ್ಲಾಕ್– 4 ರ ಪರಿಚಯ

ಈ ಬ್ಲಾಕ್‌ನಲ್ಲಿ ನಾಲ್ಕು ಘಟಕಗಳಿದ್ದು, ಘಟಕ ಹದಿಮೂರರಲ್ಲಿ ಭಾರತದಲ್ಲಿ ಅಭಿವೃದ್ಧಿ ಯೋಜನೆ ಬಗ್ಗೆ ಚರ್ಚಿಸಲಾಗಿದೆ. ಘಟಕ ಹದಿನಾಲ್ಕರಲ್ಲಿ ಯೋಜನಾ ಯಂತ್ರ ಹಾಗೂ ಪ್ರಕ್ರಿಯೆಯ ವಿವಿಧ ಹಂತಗಳು, ರಾಷ್ಟ್ರ, ರಾಜ್ಯ ಹಾಗೂ ಸ್ಥಳೀಯ ಮಟ್ಟದಲ್ಲಿ ಅನುಷ್ಠಾನ ಮಾಡುವ ಬಗ್ಗೆ ತಿಳಿಸಲಾಗಿದೆ. ಘಟಕ ಹದಿನೈದರಲ್ಲಿ ಅನುಷ್ಠಾನ ಮಾಡುವಲ್ಲಿ ಎದುರಾಗುವ ಸಮಸ್ಯೆಗಳು ಮತ್ತು ಯೋಜನಾ ನಿರ್ವಹಣೆಯ ಬಗ್ಗೆ ವಿವರ ನೀಡಲಾಗಿದೆ. ಘಟಕ ಹದಿನಾರರಲ್ಲಿ ಯೋಜನೆಯ ಆಡಳಿತದಲ್ಲಿ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳ ಪರಿಣಾಮಗಳನ್ನು ಚರ್ಚಿಸಲಾಗಿದೆ.

## ಬ್ಲಾಕ್– 5 ರ ಪರಿಚಯ

ಈ ಬ್ಲಾಕ್ ನಾಲ್ಕು ಘಟಕಗಳನ್ನು ಹೊಂದಿದ್ದು, ಘಟಕ ಹದಿನೇಳರಲ್ಲಿ ಸಂಘಟನಾ ಸಮಸ್ಯೆಗಳು ಹಾಗೂ ಅಭಿವೃದ್ಧಿ ಆಡಳಿತದಲ್ಲಿ ಸಂಘಟನಾ ತತ್ವಗಳು ಮತ್ತು ಪದ್ಧತಿಗಳನ್ನು ವಿವರಿಸಲಾಗಿದೆ. ಘಟಕ ಹದಿನೆಂಟರಲ್ಲಿ ಅಭಿವೃದ್ಧಿ ಆಡಳಿತದಲ್ಲಿ ಸ್ಥಳೀಯ ಸರ್ಕಾರಗಳು ಮತ್ತು ವಿಶೇಷ ಉದ್ದೇಶಿತ ಸಂಘಟನೆಗಳ ಪಾತ್ರವನ್ನು ಚರ್ಚಿಸಲಾಗಿದೆ. ಘಟಕ ಹತ್ತೊಂಭತ್ತರಲ್ಲಿ ಅಭಿವೃದ್ಧಿ ಆಡಳಿತದಲ್ಲಿ ನಾಗರೀಕ ಸಮಾಜ ಮತ್ತು ಸರ್ಕಾರೇತರ ಸಂಘಟನೆಗಳ ಪಾತ್ರದ ಬಗ್ಗೆ ತಿಳಿಸಲಾಗಿದೆ.. ಘಟಕ ಇಪ್ಪತ್ತರಲ್ಲಿ ಅಭಿವೃದ್ಧಿ ಹಣಕಾಸು ಆಡಳಿತ, ಸಾಂಪ್ರದಾಯಿಕ ಹಣಕಾಸು ಆಡಳಿತ ಮತ್ತು ಅಭಿವೃದ್ಧಿಗೆ ಅನುಗುಣವಾಗಿ ಮಾಡಿಕೊಳ್ಳಬಹುದಾದ ಬದಲಾವಣೆಗಳ ಬಗ್ಗೆ ವಿವರಿಸಲಾಗಿದೆ.

## ಬ್ಲಾಕ್– 6 ರ ಪರಿಚಯ

ಈ ಬ್ಲಾಕ್‌ನಲ್ಲಿ ನಾಲ್ಕು ಘಟಕಗಳಿದ್ದು, ಘಟಕ ಇಪ್ಪತ್ತೊಂದರಲ್ಲಿ ಪ್ರಾದೇಶಿಕ ಅಭಿವೃದ್ಧಿ ಆಡಳಿತ ಹಾಗೂ ಪ್ರಾಂತೀಯ ಯೋಜನೆ ಮತ್ತು ಅದರ ವ್ಯಾಪ್ತಿ, ಅರ್ಥ ಹಾಗೂ ವಿಧಗಳ ಬಗ್ಗೆ ಚರ್ಚಿಸಲಾಗಿದೆ. ಘಟಕ ಇಪ್ಪತ್ತೆರಡರಲ್ಲಿ ಜಲಾನಯನ ಅಥವಾ ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿ ಆಡಳಿತದ ಬಗ್ಗೆ ಚರ್ಚಿಸಲಾಗಿದೆ. ಘಟಕ ಇಪ್ಪತ್ಮೂರರಲ್ಲಿ ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ ಆಡಳಿತದ ಬಗ್ಗೆ ಚರ್ಚಿಸಲಾಗಿದೆ ಹಾಗೂ ಸಂವಿಧಾನದ ಎಪ್ಪತ್ಮೂರರ ಉಲ್ಲೇಖವೂ ಸಹ ಇದೆ. ಘಟಕ ಇಪ್ಪತ್ತನಾಲ್ಕರಲ್ಲಿ ನಗರಾಭಿವೃದ್ಧಿ ಆಡಳಿತದ ಬಗ್ಗೆ ವಿವರ ನೀಡಲಾಗಿದೆ.

## ಬ್ಲಾಕ್– 7 ರ ಪರಿಚಯ

ಈ ಬ್ಲಾಕ್ ನಾಲ್ಕು ಘಟಕಗಳನ್ನು ಹೊಂದಿದೆ. ಘಟಕ ಇಪ್ಪತ್ತೈದು ಕೈಗಾರಿಕಾ ಅಭಿವೃದ್ಧಿ ಆಡಳಿತದ ಬಗ್ಗೆ ವಿವರ ನೀಡುತ್ತದೆ. ಘಟಕ ಇಪ್ಪತ್ತಾರು ವಿಜ್ಞಾನ ಮತ್ತು ತಾಂತ್ರಿಕ ಅಭಿವೃದ್ಧಿ ಆಡಳಿತದ ಬಗ್ಗೆ ವಿವರವಾಗಿ ಪರಿಚಯಿಸಲಾಗಿದೆ. ಘಟಕ ಇಪ್ಪತ್ತೇಳರಲ್ಲಿ ಬುಡಕಟ್ಟು ಅಭಿವೃದ್ಧಿ ಆಡಳಿತ ಅದಕ್ಕೋಸ್ಕರ ಭಾರತ ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ ತಿಳಿಸಲಾಗಿದೆ. ಘಟಕ ಇಪ್ಪತ್ತೆಂಟರಲ್ಲಿ ಮಹಿಳಾ ಅಭಿವೃದ್ಧಿ ಆಡಳಿತ ಮಹಿಳಾ ಸಬಲೀಕರಣ ಭಾರತ ಸರ್ಕಾರ ಮಹಿಳೆಯರನ್ನು ಸಬಲರನ್ನಾಗಿ ಮಾಡಲು ಕೈಗೊಂಡಿರುವ ಕ್ರಮದ ಬಗ್ಗೆ ಸಂಪೂರ್ಣ ವಿವರವನ್ನು ನೀಡಲಾಗಿದೆ.

**ಜಗದೀಶ್ ಬಾಬು ಹೆಚ್. ಕೆ.**
ಅಧ್ಯಕ್ಷರು
ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ ಮೈಸೂರು – 6

# ಘಟಕ – 1 : ಅಭಿವೃದ್ಧಿ ಆಡಳಿತ : ಪರಿಕಲ್ಪನೆ, ಅರ್ಥ ಮತ್ತು ಪ್ರಾಮುಖ್ಯತೆ

<u>ರಚನೆ</u>


1.0 ಉದ್ದೇಶಗಳು

1.1 ಪರಿಚಯ

1.2 ಅಭಿವೃದ್ಧಿ ಆಡಳಿತ ಪರಿಕಲ್ಪನೆ

1.2.1 ಈ ಪರಿಕಲ್ಪನೆಯ ಉದಯ : ಸಂದರ್ಭಗಳು ಮತ್ತು ಕಾರಣಗಳು

1.2.2 ಬೆಳವಣಿಗೆಯಲ್ಲಿನ ಹಂತಗಳು

1.3 ಅಭಿವೃದ್ಧಿ ಆಡಳಿತ ಪರಿಕಲ್ಪನೆಯ ಅರ್ಥ

1.3.1 ಆರಂಭಿಕ ಗ್ರಹಿಕೆಗಳು

1.3.2. ನಂತರದ ವಿವರಣೆಗಳು ಮತ್ತು ನಿರ್ದಿಷ್ಟ ಹೇಳಿಕೆಗಳು

1.3.3 ಸಂಕ್ಷಿಪ್ತವಾಗಿ ಹೇಳಬೇಕಾದರೆ

1.4 ಅಭಿವೃದ್ಧಿ ಆಡಳಿತದ ಪ್ರಾಮುಖ್ಯತೆ

ನಿಮ್ಮ ಪ್ರಗತಿ ಪರಿಶೀಲನಾ ಪ್ರಶ್ನೆಗಳು

1.5 ಸಾರಾಂಶ

1.6 ಕಠಿಣ ಪದಗಳು

1.7 ಕೆಲವು ಉಪಯುಕ್ತ ಗ್ರಂಥಗಳು

1.8 ನಿಮ್ಮ ಪ್ರಗತಿ ಪರಿಶೀಲನಾ ಪ್ರಶ್ನೆಗಳಿಗೆ ಉತ್ತರಗಳು

## 1.0 ಗುರಿಗಳು

ಈ ಘಟಕ 1ರ ಗುರಿಗಳು ಕೆಳಕಂಡಂತಿವೆ :

- ಈ ಅಭಿವೃದ್ಧಿ ಆಡಳಿತ ಪರಿಕಲ್ಪನೆಯನ್ನು ಪರಿಚಯ ಮಾಡಿಕೊಳ್ಳುವುದು.
- ಅದರ ಉದಯದ ಸಂದರ್ಭ ಮತ್ತು ಕಾರಣಗಳನ್ನು ತಿಳಿಯುವುದು.
- ಅದರ ಬೆಳವಣಿಗೆಯ ಹಂತಗಳನ್ನು ಗಮನಿಸುವುದು.
- ಅಭಿವೃದ್ಧಿ ಆಡಳಿತದ ಅರ್ಥವನ್ನು ತಿಳಿಯುವುದು.
- ಅಭಿವೃದ್ಧಿ ಆಡಳಿತದ ಪ್ರಾಮುಖ್ಯತೆಯನ್ನು ಅರಿಯುವುದು.

## 1.1 ಪರಿಚಯ

ಇಪ್ಪತ್ತನೇ ಶತಮಾನದ ವಿಶ್ವ ಚರಿತ್ರೆಯಲ್ಲಿ ಎರಡನೇ ಮಹಾ ಯುದ್ಧದ ಪಾತ್ರ ಬಹಳ ದೊಡ್ಡದ್ದು. ಈ ಮಹಾಯುದ್ಧದ ನಂತರ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿಗಳು ಬಹುಪಾಲು ಅಂತ್ಯಗೊಂಡವು. ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಖಂಡಗಳಲ್ಲಿ ಅನೇಕ ಹೊಸ ಸ್ವತಂತ್ರ ರಾಷ್ಟ್ರಗಳು ಅಸ್ತಿತ್ವಕ್ಕೆ ಬಂದವು. ಭಾರತವೂ ಇದರಲ್ಲಿ ಒಂದು. ಸ್ವಾತಂತ್ರ್ಯ ಬಂದ ಮೇಲೆ ರಾಷ್ಟ್ರದ ಅಭಿವೃದ್ಧೀ ಈ ದೇಶಗಳ ಪ್ರಥಮ ಗುರಿಯಾಯಿತು. ಅಭಿವೃದ್ಧಿ ತರುವುದು ಯಾರು ಮತ್ತು ಹೇಗೆ ಎಂಬ ಪ್ರಶ್ನೆಗಳು ಪ್ರಮುಖ ಪ್ರಶ್ನೆಗಳಾದವು. ಈ ನವರಾಷ್ಟ್ರಗಳಲ್ಲಿನ ರಾಜ್ಯ ಮತ್ತು ಸರ್ಕಾರಗಳು ಅಭಿವೃದ್ಧಿಯ ಜವಾಬ್ದಾರಿಯನ್ನು ಹೊತ್ತವು. ಇದರಿಂದ ರಾಷ್ಟ್ರಾಭಿವೃದ್ಧಿಗಾಗಿ ಸಾರ್ವಜನಿಕ ಆಡಳಿತವನ್ನು ಅವಲಂಭಿಸಿದವು. ಸಾರ್ವಜನಿಕ ಆಡಳಿತವು ಈ ರಾಷ್ಟ್ರಗಳಲ್ಲಿ ಅಭಿವೃದ್ಧಿಯಲ್ಲಿ ತೊಡಗಿದವು. ಅಭಿವೃದ್ಧಿ ಆಡಳಿತವು ಈ ಸಂದರ್ಭದಲ್ಲಿ ಉದ್ಭವವಾಯಿತು.

ಅಭಿವೃದ್ಧಿ ಆಡಳಿತ ಹಿಂದೆ ಒಂದು ಮೂಲ ತತ್ವವಿದೆ. ಅದೆಂದರೆ ಸರ್ವಾಂಗೀಣ ರಾಷ್ಟ್ರಾಭಿವೃದ್ಧಿಗಾಗಿ ಸೃಜನಾತ್ಮಕ ಯೋಜನೆಗಳನ್ನು ಮಾಡಿ ತ್ವರಿತಗತಿಯಲ್ಲಿ ಅವುಗಳ ಪರಿಣಾಮಕಾರಿ ಕಾರ್ಯಗತಗೊಳಿಸುವ ಕೆಲಸದಲ್ಲಿ ಸಾರ್ವಜನಿಕ ಆಡಳಿತವು ಕ್ರಿಯಾಶೀಲ ಪಾತ್ರವಹಿಸಬೇಕೆಂಬುದಾಗಿತ್ತು. ಅಭಿವೃದ್ಧಿಕಾರ್ಯಗಳಲ್ಲಿ ಆಡಳಿತವು ಭಾಗವಹಿಸಲಾರಂಭಿಸಿದ ಮೇಲೆ ಸಾರ್ವಜನಿಕ ಆಡಳಿತ "ಶಾಸ್ತ್ರ" ಮತ್ತು "ಪ್ರಕ್ರಿಯೆ"ಗಳೆರಡರ ಗುಣ ಮತ್ತು ಬಣ್ಣಗಳೆರಡೂ ಬದಲಾವಣೆಗೆ ಒಳಗಾದವು.

ಈ ರಾಷ್ಟ್ರಗಳಲ್ಲಿನ ಸಾರ್ವಜನಿಕ ಆಡಳಿತ 'ಪ್ರಕ್ರಿಯೆಯು' ಸ್ವಾತಂತ್ರಕ್ಕೆ ಮುನ್ನ ಯಥಾಸ್ಥಿತಿ ಪ್ರತಿಪಾದಕವಾದ, ಕಾನೂನು ಮತ್ತು ವ್ಯವಸ್ಥೆಗಳಿಗೆ ಬದ್ಧವಾದ ವಸಾಹತುಶಾಹಿ ಆಡಳಿತವಾಗಿತ್ತು. ಅಭಿವೃದ್ಧಿ ಕಾರ್ಯದಲ್ಲಿ ತೊಡಗಿದ ಮೇಲೆ ಸಾಮಾಜಿಕ ಪರಿವರ್ತನೆ, ಬದಲಾವಣೆ ಮತ್ತು ರಾಷ್ಟ್ರಭಿವೃದ್ಧಿಗಳಿಗೆ ಬದ್ಧ ಆಡಳಿತ ಪ್ರಕ್ರಿಯೆಯಾಯಿತು. ವಸಾಹತುಶಾಹಿಯ ಕೈಗೊಂಬೆಯಂತಿದ್ದ ಇದರ ನೌಕರಶಾಹಿಯು ಕ್ರಮೇಣ ಅಭಿವೃದ್ಧಿ ಪ್ರಕ್ರಿಯೆಗೆ ಸೇವೆ ಸಲ್ಲಿಸುವ ತಾಂತ್ರಿಕ ಸೇವೆಗಳು, ಪ್ರಜಾಪ್ರಭುತ್ವ ಸಂಸ್ಥೆಗಳ ಮತ್ತು ನೌಕರಶಾಹಿಯ ಒಂದು ಸಮಿಶ್ರ ತಂಡವಾಗಿ ಪರಿವರ್ತನೆಯಾಗಲು ಆರಂಭವಾಯಿತು.

ಒಂದು 'ಶಾಸ್ತ್ರ'ವಾಗಿ ಸಾರ್ವಜನಿಕ ಆಡಳಿತವು ಎರಡನೇ ಮಹಾಯುದ್ಧದ ಅಂತ್ಯವಾದ ಕಾಲದಲ್ಲಿ ತನ್ನ ಅಸ್ತಿತ್ವದ ಬಗೆಗಿನ ಒಂದು ಸಂದಿಗ್ಧ ತೊಳಲಾಟದಲ್ಲಿ ತೊಡಗಿತ್ತು. ಪಶ್ಚಿಮ ರಾಷ್ಟ್ರಗಳಲ್ಲೇ ಹುಟ್ಟು ಬೆಳೆದಿದ್ದ ಈ ಶಾಸ್ತ್ರಕ್ಕೆ

ಒಂದು ವಿಶ್ವ ಸ್ವರೂಪ ಇಲ್ಲದಾಗಿತ್ತು. ಆ ಕಾಲದಲ್ಲಿ ಪ್ರಭಾವಕ್ಕೆ ಬಂದಿದ್ದ ನಿರ್ವಹಣಾ ಶಾಸ್ತ್ರದ ಸವಾರಿ ಇಂದಾಗಿ ಸಾರ್ವಜನಿಕ ಶಾಸ್ತ್ರವು "ಸಾಧನೆಗಳ" ಪೂಜಾರಿಯಾಗಿತ್ತು. ಆ ಕಾಲದಲ್ಲಿ "ನೌಕರಶಾಹಿಯ ತಾಟಸ್ಥತೆ" ಸೂತ್ರವನ್ನು ಬಹುವಾಗಿ ಪ್ರತಿಪಾದಿಸುತ್ತಿದ್ದ ಸಾರ್ವಜನಿಕ ಆಡಳಿತಶಾಸ್ತ್ರವು ಒಂದು ಪಲಾಯನವಾದಿ ಮತ್ತು ಸಮಯ ಸಾಧಕಶಾಸ್ತ್ರವಾಗಿತ್ತು. ಒಟ್ಟಾರೆಯಾಗಿ, ಸಾರ್ವಜನಿಕ ಆಡಳಿತ ಶಾಸ್ತ್ರವು ಒಂದು ನಕಾರಾತ್ಮಕ ಸ್ವರೂಪ ಮತ್ತು ಅಸ್ತಿತ್ವದ ತೊಳಲಾಟವನ್ನು ಹೊಂದಿತ್ತು. ಬದಲಾವಣೆಗಾಗಿ ಮತ್ತು ಹೊಸತನಕ್ಕಾಗಿ ಹಾತೊರೆಯುತ್ತಿತ್ತು. ಈ ಸಂದರ್ಭದಲ್ಲಿ ಜನಿಸಿದ ಅಭಿವೃದ್ಧಿ ಆಡಳಿತ ಮಾರ್ಗವು ತನ್ನ "ಗುರಿ" ಮತ್ತು "ಮೌಲ್ಯ"ಗಳ ಮೇಲಿನ ಒತ್ತಿನಿಂದಾಗಿ ಸಾರ್ವಜನಿಕ ಆಡಳಿತಕ್ಕೆ ಒಂದು ಸಕಾರಾತ್ಮಕ ಅಸ್ತಿತ್ವವನ್ನು ಒದಗಿಸಲಾರಂಬಿಸಿತು. ಅಭಿವೃದ್ಧಿ ಆಡಳಿತದ ಪಶ್ಚಿಮೇತರ ಅಂದರೆ ಮೂರನೇ ವಿಶ್ವರಾಷ್ಟ್ರಗಳಲ್ಲಿನ ಭೌಗೋಳಿಕ ಅಸ್ತಿತ್ವವು ಸಾರ್ವಜನಿಕ ಆಡಳಿತಕ್ಕೆ ಒಂದು ವಿಶ್ವಸ್ವರೂಪ ಅಥವಾ ಜಾಗತಿಕ ರೂಪವನ್ನು ಪಡೆಯಲು ಸಹಾಯ ಮಾಡಿತು.

ಇದರಿಂದಾಗಿ, ಅಭಿವೃದ್ಧಿ ಆಡಳಿತದ ಬೆಳವಣಿಗೆಗೆ ಬೆಂಬಲ ಸಿಕ್ಕಿತು. ಅಭಿವೃದ್ಧಿ ಆಡಳಿತದ ಅಧ್ಯಯನಗಳು, ಸಂಶೋಧನೆಗಳು, ಸಾಹಿತ್ಯ ಮತ್ತು ಪಾಂಡಿತ್ಯಗಳು ವಿಶಾಲವಾಗಿ ಬೆಳೆದವು. ಸಾರ್ವಜನಿಕ ಆಡಳಿತಶಾಸ್ತ್ರದ ಒಂದು ಭಿನ್ನ ಉಪಮಾರ್ಗವಾಗಿ" ಆರಂಭಗೊಂಡ ಅಭಿವೃದ್ಧಿ ಆಡಳಿತವು, ಕ್ರಮೇಣ ಒಂದು "ಉಪಅಧ್ಯಯನವಾಗಿ" ಪರಿವರ್ತನೆ ಹೊಂದಿತು. ತನ್ನ ತನ್ಮಯತೆಯಾದ 'ಅಭಿವೃದ್ಧಿ' ಪ್ರಕ್ರಿಯೆ ಮತ್ತು ಪರಿಕಲ್ಪನೆಗಳ ವೈಶಾಲ್ಯತೆಯಿಂದಾಗಿ ಅಭಿವೃದ್ಧಿ ಆಡಳಿತವು ಮುಂದೆ ಬೆಳೆಯುತ್ತಾ ಸಾರ್ವಜನಿಕ ಆಡಳಿತಶಾಸ್ತ್ರದ ಗಡಿಯಾಚೆಗಿನ ಇತರ ಅಧ್ಯಯನಗಳ ಕಡೆಗೂ ಗಮನ ಹರಿಸಿ ಇವುಗಳನ್ನೆಲ್ಲಾ ಒಂದಾಗಿಸಬಹುದಾದ ಒಂದು "ಹಿರಿಯ-ಅಧ್ಯಯನ" ಮತ್ತು "ಬೃಹತ್-ಅಧ್ಯಯನ"ವಾಗಿ ಪರಿವರ್ತಿತವಾಗುವ ಸಾಧ್ಯತೆಗಳತ್ತಲೂ ಬೆಳೆಯಿತು.

ಈ ಹಿನ್ನೆಲೆಯಲ್ಲಿ ಇಂದು 'ಸಾರ್ವಜನಿಕ ಆಡಳಿತವನ್ನು' ಅಧ್ಯಯನ ಮಾಡುವ ನಿಮಗೆ ಮತ್ತು ನಮಗೆ ಅಭಿವೃದ್ಧಿ ಆಡಳಿತದ ಪರಿಚಯ ಮತ್ತು ಅಧ್ಯಯನ ಮಾಡುವ ಅವಶ್ಯಕತೆ ವಿಶೇಷವೂ ಮತ್ತು ಅಗಾದವು ಆಗಿದೆ. ಈ ಕಾರಣದಿಂದಾಗಿ ನಾವು ಈ ಪತ್ರಿಕೆ IV : ಅಭಿವೃದ್ಧಿ ಆಡಳಿತ (ಭಾರತಕ್ಕೆ ವಿಶೇಷವಾಗಿ ಸಂಬಂಧಿಸಿದಂತೆ)ವನ್ನು ಅಧ್ಯಯನ ಮಾಡುತ್ತೇವೆ. ಇದರಲ್ಲಿ ಅಭಿವೃದ್ಧಿ ಮತ್ತು ಆಡಳಿತಕ್ಕೆ ಸಂಬಂಧ ಪಟ್ಟ ಅನೇಕ ಅವಶ್ಯಕ ವಿಚಾರಗಳನ್ನು ಅಧ್ಯಯನ ಮಾಡುತ್ತೇವೆ.

ಈ ಪತ್ರಿಕೆಯ ಮೊದಲನೇ ಬ್ಲಾಕ್‌ನಲ್ಲಿ ಬರುವ ಪಾಠಗಳು ಅಭಿವೃದ್ಧಿ ಆಡಳಿತದ ಉಗಮ, ಪರಿಕಲ್ಪನೆಯ ಅರ್ಥ ಮತ್ತು ಪ್ರಾಮುಖ್ಯತೆ ಮತ್ತು ಅಭಿವದ್ಧಿ ಪರಿಕಲ್ಪನೆಯ ಅರ್ಥ ಮತ್ತು ಸಿದ್ಧಾಂತಗಳು ಹಾಗೂ ಅಭಿವೃದ್ಧಿ ಮತ್ತು ಆಡಳಿತಗಳ ನಡುವಿನ ಸಂಬಂಧವನ್ನು ಕುರಿತವುಗಳಾಗಿವೆ. ಎರಡನೇ ಬ್ಲಾಕಿನಲ್ಲಿ ಮತ್ತು ನಂತರದ ಬ್ಲಾಕ್‌ಗಳಲ್ಲಿ ಬರುವ ಪಾಠಗಳು ವಿಶೇಷವಾಗಿ ಭಾರತದ ಅಭಿವೃದ್ಧಿ ಆಡಳಿತಕ್ಕೆ ಸಂಬಂಧಿಸಿದೆ. ಎರಡನೆಯ ಬ್ಲಾಕ್‌ನಲ್ಲಿ ಅಭಿವೃದ್ಧಿ ಆಡಳಿತಕ್ಕೆ ಅದರ ಪರಿಸರ ದೊಡನಿರುವ ಕೊಟ್ಟುಕೊಳ್ಳುವ ದ್ವಿಮುಖವಾದ ಸಂಬಂಧಗಳ ಬಗ್ಗೆ ವಿಚಾರ ಮಾಡುತ್ತೇವೆ. ಮೂರನೇ ಬ್ಲಾಕ್‌ನಲ್ಲಿ ಅಭಿವೃದ್ಧಿ ಆಡಳಿತಕ್ಕೆ ರಾಷ್ಟ್ರದ ಆಡಳಿತ ವ್ಯವಸ್ಥೆಯ ಅಂದರೆ ಅದರ ನೌಕರಶಾಹಿಯ ಸೂಕ್ತಾಸೂಕ್ತತೆಯ ಬಗ್ಗೆ ಅಧ್ಯಯನ ಮಾಡುತ್ತೇವೆ. ನಾಲ್ಕನೆಯ ಬ್ಲಾಕ್‌ನಲ್ಲಿ ಭಾರತದಲ್ಲಿ ಅಭಿವೃದ್ಧಿ ಯೋಜನೆಗಳ ಸ್ವರೂಪ, ಪ್ರಕ್ರಿಯೆ ಮತ್ತು ವ್ಯವಸ್ಥೆಗಳನ್ನು ಅಧ್ಯಯನ ಮಾಡುತ್ತೇವೆ. ಬ್ಲಾಕ್ ಐದರಲ್ಲಿ ಬರುವ ಪಾಠಗಳು ಅಭಿವೃದ್ಧಿ ಆಡಳಿತಕ್ಕಾಗಿ ಬಳಸಿರುವ ವ್ಯವಸ್ಥೆಗಳು ಅಥವಾ ಸಂಘಟನೆಗಳು ಮತ್ತು ಹಣಕಾಸು ಆಡಳಿತದ ವಿಧವಿಧಾನಗಳನ್ನು ಕುರಿತದ್ದಾಗಿವೆ. ಕೊನೆಯದಾದ ಏಳು ಮತ್ತು ಎಂಟನೇ ಬ್ಲಾಕ್‌ಗಳಲ್ಲಿನ ಪಾಠಗಳು ಭಾರತದಲ್ಲಿ ಬೆಳೆದಿರುವ ವಿವಿಧತರಹದ, ಉದಾಹರಣೆಗೆ, ಪ್ರಾದೇಶಿಕ ಅಭಿವೃದ್ಧಿ ಆಡಳಿತ, ಗ್ರಾಮೀಣಾಭಿವೃದ್ಧಿ ಆಡಳಿತ, ನಗರಾಭಿವೃದ್ಧಿ ಆಡಳಿತ, ಕೈಗಾರಿಕಾಭಿವೃದ್ಧಿ ಆಡಳಿತ, ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿ ಆಡಳಿತ, ಗಿರಿಜನರಾಭಿವೃದ್ಧಿ ಆಡಳಿತ ಮತ್ತು ಮಹಿಳಾಭಿವೃದ್ಧಿ ಆಡಳಿತಗಳನ್ನು ಕುರಿತಾಗಿವೆ. ತಕ್ಷಣದಲ್ಲಿ ನಾವು ಮೊದಲನೇ ಬ್ಲಾಕಿನ ಅಭಿವೃದ್ಧಿ ಮತ್ತು ಅಭಿವೃದ್ಧಿ ಆಡಳಿತಗಳ ಪರಿಕಲ್ಪನೆ, ಉದಯ ಮತ್ತು ಸಂಬಂಧಗಳನ್ನು ಕುರಿತು ಅಧ್ಯಯನ ಮಾಡುತ್ತೇವೆ.

## 1.2 ಅಭಿವೃದ್ಧಿ ಆಡಳಿತ ಪರಿಕಲ್ಪನೆ

"ಅಭಿವೃದ್ಧಿ ಆಡಳಿತ" ಎಂಬ ಪದವನ್ನು ಮೊದಲು ಬಳಸಿದವರು. ಯು.ಎಲ್.ಗೋಸ್ವಾಮಿ ಎಂಬ ಭಾರತೀಯರು ಇವರು "ಭಾರತದಲ್ಲಿ ಅಭಿವೃದ್ಧಿ ಆಡಳಿತದ ರಚನೆ" ಎಂಬ ತಮ್ಮ ಒಂದು ಲೇಖನಲದಲಿ 1955ರಲ್ಲಿ ಇದನ್ನು ಬಳಸಿದರು. ಆದರೂ ಇವರನ್ನು ಅಭಿವೃದ್ಧಿ ಆಡಳಿತದ ಪಿತಾಮಹ ಎಂದು ಹೇಳಲು ಸಾಧ್ಯವಿಲ್ಲ. ತಮ್ಮ ಲೇಖನದಲ್ಲಿ ಇವರು ಈ ಪದವನ್ನು ಆ ಕಾಲದಲ್ಲಿ ವಿಕಸಿತಗೊಳ್ಳುತ್ತಿದ್ದ ಭಾರತದಲ್ಲಿನ ಗ್ರಾಮಣಾಭಿವೃದ್ಧಿ ಆಡಳಿತದ ಬಗ್ಗೆ ಮಾತ್ರ ಬರೆಯಲು ಸೀಮಿತವಾಗಿ ಬಳಸಿದ್ದರು.

ಸಾರ್ವಜನಿಕ ಆಡಳಿತದ 'ಒಂದು ಭಿನ್ನ ಮಾರ್ಗವಾಗಿ' ಅಥವಾ "ಉಪ ಅಧ್ಯಯನವಾಗಿ' ಅಭಿವೃದ್ಧಿ ಆಡಳಿತವನ್ನು ಪಾಶ್ಚಿಮಾತ್ಯ ಪಂಡಿತರು ಸ್ವತಂತ್ರವಾಗಿ ನಂತರದಲ್ಲಿ ಬೆಳೆಸಿದರು. ಜಾರ್ಜ್ ಎಫ್. ಗ್ಯಾಂಟ್ ಮತ್ತು ಡೊನಾಲ್ಡ್ ಸಿ.ಸ್ಟೋನ್ ಎಂಬುವರು ಈ ಅಭಿವೃದ್ಧಿ ಆಡಳಿತ ಎಂಬ ಪದವನ್ನು 1950 ರ ಕೊನೆಯ ವರ್ಷಗಳಲ್ಲಿ ಪಶ್ಚಿಮದಲ್ಲಿ ಬಳಸಲಾರಂಭಿಸಿದರು. ಆದರೂ ಇದನ್ನು ಸಾರ್ವಜನಿಕ ಆಡಳಿತದ ಒಂದು 'ಶಾಖೆ' ಎಂದು ಗುರುತಿಸಿದವರು ಎಡ್ವರ್ಡ್ ವೀಡ್ನರ್ ಎಂಬುವರು. ವೀಡ್ನರ್ ಅವರು 1962ರಲ್ಲಿ ಪ್ರಕಟಿಸಿದ "ಅಭಿವೃದ್ಧಿ ಆಡಳಿತ : ಸಂಶೋಧನೆಯ ಒಂದು ಹೊಸ ಮಾರ್ಗ" ಎಂಬ ತಮ್ಮ ಲೇಖನದಲ್ಲಿ ಇದನ್ನು ಗುರುತಿಸಿದರು. ಇದನ್ನು ಅನುಸರಿಸಿ 1960 ಮತ್ತು 1970ರ ದಶಕಗಳಲ್ಲಿ ಅಭಿವೃದ್ಧಿ ಆಡಳಿತ ವಿಷಯವು ಒಂದು ವಿಶಿಷ್ಠ ಅಧ್ಯಯನವಾಗಿ ಬೆಳೆಯಿತು.

### 1.2.1 ಈ ಪರಿಕಲ್ಪನೆಯ ಉದಯ : ಉದಯ ಸಂದರ್ಭಗಳು ಮತ್ತು ಕಾರಣಗಳು

ಎರಡನೇ ಮಹಾಯುದ್ಧದ ನಂತರದ ಕಾಲ ಮತ್ತು ಬೆಳವಣಿಗೆಗಳ ಸಂದರ್ಭದಲ್ಲಿ ಅಭಿವೃದ್ಧಿ ಆಡಳಿತದ ಉದಯವಾಯಿತು. 1939 ರಿಂದ 1945ರವರಗೆ ನಡೆದು ಅಂತ್ಯಗೊಂಡ ಈ ಯುದ್ಧದ ನಂತರದ ಕಾಲಧಲ್ಲಿ ಮಹತ್ವದ ಬೆಳವಣಿಗೆಗಳಾದವು. ಸಾಮ್ರಾಜ್ಯದಾಹದಿಂದ ಈ ಯುದ್ಧ ಆರಂಭಿಸಿದ್ದ ಜರ್ಮನಿ, ಇಟಲಿ, ಮತ್ತು ಜಪಾನ್ ದೇಶಗಳು ಸೋಲುಂಡವು. ಇವುಗಳು ಅನುಸರಿಸಿದ ಸರ್ವಾಧಿಕಾರಿ ತತ್ವಕ್ಕೂ ಸೋಲುಂಟಾಯಿತು. ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ತತ್ವಗಳ ಪ್ರಾಮುಖ್ಯತೆ ಹೆಚ್ಚಾಯಿತು. ಸಾಮ್ರಾಜ್ಯಶಾಹಿವಾದ ಮತ್ತು ವಸಾಹತುಶಾಹಿವಾದಗಳು ಕೊನೆಗೊಂಡವು. ಹೊಸ ರಾಷ್ಟ್ರಗಳು ಹುಟ್ಟಿದವು. ವಿಶ್ವಸಂಸ್ಥೆ ಸ್ಥಾಪನೆಯಾಯಿತು. ಯುದ್ಧದಲ್ಲಿ ಕುಸಿದಿದ್ದ ರಾಷ್ಟ್ರಗಳ ಪುನಃ ನಿರ್ಮಾಣ ಮತ್ತು ಹೊಸರಾಷ್ಟ್ರಗಳ ರಾಷ್ಟ್ರಿಯ ಅಭಿವೃದ್ಧಿ ಪ್ರಮುಖ ವಿಷಯಗಳಾದವು. ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳು, ನೀತಿಗಳು ಹೆಚ್ಚು ಬಳಕೆಗೆ ಬರಲಾರಂಬಿಸಿದವು. ಇವುಗಳನ್ನು ಬೆಂಬಲಿಸಲು ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ವಿದೇಶಿ ನೆರವು ಮತ್ತು ಸಹಾಯದ ಒಪ್ಪಂದಗಳು ಮತ್ತು ಕಾರ್ಯಕ್ರಮಗಳು ಜಾರಿಗೆ ಬಂದವು. ಅಂತರರಾಷ್ಟ್ರೀಯ ಸಂಬಂಧಗಳು, ವ್ಯಾಪಾರ, ಸಹಕಾರ ಮತ್ತು ಸ್ಪರ್ಧೆಗಳೂ ಹೆಚ್ಚಾದವು. ಇವುಗಳಲ್ಲಿ ಮೇಲ್ಗೈ ಸಾಧಿಸಲು ಪಶ್ಚಿಮದ ಬಂಡವಾಳಶಾಹಿ ರಾಷ್ಟ್ರಗಳ ಬಣ ಮತ್ತು ಪೂರ್ವದ ಕಮ್ಯುನಿಸ್ಟ್ ರಾಷ್ಟ್ರಗಳ ಬಣಗಳ ನಡುವೆ "ಶೀತಲ ಸಮರ"ವೆಂಬ ತೀವ್ರತರಹದ ಸೆಣಸಾಟ ಆರಂಭವಾಯಿತು.

<u>ಅಭಿವೃದ್ಧಿ ಆಡಳಿತದ ಉಗಮಕ್ಕೆ ಕೆಳಗಿನ ಕಾರಣಗಳನ್ನು ಗುರುತಿಸಬಹುದು</u>

1. ರಾಜ್ಯ ಕೈಗೊಂಡ ಯೋಜನೆಗಳು, ನೀತಿಗಳು, ಕಾರ್ಯಕ್ರಮಗಳು ಮತ್ತು ಘಟಕಗಳ ಮೂಲಕ ರಾಷ್ಟ್ರೀಯ ಅಭಿವೃದ್ಧಿಯನ್ನು ತರುವ ಹೊಸ ರಾಷ್ಟ್ರಗಳ ಆಸೆ ಮತ್ತು ಪ್ರಯತ್ನ.
2. ಸಾರ್ವಜನಿಕ ಆಡಳಿತವು ಈ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಬೇಕಾಗಿ ಬಂದದ್ದು.

3. ಅಭಿವೃದ್ಧಿ ಯೋಜನೆ, ನೀತಿ, ಕಾರ್ಯಕ್ರಮ, ವ್ಯವಸ್ಥೆಗಳನ್ನು ರೂಪಿಸಿ ನಿರ್ವಹಿಸುವಲ್ಲಿ ಹಾಗೂ ಅಭಿವೃದ್ಧಿಗೆ ಬೇಕಾದ ಮಾನವ, ಹಣಕಾಸು, ತಂತ್ರಜ್ಞಾನ ಮುಂತಾದ ವಿವಿಧ ಸಂಪನ್ಮೂಲವನ್ನು ಒದಗಿಸುವಲ್ಲಿ ಸಾರ್ವಜನಿಕ ಆಡಳಿತ ಎದುರಿಸಬೇಕಾಗಿ ಬಂದ ಸವಾಲುಗಳು.

4. ಈ ದಿಸೆಯಲ್ಲಿ ಸಹಾಯ ಮಾಡಲು ವಿಶ್ವ ಸಂಸ್ಥೆ ಮತ್ತಿತರ ಅಂತರರಾಷ್ಟ್ರೀಯ ಸಂಘಟನೆಗಳು ಕೈಗೊಂಡ ಅಭಿವೃದ್ಧಿ ಪೂರಕ ಕಾರ್ಯಕ್ರಮಗಳು.

5. ಸರ್ಕಾರ-ಸರ್ಕಾರಗಳ ನಡುವಿನ ದ್ವಿಪಕ್ಷೀಯ ಮತ್ತು ಬಹು ಪಕ್ಷೀಯವಾದ ವಿದೇಶೀ ನೆರವು ಕಾರ್ಯಕ್ರಮಗಳು

6. ಶೀತಲ ಸಮರದ ಕಾರಣ ತಮ್ಮ ತಮ್ಮ ಪ್ರಭಾವೀವಲಯದಲ್ಲಿನ ರಾಷ್ಟಗಳ ಅಭಿವೃದ್ಧಿಗೆ ಪಶ್ಚಿಮ ಮತ್ತು ಪೂರ್ವ ರಾಷ್ಟ್ರ ಬಣಗಳ ಸೆಣಸಾಟ.

7. ಸಾರ್ವಜನಿಕ ಆಡಳಿತದ ಅಧ್ಯಯನ ಕ್ಷೇತ್ರದಲ್ಲಿ ಆಡಳಿತಗಳ ಹೋಲಿಕಾತ್ಮಕ ಅಧ್ಯಯನದಲ್ಲಿ ತೊಡಗಿದ ಹೋಲಿಕಾತ್ಮಕ ಅಧ್ಯಯನ ಮಾರ್ಗ, ಚಳುವಳಿ ಮತ್ತು ಇನ್ನೂ ಹೆಚ್ಚಾಗಿ ಸಿ.ಎ.ಜಿ.(ಕಂಪ್ಯಾರಿಟವ್ ಅಡ್ಮಿಸಿಸ್ಟ್ರೇಷನ್ ಗ್ರೂಪ್) ಎಂಬ ಅಮೇರಿಕಾ ರಾಷ್ಟ್ರದ ಒಂದು ವಿದ್ವಾಂಸರ ಗುಂಪು ಮೂರನೇ ವಿಶ್ವರಾಷ್ಟ್ರಗಳಲ್ಲಿ ಅಂದರೆ ಹೊಸ ಮತ್ತು ಅಭಿವೃದ್ಧಿಯಲ್ಲಿ ತೊಡಗಿದ ರಾಷ್ಟ್ರಗಳಲ್ಲಿ ಮಾಡಿದ ಆಡಳಿತಗಳ ಅಧ್ಯಯನ. ವಸ್ತುಶಃ ಅಭಿವೃದ್ಧಿ ಆಡಳಿತ ಅಧ್ಯಯನವು ಈ ಹೋಲಿಕಾತ್ಮಕ ಸಾರ್ವಜನಿಕ ಆಡಳಿತದ ಒಂದು ಹೊಸ ಭಾಗವಾಗಿ ಬೆಳೆದು ಬಂದಿತು.

## 1.2.2. ಅದರ ಬೆಳವಣಿಗೆಯಲ್ಲಿನ ಹಂತಗಳು

ಅಭಿವೃದ್ಧಿ ಆಡಳಿತವು ತನ್ನ ಬೆಳವಣಿಗೆಯಲ್ಲಿ ಏರಿಳಿತಗಳನ್ನು ಕಂಡಿದೆ. ಅದು ಸವಾಲುಗಳ ಮಧ್ಯೆ ಬದುಕಿ ಉಳಿದಿದೆ ಮತ್ತು ಬೆಳೆದಿದೆ. ಅದು ಬೆಳೆದಿರುವ ಹಂತಗಳನ್ನು ಮೂರು ಹಂತಗಳಾಗಿ ವರ್ಗೀಕರಿಸಬಹುದು. ಅವುಗಳೆಂದರೆ, ಎ) ಆರಂಭದ ಹಂತ, ಬಿ) ಟೀಕೆ ಮತ್ತು ಸಂದಿಗ್ಧತೆಗಳ ಹಂತ ಮತ್ತು ಸಿ) ಮುಂದುವರಿದ ಮತ್ತು ಪ್ರೌಢಾವಸ್ಥೆಯ ಹಂತ.

### ಎ) ಆರಂಭದ ಹಂತ

ಆರಂಭದ 1960ರ ಮತ್ತು 1970ರ ದಶಕಗಳಲ್ಲಿ ಅಭಿವೃದ್ಧಿ ಆಡಳಿತವು ತ್ವರಿತಗತಿಯಲ್ಲಿ ಬೆಳೆಯಿತು. ಇದನ್ನು ಆರಂಭಿಸಿ ಪೋಷಿಸಿದವರಲ್ಲಿ ಎಡ್ವರ್ಡ್ ವೀಡ್ನರ್, ಸ್ವೆರ್ಡ್‌ಲೋವ್ ಎಫ್,ಡಬ್ಲ್ಯೂ.ರಿಗ್ಸ್, ಮಾಸ್ಟ್‌ಗೊಮೆರಿ, ಫೈನ್‌ಸಾಡ್, ಹೀಫೀ, ಲಾಪಲಂಬರ, ಬ್ರೈಬಾಂಟಿ, ಪನಾನ್‌ಡಿಕರ್, ಮಿಲ್ಟನ್ ಎಸ್ ಮ್ಯಾನ್, ಮುಂತಾದವರು ಪ್ರಮುಖರು.

ಇವರುಗಳಲ್ಲಿ ವೀಡ್ನರ್ ಅವರು ಇದನ್ನು ಒಂದು ಭಿನ್ನ ಅಧ್ಯಯನ ಮಾರ್ಗವೆಂದು ಮೊದಲು ಗುರುತಿಸಿ 1) ಟೆಕ್ನಿಕಲ್ ಅಸಿಸ್ಟೆನ್ಸ್ ಇನ್ ಪಬ್ಲಿಕ್ ಅಡ್ಮಿನಿಸ್ಟೇಷನ್ : ದಿ ಕೇಸ್ ಫಾರ್ ಡೆವೆಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್ (1964) ಮತ್ತು 2) ಡೆವಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್ ಇನ್ ಏಷ್ಯಾ (1970) ಎಂಬ ಪುಸ್ತಕಗಳನ್ನು ಬರೆದರು. ಇವರ ಜೊತೆಯಲ್ಲಿ ನಿಂತು ಸ್ವೆರ್ಡ್‌ಲೋವ್ ಮತ್ತು ರಿಗ್ಸ್‌ರವರುಗಳು ಅಭಿವೃದ್ಧಿ ಆಡಳಿತಕ್ಕೆ ಬುನಾದಿ ಹಾಕಿದರು. ಸ್ವೆರ್ಡ್‌ಲೋವ್ ಅವರು ಡೆವಲಪ್‌ಮೆಂಟ್ ಅಡ್ಮನಿಸ್ಟ್ರೇಷನ್ : ಕಾನ್ಸೆಪ್ಟ್ಸ್ ಅಂಡ್ ಪ್ರಾಬ್ಲಮ್ಸ್ (1963) ಎಂಬ ಗ್ರಂಥ ಬರೆದರು. ಎಫ್,ಡಬ್ಲ್ಯೂ.ರಿಗ್ಸ್ ರವರ 1) ಅಡ್ಮಿನಿಸ್ಟ್ರೇಷನ್ ಇನ್ ಡೆವೆಲಪಿಂಗ್ ಕಂಟ್ರೀಸ್ : ದಿ ಥಿಯರಿ ಆಫ್ ಪ್ರಿಸ್‌ಮ್ಯಾಟಿಕ್ ಸೊಸೈಟಿ (1964), 2) ದಿ ಐಡಿಯಾ ಆಫ್ ಡೆವೆಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್ : ಎ ಥಿಯರೆಟಿಕಲ್ ಎಸ್ಸೆ (1966), 3) ಫ್ರಾಂಟಿಯರ್ಸ್ ಆಫ್ ಡೆವೆಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್ (1970) ಮತ್ತು 4) ದಿ ಪ್ರಿಸ್ ಮ್ಯಾಟಿಕ್ ಸೊಸೈಟಿ ರಿವಿಸಿಟೆಡ್ (1973) ಎಂಬ ಪ್ರಮುಖ ಗ್ರಂಥಗಳನ್ನು ರಚಿಸಿದರು.

ಇವರಲ್ಲದೆ ಇನ್ನೂ ಅನೇಕ ಬರಹಗಾರರು, ಅಭಿವೃದ್ಧಿ ಆಡಳಿತದ ವಿವಿಧ ಮುಖಗಳ ಬೆಳವಣಿಗೆಗೆ ಕೊಡುಗೆಕೊಟ್ಟರು. ಫೈನ್‌ಸಾಡ್ ಎಂಬುವರು ಅಭಿವೃದ್ಧಿ ಆಡಳಿತದಲ್ಲಿ "ಮೌಲ್ಯಗಳ" ಪ್ರಾಮುಖ್ಯತೆ ಕುರಿತು ಬರೆದರು. ಹೀಫಿ ಎಂಬುವರು "ಅಭಿವೃದ್ಧಿ ಆಡಳಿತದಲ್ಲಿ ಭೌಗೋಳಿಕ ಅಂಶಗಳು" ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು. ಲಾಪಲಾಂಬರ, ಬ್ರೈಬಾಂಟ್ರೆ, ಪನಾಂಡಿಕರ್ ಮುಂತಾದವರು "ನೌಕರಶಾಹಿ ಅಂಶದ" ಮೇಲೆ ಬೆಳಕು ಚಲ್ಲಿದರು. ಕಾಟ್ಸ್, ಸ್ವೆರ್ಡ್‌ಲೋವ್ ಮತ್ತು ಥಾಂಪ್ಸನ್ ಮುಂತಾದವರು ಅಭಿವೃದ್ಧಿ ಆಡಳಿತದಲ್ಲಿ "ಆಡಳಿತ ನವೀಕರಣ"ದ ಅಗತ್ಯವನ್ನು ಒತ್ತಿ ಹೇಳಿದರು. ಎಸ್‌ಮ್ಯಾನ್ ಅವರು "ಸಾಂಸ್ಥಿಕ ರಚನೆಯ" ಪ್ರಾಮುಖ್ಯತೆಗೆ ಒತ್ತು ನೀಡಿದರು. ವಾಲ್ಡೋರವರು ಅಭಿವೃದ್ಧಿ ಆಡಳಿತದಲ್ಲಿನ "ಕಾಲ" ಮತ್ತು "ಜಾಗತಿಕ" ಅಂಶಗಳ ಬಗ್ಗೆ ಗಮನ ಸೆಳೆದರು. ಜಾರ್ಜ್ ಎಫ್.ಗ್ಯಾಂಟ್ ಎಂಬುವರು ಡೆವೆಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್ : ಕಾನ್ಸೆಪ್ಟ್ಸ್, ಗೋಲ್ಸ್ ಅಂಡ್ ಮೆಥಡ್ಸ್ (1979) ಎಂಬ ಪ್ರಥಮ ಸಮಗ್ರ ಪಠ್ಯಪುಸ್ತಕವನ್ನು ಹೊರತಂದರು.

**ಬಿ) ಟೀಕೆಗಳ ಮತ್ತು ಸಂದಿಗ್ಧತೆಗಳ ಹಂತ**

ಅಭಿವೃದ್ಧಿ ಆಡಳಿತ ಒಂದು ಅಧ್ಯಯನ ಕ್ಷೇತ್ರವಾಗಬೇಕೆಂಬ ಮೇಲಿನವರ ವಾದವನ್ನು ಒಪ್ಪದೇ ಅವರ ಮೇಲೆ ಟೀಕಾಪ್ರಹಾರಗಳೂ ನಡೆದವು. ಡಬ್ಲ್ಯೂ.ಉಡ್ ಎಂಬುವರು "ಡೆವೆಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್ : ಅನ್ ಅಬ್ಜೆಕ್ಷನ್ " ಎಂಬ ಲೇಖನವನ್ನು 1967ರಲ್ಲಿ ಬರೆದರು. ಬಿ.ಬಿ.ಷಾಫರ್ ಎಂಬುವರು 1969 "ಡೆಡ್‌ಲಾಕ್ ಇನ್ ಡೆವೆಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್" ಎಂಬ ಲೇಖನವನ್ನು ಬರೆದರು. ದ್ವಿವೇದಿ ಮತ್ತು ನೆಫ್ ಎಂಬುವರು "ಡೆವಲಪ್‌ಮೆಂಟ್ ಥಿಯರಿ ಅಂಡ್ ಅಡ್ಮಿನಿಸ್ಟ್ರೇಷನ್ : ಎ ಫನ್ಸ್ ಅರೌಂಟ್ ಅನ್ ಎಂಪ್ಟಿ ಲಾಟ್ ?" ಎಂಬ ಲೇಖನವನ್ನು 1981ರಲ್ಲಿ ಬರೆದರು. ಅಭಿವೃದ್ಧಿ ಆಡಳಿತದ ಪರಿಕಲ್ಪನೆಗಳು, ಗುರಿಗಳು, ಅಧ್ಯಯನ ವಿಧಾನಗಳು, ಮೂಲತರ್ಕಗಳು, ಪ್ರಕೃತಿ, ವ್ಯಾಪ್ತಿ ಮುಂತಾದವುಗಳೆಲ್ಲವೂ ಟೀಕಾ ಪ್ರಹಾರಗಳಿಗೆ ಒಳಗಾದವು.

ಇಪ್ಪತ್ತನೇ ಶತಮಾನದ ಕೊನೆಯ ಮತ್ತು ಇತ್ತೀಚಿನ ದಶಕಗಳಲ್ಲಿ ಅಭಿವೃದ್ಧಿ ಆಡಳಿತ ಪ್ರಕ್ರಿಯೆಯೂ ಸಂದಿಗ್ಧ ಸ್ಥಿತಿಗಳನ್ನು ಎದುರಿಸಬೇಕಾಗಿ ಬಂದಿದೆ. ಈ ದಶಕಗಳಲ್ಲಿ ಪ್ರಬುದ್ಧಮಾನ ಪಡೆದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಆರ್ಥಿಕ ಮತ್ತು ಅಭಿವೃದ್ಧಿ ನೀತಿಗಳೇ ಇದಕ್ಕೆ ಕಾರಣವಾಗಿದೆ. ಇವುಗಳು ಅಭಿವೃದ್ಧಿಯಲ್ಲಿ "ಮಾರುಕಟ್ಟೆಯ" ಪ್ರಾಮುಖ್ಯತೆಯನ್ನು ಮತ್ತು ಪಾತ್ರವನ್ನು ಎತ್ತಿ ಹಿಡಿದು ಜಾರಿಗೆ ತಂದಿವೆ. ಇದರಿಂದಾಗಿ ಅಭಿವೃದ್ಧಿಯಲ್ಲಿ 'ರಾಜ್ಯ' ಮತ್ತು 'ಸಾರ್ವಜನಿಕ ಆಡಳಿತಗಳ" ಪಾತ್ರವನ್ನು ಕುಗ್ಗಿಸಿ ಅಭಿವೃದ್ಧಿ ಆಡಳಿತದ ಬುನಾದಿಗೆ, ಪೆಟ್ಟು ಹಾಕುವ ಪ್ರಯತ್ನ ಮಾಡಿದೆ.

**ಸಿ) ಮುಂದುವರಿದ ಮತ್ತು ಪ್ರೌಢಾವಸ್ಥೆಯ ಹಂತ**

ಎಲ್ಲಾ ಟೀಕಾಪ್ರಹಾರಗಳ ಮತ್ತು ಸಂದಿಗ್ಧ ಸ್ಥಿತಿಗಳ ನಡುವೆಯೂ ಅಭಿವೃದ್ಧಿ ಆಡಳಿತ ಮುಂದುವರೆದಿದೆ. ಒಂದು ಅಧ್ಯಯನವಾಗಿ ಅಭಿವೃದ್ಧಿ ಆಡಳಿತವು ಎದುರಿಸಬೇಕಾಗಿ ಬಂದ ಸಮಸ್ಯೆಗಳು ಬಹುಪಾಲು ಕೇವಲ ಅಭಿವೃದ್ಧಿ ಆಡಳಿತ ಅಧ್ಯಯನದ ಸಮಸ್ಯೆ ಅಲ್ಲ. ಈ ತರಹದ ಸಮಸ್ಯೆಗಳು ಅಥವಾ ಪ್ರಶ್ನೆಗಳನ್ನು ಸಾರ್ವಜನಿಕ ಆಡಳಿತವೂ ಅಲ್ಲದೆ ಇತರ ಸಮಾಜಶಾಸ್ತ್ರಗಳೂ ಎದುರಿಸಬೇಕಾಗಿ ಬಂದು ನಿಭಾಯಿಸಿವೆ. ಅಲ್ಲದೆ ತನ್ನ ಗುರಿ ಮತ್ತು ಮೌಲ್ಯಗಳ ಮೇಲಿನ ಕೇಂದ್ರಿಕರಣದಿಂದಾಗಿ ಹಾಗೂ ತನ್ನ ಅಭಿವೃದ್ಧಿಯತ್ತ ಸಕಲವನ್ನೂ ಸಮನ್ವಯಗೊಳಿಸುವ ಪ್ರಕ್ರಿಯೆಯಿಂದಾಗಿ ಅಭಿವೃದ್ಧಿ ಆಡಳಿತ ಅಧ್ಯಯನವು ಇತರ ಸಮಾಜಶಾಸ್ತ್ರಗಳಗಿಂತಲೂ ಹೆಚ್ಚಿನ ಸಕಾರಾತ್ಮಕತೆಯನ್ನು ಮತ್ತು ಉಪಯುಕ್ತತೆಯನ್ನೂ ಪಡೆದುಕೊಂಡಿದೆ.

ಒಂದು ಪ್ರಕ್ರಿಯೆಯಾಗಿ ಅಭಿವೃದ್ಧಿ ಆಡಳಿತಕ್ಕೆ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳಿಂದ ಬಂದಿರುವ ಸವಾಲು ಮತ್ತು ಸಂದಿಗ್ಧತೆಗಳು ತಾತ್ಕಾಲಿಕವಾಗಿವೆ. ಅಭಿವೃದ್ಧಿಯಲ್ಲಿ ರಾಜ್ಯ ಮತ್ತು ಸಾರ್ವಜನಿಕ ಆಡಳಿತಗಳ ಪಾತ್ರವನ್ನು ಎಂದೂ ಸಂಪೂರ್ಣವಾಗಿ ಮಾರುಕಟ್ಟೆ ಅಥವಾ ಖಾಸಗಿ ವಲಯಕ್ಕೆ ವಹಿಸಲಾಗುವುದಿಲ್ಲ. ಅಭಿವೃದ್ಧಿಯ

ಪಥದಲ್ಲಿ ಸಮಾಜ ವಿಕಾಸಗೊಂಡತೆ ಅಭಿವೃದ್ಧಿಯ ಯಂತ್ರ ಸೂತ್ರ ಮತ್ತು ಸಾಧನಗಳಲ್ಲಿ ಹೊಂದಾಣಿಕೆಯಾಗುವುದು. ಪ್ರಾಕೃತಿಕವಾದುದು. ಈಗ ಆಗಿರುವುದೂ ಅಷ್ಟೇ. ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಈಗ ಸಾರ್ವಜನಿಕ ಆಡಳಿತವು ಮಾರುಕಟ್ಟೆ, ಖಾಸಗೀವಲಯ, ನಾಗರೀಕ ಸಮಾಜ, ಸರ್ಕಾರೇತರ ಸಂಘಸಂಸ್ಥೆಗಳು ಮತ್ತು ಸ್ಥಳೀಯ ಸರ್ಕಾರಗಳಿಗೆ ಹೆಚ್ಚು ಭಾಗವಹಿಸಲು ಅವಕಾಶ ಮಾಡಿಕೊಟ್ಟಿದೆ. ಎಸ್‌ಮ್ಯಾನ್ ಅವರು ಬರೆದಿರುವ "ದಿ ಮೆಚ್ಯೂರಿಂಗ್ ಆಫ್ ಡೆವೆಲಪ್‌ಮೆಂಟ್" ಲೇಖನವು ಅಭಿವೃದ್ಧಿ ಆಡಳಿತದ ಈ ವಿಕಾಸದ ಮುಖವನ್ನು ಪ್ರತಿಬಿಂಬಿಸುತ್ತದೆ.

ಈ ಹಿನ್ನೆಲೆಯಲ್ಲಿ ಗಮನಿಸಿದರೆ, ಅಭಿವೃದ್ಧಿ ಆಡಳಿತವು ಬೆಳೆದು ವಿಕಾಸಗೊಳ್ಳುತ್ತದೆ. ಅದರ ಸಾಹಿತ್ಯ ವೃದ್ಧಿಸುತ್ತಿದೆ. ವಿಶ್ವಸಂಸ್ಥೆ ಹಾಗೂ ಅದರ ಅಂಗ ಸಂಸ್ಥೆಗಳು, ಅಭಿವೃದ್ಧಿ, ಅಭಿವೃದ್ಧಿ ಆಡಳಿತ, ಸಾರ್ವಜನಿಕ ಆಡಳಿತ, ಅಭಿವೃದ್ಧಿ ಅರ್ಥಶಾಸ್ತ್ರ ಮುಂತಾದವುಗಳಿಗೆ ಮುಡುಪಾದ ಸಂಶೋಧನಾ ಮತ್ತು ಅಧ್ಯಯನ ಸಂಸ್ಥೆಗಳೂ, ಸಂಘಗಳೂ ಮತ್ತು ಜರ್ನಲ್‌ಗಳೂ ಈ ಸಾಹಿತ್ಯದ ಬೆಳವಣಿಗೆಯಲ್ಲಿ ತೊಡಗಿದೆ. ಅಭಿವೃದ್ಧಿ ಕಾರ್ಯ ಚಿಂತನೆಯಲ್ಲಿ ತೊಡಗಿರುವ ಸರ್ಕಾರಿ ಅಂಗಸಂಸ್ಥೆಗಳು ಮತ್ತು ಖಾಸಗೀ ಪಂಡಿತರು ಈ ಕಾರ್ಯದಲ್ಲಿ ಹಿಂದುಳಿದಿಲ್ಲ.

## 1.3 ಅಭಿವೃದ್ಧಿ ಆಡಳಿತ ಪರಿಕಲ್ಪನೆಯ ಅರ್ಥ

ಅಭಿವೃದ್ಧಿ ಆಡಳಿತದ ಅರ್ಥ ಏಕರೂಪವನ್ನು ಪಡೆದಿಲ್ಲ. ಇದು ವೈವಿಧ್ಯಮಯವೂ ಮತ್ತು ವಿವಾದಾತ್ಮಕವೂಆಗಿದೆ. 'ಅಭಿವೃದ್ಧಿ ಆಡಳಿತ' ಎಂಬ ಪದಗುಚ್ಛದಲ್ಲಿ ಪ್ರಮುಖವಾಗಿರುವ 'ಅಭಿವೃದ್ಧಿ' ಎಂಬ ಪರಿಕಲ್ಪನೆಯ ನಾವೀನ್ಯತೆ, ಅಸ್ಪಷ್ಟತೆ ಮತ್ತು ವಿಶಾಲತೆಗಳು ಹಾಗೂ ಅಭಿವೃದ್ಧಿಯನ್ನು ಆಡಳಿತ ಮಾಡುವಲ್ಲಿ ಇರುವ ವಿವಿಧ ಮತ್ತು ನವನವೀನ ಸವಾಲುಗಳೂ ಇದಕ್ಕೆ ಕಾರಣವಾಗಿವೆ. ಇವುಗಳನ್ನು ವಿವರಿಸಲು ಹೋದ ಪಂಡಿತರ ಪ್ರಯತ್ನಗಳು ಆನೆಯನ್ನು ವಿವರಿಸಲು ಹೋದ ಕುರುಡರ ಪ್ರಯತ್ನದಂತೆ ಭಾಗಶಃ ಪ್ರಯತ್ನಗಳಾಗಿವೆ. ಇದರಿಂದಾಗಿ ಅಭಿವೃದ್ಧಿ ಆಡಳಿತದ ವಿವರಣೆಗಳು ಮತ್ತು ಸ್ಪಷ್ಟನೆಗಳು ವಿಪರೀತ ಸಂಖ್ಯೆಯಲ್ಲಿವೆ. ತಾಳ್ಮೆಯಿಂದ ಇವುಗಳತ್ತ ನೋಡಿದರೆ ಅಭಿವೃದ್ಧಿ ಆಡಳಿತದ ಅರ್ಥದ ಮೇಲೆ ಸಾಕಷ್ಟು ಬೆಳಕು ಬಿದ್ದು ಅದರ ಅರಿವು ನಮಗೆ ಸಮೃದ್ಧಿಯಾಗಿ ಆಗುತ್ತದೆ. ಈ ಕಾರಣಕ್ಕಾಗಿ ಅಭಿವೃದ್ಧಿ ಆಡಳಿತದ ಬಗೆಗಿನ ಪ್ರಮುಖ ಆರಂಭಿಕ ಗ್ರಹಿಕೆಗಳು ಮತ್ತು ನಂತರದ ಗ್ರಹಿಕೆಗಳನ್ನು ತಿಳಿಯುವುದು ಅವಶ್ಯಕವಿದೆ.

### 1.3.1. ಆರಂಭಿಕ ಗ್ರಹಿಕೆಗಳು

#### ಎ) ಗ್ರಾಮೀಣ ಅಭಿವೃದ್ಧಿ ಆಡಳಿತ

ಅಭಿವೃದ್ಧಿ ಆಡಳಿತ ಎಂಬ ಪದಗುಚ್ಛವನ್ನು ಮೊದಲು 1955ರಲ್ಲಿ ಬಳಸಿದ ಗೋಸ್ವಾಮಿಯವರ ಅದನ್ನು ಅಂದು ಭಾರತದಲ್ಲಿದ್ದ ಗ್ರಾಮೀಣಾಭಿವೃದ್ಧಿ ಆಡಳಿತ ವ್ಯವಸ್ಥೆಯ ಅರ್ಥದಲ್ಲಿ ಬಳಸಿದ್ದರು.

#### ಬಿ) ಕಮ್ಯೂನಿಸ್ಟೇತರ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಸಾರ್ವಜನಿಕ ಆಡಳಿತ

ಎರಡನೇ ಮಹಾಯುದ್ಧದ ನಂತರ 1950ರ ದಶಕದಲ್ಲಿ ಅಮೇರಿಕಾದ ಸಕಾರ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಾಗಿ ನೀಡುತ್ತಿದ್ದ "ಸಾರ್ವಜನಿಕ ಆಡಳಿತದಲ್ಲಿ ತಾಂತ್ರಿಕ ಸಹಾಯ" ಕಾರ್ಯಕ್ರಮ ಹಾಗೂ ಹೋಲಿಕಾತ್ಮಕ ಸಾರ್ವಜನಿಕ ಆಡಳಿತ ಅಧ್ಯಯನದಲ್ಲಿ ತೊಡಗಿದ್ದ ಅಮೇರಿಕಾದ ಅಧಿಕಾರಿಗಳೂ ಮತ್ತು ತಜ್ಞರು 'ಅಭಿವೃದ್ಧಿ ಆಡಳಿತ' ವನ್ನು ಅಭಿವೃದ್ಧಿ ಹೊಂದುತ್ತಿರುವ ಕಮ್ಯೂನಿಸ್ಟೇತರ ರಾಷ್ಟ್ರಗಳ ಸಾರ್ವಜನಿಕ ಆಡಳಿತದ ಅರ್ಥದಲ್ಲಿ ಬಳಸುತ್ತಿದ್ದರು.

**ಸಿ) ಹೊಸ ರಾಷ್ಟ್ರಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ಆಡಳಿತ ವ್ಯವಸ್ಥೆ**

ಆರಂಭಕಾಲದ ಕೆಲವು ತಜ್ಞರು ಅಭಿವೃದ್ಧಿ ಆಡಳಿತವನ್ನು ಆಗತಾನೇ ಸ್ವತಂತ್ರ ಪಡೆದು ಅಭಿವೃದ್ಧಿಯಲ್ಲಿ ತೊಡಗಿರುವ ರಾಷ್ಟ್ರಗಳಲ್ಲಿ, ಈಗ ಇರುವ ಆಡಳಿತವಲ್ಲ. ಅದು ಈಗ ರೂಪಗೊಳ್ಳುತ್ತಿರುವ ಮತ್ತು ಮುಂಬರುವ ಆಡಳಿತ ವ್ಯವಸ್ಥೆ, ಎಂಬ ಅರ್ಥದಲ್ಲಿ ಬಳಸಿದರು.

**ಡಿ) ಅಭಿವೃದ್ಧಿ ಚಟುವಟಿಕೆಯೊಡನೆ ಸಂಬಂಧವಿರುವ ಆಡಳಿತ**

ಅಭಿವೃದ್ಧಿ ಆಡಳಿತವನ್ನು ಒಂದು ಭಿನ್ನ ಅಧ್ಯಯನ ಮಾರ್ಗವಾಗಿ ಗುರುತಿಸಿದ ಎಡ್ವರ್ಡ್ ವೀಡ್ನರ್ ಅವರು ಅರಂಭದಲ್ಲಿ ಅಭಿವೃದ್ಧಿ ಆಡಳಿತವೆಂದರೆ ಯಾವುದಾದರೂ ಅಭಿವೃದ್ಧಿ ಚಟುವಟಿಕೆಯೊಡನೆ ಸಂಬಂಧವಿರವ ಆಡಳಿತ ಎಂಬ ಅರ್ಥದಲ್ಲಿ ಬಳಸಿದರು.

ಅಭಿವೃದ್ಧಿ ಆಡಳಿತದ ಅರ್ಥ ನೀಡಲು ಮಾಡಿದ ಈ ಮೊದಲ ಪ್ರಯತ್ನಗಳು ಅಪೂರ್ಣವಾಗಿದ್ದವು. ಗೋಸ್ವಾಮಿಯವರ ಪ್ರಯತ್ನ ಗ್ರಾಮೀಣಾಭಿವೃದ್ಧಿಯೆಂಬ ಒಂದು ತರಹದ ಅಭಿವೃದ್ಧಿ ಆಡಳಿತಕ್ಕೆ ಮಾತ್ರ ಸೀಮಿತವಾಗಿತ್ತು. ಕಮ್ಯೂನಿಸ್ಟೇತರ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಆಡಳಿತಕ್ಕೆ ಮಾತ್ರ ಸೀಮಿತವಾಗಿದ್ದ ಎರಡನೇಯ ಬಳಕೆಯೂ ಹೀಗೆಯೇ ಒಂದು ಪ್ರದೇಶದ ಆಡಳಿತಕ್ಕೆ ಮಾತ್ರ ಸೀಮಿತವಾಗಿತ್ತು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಮುಂಬರುವ ಆಡಳಿತ ವ್ಯವಸ್ಥೆ ಎಂಬ ಅರ್ಥ ನೀಡಿದ ಮೂರನೇ ಪ್ರಯತ್ನವೂ 'ಆದರ್ಶದ' ಬೆನ್ನೇರಿ ಪ್ರಸ್ತುತವಾಗಿ ನಡೆಯುತ್ತಿದ್ದ ಅಭಿವೃದ್ಧಿ ಆಡಳಿತ ಚಟುವಟಿಕೆಗಳ ಕಡೆಗೆ ಬೆನ್ನು ತಿರುಗಿಸಿತ್ತು. ಯಾವುದಾದರೂ ಅಭಿವೃದ್ಧಿ ಚಟುವಟಿಕೆಗಳೊಡನಿರುವ ಆಡಳಿತವೆಂಬ ನಾಲ್ಕನೇ ವಿವರಣೆಯು ಅಸ್ಪಷ್ಟತೆ ಮತ್ತು ಅನಿರ್ದಿಷ್ಟತೆಗಳನ್ನು ಹೊಂದಿತ್ತು.

**1.3.2. ಇತರ ವಿವರಣೆಗಳು ಮತ್ತು ನಿರ್ದಿಷ್ಟ ಹೇಳಿಕೆಗಳು**

(ಎ) ಎಡ್ವರ್ಡ್ ವೀಡ್ನರ್ ಅವರು ಅಭಿವೃದ್ಧಿ ಆಡಳಿತವನ್ನು ನಿರ್ದಿಷ್ಟವಾಗಿ "ಒಂದು ಕಾರ್ಯಾಭಿಮುಖವಾದ ಮತ್ತು ಗುರಿ ಅಭಿಮುಖವಾದ ಆಡಳಿತ" ಎಂದು ಬಣ್ಣಿಸಿದ್ದಾರೆ. ಆದರೆ, ಮಿಲಟರಿ ಆಡಳಿತವೂ ಸೇರಿದಂತೆ ಪ್ರತೀ ಆಡಳಿತಕ್ಕೂ ತನ್ನದೇ ಆದ ಗುರಿ ಮತ್ತು ಕಾರ್ಯಗಳು ಇರುವುದರಿಂದ ಈ ವಿವರಣೆಯೂ ಅಸ್ಪಷ್ಟವಾಗಿದೆ.

(ಬಿ) ಹೊಸ ಮೌಲ್ಯಗಳನ್ನು ಹೊತ್ತುತರುವ ಒಂದು ಸಾಧನೆ ------------------ಅದು, ಆಧುನೀಕರಣ ಮತ್ತು ಕೈಗಾರೀಕೀಕರಣದ ದಾರಿ ಹಿಡಿದಿರುವ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಕೈಗೆತ್ತುಕೊಂಡಿರುವ ಅನೇಕ ಹೊಸ ಕಾರ್ಯಗಳನ್ನು ಹೊಂದಿದೆ" ಎಂದು ಹೇಳಿದ್ದಾರೆ. ಮೌಲ್ಯಗಳು ಮತ್ತು ಆರ್ಥಿಕಾಭಿವೃದ್ಧಿ ಕಾರ್ಯಗಳ ಮೇಲೆ ಒತ್ತು ನೀಡುವ ಈ ಹೇಳಿಕೆ ಅಭಿವೃದ್ಧಿ ಆಡಳಿತವನ್ನು ಅರ್ಥೈಸುವ ದಿಕ್ಕಿನಲ್ಲಿದೆ ಆದರೂ ಸೂಕ್ತವಾಗಿಲ್ಲ ?

(ಸಿ) ಮಾನ್ಟ್‌ಗೋಮೆರಿಯವರ ಪ್ರಕಾರ ಅಭಿವೃದ್ಧಿ ಆಡಳಿತವೆಂದರೆ "ಪ್ರಮುಖವಾಗಿ ಆರ್ಥಿಕ ಕ್ಷೇತ್ರದಲ್ಲಿ ಮತ್ತು ಸ್ವಲ್ಪ ಮಟ್ಟಿಗೆ ಸಾಮಾಜಿಕ ಸೇವೆಗಳ ಕ್ಷೇತ್ರದಲ್ಲಿ ---------ಸಾಮಾನ್ಯವಾಗಿ ರಾಜಕೀಯ ಸಾಮರ್ಥ್ಯವನ್ನು ವೃದ್ಧಿಸುವ ಪ್ರಯತ್ನಗಳಿಂದ ದೂರವಿರುವ ಯೋಜಿತ ಬದಲಾವಣೆಗಳನ್ನು ಕೈಗೊಳ್ಳುವ" ಆಡಳಿತವಾಗಿದೆ. ಈ ಹೇಳಿಕೆ ಯೋಜಿತ ಆರ್ಥಿಕ ಬದಲಾವಣೆಗಳಿಗಾಗಿ ಮಾಡುವ ಆಡಳಿತಕ್ಕೆ ಒತ್ತು ನೀಡುತ್ತದೆ. ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅಭಿವೃದ್ಧಿಗಳ ನಡುವೆ ಪರಸ್ಪರಕೊಂಡಿಯಿದೆ. ಅಭಿವೃದ್ಧಿ ಆಡಳಿತವು ಸಫಲವಾಗಲು ಇವುಗಳೆಲ್ಲದರ ನಡುವೆ ಹೊಂದಾಣಿಕೆಯುಳ್ಳ ಪ್ರಯತ್ನವಾಗಬೇಕಾಗುತ್ತದೆ.

(ಡಿ) ಪೈಪನಾಂಡಿಕರ್ ಅವರು ಮಾನ್ಟಗೋಮೆರಿಯವರಂತೆ "ಯೋಜಿತ ಬದಲಾವಣೆಗೆ" ಒತ್ತು ನೀಡುತ್ತಾ ಅಭಿವೃದ್ಧಿ ಆಡಳಿತವನ್ನು "ಸಮಗ್ರೀಕೃತ ಬದಲಾವಣೆ" ಎನ್ನುತ್ತಾರೆ. ಪನಾಂಡಿಕರ್ ಅವರ ಪ್ರಕಾರ "ಅಭಿವೃದ್ಧಿ ಆಡಳಿತವು ಮುಖ್ಯವಾಗಿ ಯೋಜಿತ ಬದಲಾವಣೆಯ ಆಡಳಿತವಾಗಿದೆ" ಮತ್ತು "ಅಭಿವೃದ್ಧಿ ಆಡಳಿತದ ಸಾರವೆಂದರೆ ಸಮನ್ವಯಗೊಳಿಸಿದ, ವ್ಯವಸ್ಥಿತವಾದ ಮತ್ತು ಸರಿಯಾಗಿ ನಿರ್ದೇಶಿಸಿದ ಸರ್ಕಾರೀ ಕಾರ್ಯಾಚರಣೆಯ ಮೂಲಕ ತರುವ ಸಮಗ್ರೀಕೃತ ಬದಲಾವಣೆಯಾಗಿದೆ". ಈ ಮೇಲಿನ ಯೋಜಿತ ಮತ್ತು ಸಮಗ್ರೀಕೃತ ಬದಲಾವಣೆಯ ಮೇಲಿನ ಒತ್ತು ಸ್ವಾಗತರ್ಹವಾಗಿದೆ. ಆದರೆ ಇಲ್ಲಿ ಗಮನಿಸಬೇಕಾದ ಒಂದು ಅಂಶವಿದೆ. ಎಲ್ಲಾ ಅಭಿವೃದ್ಧಿಯೂ ಯೋಜಿತವಾಗಿಯಾಗಲಿ ಮತ್ತು ಎಲ್ಲಾ ಯೋಜನೆಗಳೂ ಅಭಿವೃದ್ಧಿಗಾಗಿ ಮಾತ್ರವಾಗಲೀ ಇರುವುದಿಲ್ಲ. ಮಿಲಟರಿಯು ಧ್ವಂಸಕ್ಕಾಗಿಯೂ ಯೋಜನೆಯನ್ನು ಬಳಸುವುದು ನಮಗೆಲ್ಲಾ ಗೊತ್ತಿದೆ. ಆದರೂ, ಅಭಿವೃದ್ಧಿಯು ಮುಖ್ಯವಾಗಿ ಯೋಜಿತವಾಗಿರುತ್ತದೆ.

(ಇ) ಆದ್ದರಿಂದಲೇ ಡೊನಾಲ್ಡ್ ಸಿ. ಸ್ಟೋನ್ ಅವರ ಪ್ರಕಾರ "ಅಭಿವೃದ್ಧಿ ಆಡಳಿತವು-----ಪ್ರಾಥಮಿಕವಾಗಿ ನಾಲ್ಕು 'P' ಗಳನ್ನು ಅಂದರೆ Plans (ಯೋಜನೆಗಳು), Polivies (ನೀತಿಗಳು), Programmes (ಕಾರ್ಯಕ್ರಮಗಳು) ಮತ್ತು Projects (ಘಟಕಗಳನ್ನು) ರೂಪಿಸುವ ಮತ್ತು ಕಾರ್ಯಗತಗೊಳಿಸುವ ಕೆಲಸ ಮತ್ತು ಪ್ರಕ್ರಿಯೆಗಳಿಗೆ ಸಂಬಂಧಿಸಿದೆ.

(ಎಫ್) ಯೋಜಿತ ಅಭಿವೃದ್ಧಿಯನ್ನು ಆಡಳಿತವು ಅಭಿವೃದ್ಧಿ ಆಡಳಿತದ ಒಂದು ಮುಖವಾದರೆ ಇದರ ಸಂಬಂಧದಿಂದ ಮತ್ತು ಪರಿಣಾಮವಾಗಿ ಉದ್ಭವಿಸುವ ಇನ್ನೊಂದು ಮುಖ ಆಡಳಿತದ ಅಭಿವೃದ್ಧಿಯಾಗುತ್ತದೆ. ಕೆಲವು ತಜ್ಞರು ನೀಡುವ ಅಭಿವೃದ್ಧಿ ಆಡಳಿತದ ನಿರ್ದಿಷ್ಟ ಹೇಳಿಕೆಗಳು ಈ ಎರಡೂ ಮುಖಗಳನ್ನು ಗಣನೆಗೆ ತೆಗೆದುಕೊಳ್ಳುವ ಪ್ರಯತ್ನವಾಗಿದೆ. ಜಾರ್ಜ ಗ್ಯಾಂಟ್ ಅವರದು ಇಂಥಾ ಒಂದು ಪ್ರಯತ್ನವಾಗಿದೆ. ಇವರ ಪ್ರಕಾರ "ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯ ನಿರ್ದಿಷ್ಟ ಕಾರ್ಯಕ್ರಮಗಳನ್ನು ಉತ್ತೇಜಿಸಿ ಅನುವು ಮಾಡುವಂತೆ ಸಾರ್ವಜನಿಕ ಸಂಘಟನೆಗಳನ್ನು ವ್ಯವಸ್ಥಿತಿ ನಡೆಸುವತ್ತ ಗಮನಕೇಂದ್ರಿಕರಿಸಿರುವ ಸಾರ್ವಜನಿಕ ಆಡಳಿತದ ಭಾಗವೇ ಅಭಿವೃದ್ಧಿ ಆಡಳಿತವಾಗಿದೆ. ಅಭಿವೃದ್ಧಿ ಪ್ರಕ್ರಿಯೆಗೆ ನಿರ್ವಹಣಾ ನೈಪುಣ್ಯತೆಯನ್ನು ಹೊಂದಿಸಿ ಅಳವಡಿಸುವುದು ಇದರಲ್ಲಿ ಅಡಗಿದೆ" ಇದೇ ರೀತಿಯಲ್ಲಿ ಜೋಸ್ ಅಬುವಾ ಎಂಬುವರೂ, "ರಾಷ್ಟ್ರೀಯ ಅಭಿವೃದ್ಧಿಯ ಒಂದು ಪ್ರಮುಖ ಸಾಧನವಾಗಿ ನೌಕರಶಾಹಿಯ (ಆಡಳಿತ ಸೇವೆಯ) ವ್ಯವಸ್ಥೆ ಮತ್ತು ನಿರ್ವಹವಣೆಯನ್ನು ಉತ್ತಮಪಡಿಸುವ ಕಾರ್ಯಕ್ರಮಗಳೂ ಸೇರಿದಂತಾ ಅಭಿವೃದ್ಧಿ ಕಾರ್ಯ ಕ್ರಮಗಳ ಆಡಳಿತವೇ ಅಭಿವೃದ್ಧಿ ಆಡಳಿತವಾಗಿದೆ".

ಅಭಿವೃದ್ಧಿಗೋಸ್ಕರ ಆಡಳಿತದ ಅಭಿವೃದ್ಧಿಯ ಅವಶ್ಯಕತೆಯನ್ನು ಮನಗಂಡ ಅನೇಕ ಅಭಿವೃದ್ಧಿ ಆಡಳಿತದ ಪಂಡಿತರು ಆಡಳಿತಾಭಿವೃದ್ಧಿಯ ದೃಷ್ಟಿಯಿಂದಲೇ ಅಭಿವೃದ್ಧಿ ಆಡಳಿತವನ್ನು ವಿವರಿಸುವ ಪ್ರಯತ್ನಗಳನ್ನು ಮಾಡಿದ್ದಾರೆ. ಕಾಟ್ಸ್ ಮತ್ತು ಸ್ವೆರ್ಡ್‌ಲೋ ಅವರು ಅಭಿವೃದ್ಧಿ ಆಡಳಿತವನ್ನು "ಹೊಸತನ (ಅಥವಾ ನಾವಿನ್ಯತೆ) ತರುವ ಆಡಳಿತ" ಎಂದು ಬಣ್ಣಿಸಿದ್ದಾರೆ. ವಿಲಿಯಮ್ ಜೆ.ಸಿಫಿನ್ ಅವರು ಅಭಿವೃದ್ಧಿ ಆಡಳಿತವೆಂದರೆ ಒಂದು "ಅಭಿವೃದ್ಧಿಯ ವಿನ್ಯಾಸ ತಂತ್ರ" ಎನ್ನುತ್ತಾರೆ. ಮಿಲ್ಟನ್ ಜೆ ಎಸ್‌ಮ್ಯಾನ್ ಅವರು ಅಭಿವೃದ್ಧಿ ಆಡಳಿತವನ್ನು (ಆಡಳಿತ) "ಸಂಸ್ಥೆ ರಚಿಸುವ" ತಂತ್ರವೆಮದು ಕರೆಯುತ್ತಾರೆ. ಇವರುಗಳಲ್ಲದೆ ಎಫ್.ಡಬ್ಲೂ ರಿಗ್ಸ್ ಮತ್ತು ಆರ್.ಕೆ ಅರೋರಾ ಅವರೂ ಅಭಿವೃದ್ಧಿ ಆಡಳಿತದಲ್ಲಿ ಆಡಳಿತಾಭಿವೃದ್ಧಿಗೆ ಒತ್ತು ನೀಡುವವರಲ್ಲಿ ಪ್ರಮುಖರಾಗಿದ್ದಾರೆ.

### 1.3.3 ಸಂಕ್ಷಿಪ್ತವಾಗಿ ಹೇಳುವುದಾದರೆ

ಅಭಿವೃದ್ಧಿ ಆಡಳಿತದ ಅರ್ಥದ ಬಗೆಗಿನ ಮೇಲಿನ ವಿಮರ್ಶೆ ಮತ್ತು ನಿರ್ದಿಷ್ಟ ಹೇಳಿಕೆಗಳಲ್ಲಿ ಅಭಿವೃದ್ಧಿ ಆಡಳಿತದ ಬೇರೆ ಬೇರೆ ಅಂಶಗಳ ಮೇಲೆ ಒತ್ತು ನೀಡಿರುವುದನ್ನು ನಾವು ಕಾಣುತ್ತೇವೆ. ಒಟ್ಟಾರೆಯಾಗಿ ಇವುಗಳು ಅಭಿವೃದ್ಧಿ ಆಡಳಿತದ ಅರ್ಥವನ್ನು ಮತ್ತು ಅದರ ಬಗ್ಗೆ ನಮ್ಮ ಅರಿವನ್ನು ಸಂಪದ್ಭರಿತವಾಗಿಸುತ್ತವೆ.

ಆದರೂ, ಮೇಲಿನ ಅಭಿವೃದ್ಧಿ ಅರ್ಥದ ವಿವರಣೆ ಮತ್ತು ಹೇಳಿಕೆಗಳು ಸ್ವಲ್ಪ ಅಸಮರ್ಪಕವಾಗಿವೆ. ಇವುಗಳಲ್ಲಿ "ಅಭಿವೃದ್ಧಿ ಆಡಳಿತ' ಎಂಬ ಪದಗುಚ್ಛದಲ್ಲಿ ಅರ್ಥದಷ್ಟಾದರೂ ಪ್ರಮುಖವಾಗಿರುವ 'ಅಭಿವೃದ್ಧಿ' ಪದದ ವಿವರಣೆಯೇ ಇಲ್ಲವಾಗಿದೆ. ಇದಲ್ಲದೆ ಅಭಿವೃದ್ಧಿ ಆಡಳಿತದ ಬಗೆಗಿನ ನಿರ್ದಿಷ್ಟ ಹೇಳಿಕೆಗಳು ಅಪೂರ್ಣವಾಗಿದೆ. ರಿಗ್ಸ್‌ರವರು "ಅಭಿವೃದ್ಧಿ ಆಡಳಿತ" ಪದಗುಚ್ಛವು. "ಕೃಷಿ ಆಡಳಿತ" ರೂಪದ ಆಧಾರದ ಮೇಲೆ ಉದ್ಭವಿಸಿದೆ ಎನ್ನುತ್ತಾರೆ. ಆದರೆ "ಕೃಷಿ ಆಡಳಿತದಲ್ಲಿ" "ಕೃಷಿ' ಎಂಬ ಪದದ ಅರ್ಥ ಸ್ಪಷ್ಟವಾಗಿರುವಂತೆ "ಅಭಿವೃದ್ಧಿ ಆಡಳಿತ"ದಲ್ಲಿ 'ಅಭಿವೃದ್ಧಿ' ಎಂಬ ಪದದ ಅರ್ಥ ಸ್ಪಷ್ಟವಿಲ್ಲ. 'ಅಭಿವೃದ್ಧಿ' ಎಂಬ ಪದವು ಬಹಳ ವಿವಾದಾತ್ಮಕವಾಗಿದೆ. ಇದನ್ನು ವಿವರವಾಗಿ ನಾವು ಘಟಕ 3ರಲ್ಲಿ ಅಧ್ಯಯನ ಮಾಡುತ್ತೇವೆ. ಆದರೆ ಇಲ್ಲಿ ಅಭಿವೃದ್ಧಿ ಆಡಳಿತದ ಅರ್ಥ ಪೂರ್ಣವಾಗಿ ಮಾಡಿಕೊಳ್ಳಲು ಅಗತ್ಯವಾದಷ್ಟರ ಮಟ್ಟಿಗೆ 'ಅಭಿವೃದ್ಧಿ' ಪದದ ವಿವರಣೆಯನ್ನು ಇಲ್ಲಿ ಮಾಡುತ್ತೇವೆ.

'ಅಭಿವೃದ್ಧಿ' ಎಂದರೆ 'ಆಧುನೀಕರಣ', 'ಪಾಶ್ಚ್ಯಾತೀಕರಣ', ಮತ್ತು 'ಕೈಗಾರಿಕೀಕರಣ' ಎನ್ನುವ ಅರ್ಥದ ಆಧಾರದ ಮೇಲೆ, ಮೇಲಿನ ಬಹುತೇಕ ಅಭಿವೃದ್ಧಿ ಅರ್ಥದ ವಿವರಣೆಗಳು ಮತ್ತು ನಿರ್ದಿಷ್ಟ ಹೇಳಿಕೆಗಳು ಅವಲಂಬಿಸಿದೆ. ಆದರೆ, ಈ ತರಹದ "ಪಶ್ಚಿಮ–ಕೇಂದ್ರಿತವಾದ" ಅಂದರೆ ಪಶ್ಚಿಮದೇಶಗಳ ಮೂಗಿನ ನೇರಕ್ಕೆ ಇರುವ 'ಅಭಿವೃದ್ಧಿ'ಯ ವಿವರಣೆ ಆರಂಭದಿಂದಲೇ ಟೀಕೆಗೆ ಒಳಗಾಗಿವೆ. ಇಂದಿನ ದಿನಗಳಲ್ಲಿ ಅಭಿವೃದ್ಧಿಯನ್ನು ಮೊದಲಿಗಿಂತಲೂ ಹೆಚ್ಚು ವಿಶ್ವವ್ಯಾಪಿಯಾಗಿಯೂ ಮತ್ತು ಮಾನವೀಯವಾಗಿಯೂ ಇರುವ ಅರ್ಥದಲ್ಲಿ ವಿವರಿಸಲಾಗಿದೆ. ಮುಂದೆ ಇದರ ಬಗ್ಗೆ ಹೆಚ್ಚು ತಿಳಿಯುತ್ತೇವೆ. ಆದರೆ, ಇಲ್ಲಿ ಈ ಅರ್ಥದಲ್ಲೇ 'ಅಭಿವೃದ್ಧಿ ಆಡಳಿತ'ದಲ್ಲಿನ 'ಅಭಿವೃದ್ಧಿ'ಯನ್ನು ಅರಿಯಬೇಕಾಗಿದೆ. ಜೊತೆಗೆ, ಇಂದು ಅಭಿವೃದ್ಧಿ ಆಡಳಿತದ ಅರ್ಥ ನೀಡುವಾಗ ಅದರಲ್ಲಿನ ಒಂದು ಕಾಲಾಧಾರಿತ ಬದಲಾವಣೆಯನ್ನು ಗಮನಿಸಬೇಕಾಗುತ್ತದೆ. ಇದೆಂದರೆ ಆರಂಭದ ಕಾಲದಲ್ಲಿ ಅಭಿವೃದ್ಧಿಗಾಗಿ ಸರ್ಕಾರೀ ಕಾರ್ಯಾಚರಣೆಗೇ ಒತ್ತು ನೀಡುತ್ತಿದ್ದ ಅಭಿವೃದ್ಧಿ ಆಡಳಿತವು ಈಗ ಹಾಗೆ ಮಾಡುವುದಿಲ್ಲ.

ಆದ್ದರಿಂದ ಅಭಿವೃದ್ಧಿ ಆಡಳಿತದ ಅರ್ಥವಿವರಣೆ ಸಮಂಜಸವಾಗಿರಬೇಕಾದರೆ ಅದು, ಇಂದು, ಅಭಿವೃದ್ಧಿಯ ಅರ್ಥ, ಯೋಜನೆಗಳ ಬಗೆಗಿನ ಕಳಕಳಿ, ಸಮಗ್ರೀಕೃತ ಬದಲಾವಣೆಯ ಮೇಲಿನ ಒತ್ತು ಮತ್ತು ಆಡಳಿತಾಭಿವೃದ್ಧಿಯ ಅಂಶಗಳನ್ನು ಮತ್ತು ಅದರ ಪ್ರಕ್ರಿಯೆ ಮತ್ತು ಅಧ್ಯಯನದ ಎರಡು ರೂಪಗಳನ್ನು ಅಳವಡಿಸಿಕೊಂಡಿರಬೇಕು. ಈ ಎಲ್ಲಾ ಅಂಶಗಳನ್ನೂ ಗಮನದಲ್ಲಿರಿಸಿದ ಈ ಪಾಠದ ಲೇಖಕನ (ಅಂದರೆ ನನ್ನ) ಅಭಿವೃದ್ಧಿ ಆಡಳಿತದ ಅರ್ಥದ ಬಗೆಗಿನ ನಿರ್ದಿಷ್ಟ ಹೇಳಿಕೆಯು ಕೆಳಕಂಡಂತಿದೆ.

> ಅಭಿವೃದ್ಧಿ ಆಡಳಿತವೆಂದರೆ, ಮುಖ್ಯವಾಗಿ ರಾಜ್ಯ ನಿರ್ದೇಶಿತ, ಬಹುಪಾಲು ಯೋಜಿತ, ಆದರೂ ಕೇವಲ ಸರ್ಕಾರಿ ರೂಪವಲ್ಲದ ಸಾರ್ವಜನಿಕ ಕಾರ್ಯಾಚರಣೆಯ ಮೂಲಕ ಒಂದು ರಾಷ್ಟ್ರದ ಅಥವಾ ಸಮಾಜದ ಸರ್ವಾಂಗೀಣ ಅಭಿವೃದ್ಧಿಯ ಅಂದರೆ, ಈಗಿರುವುದಕ್ಕಿಂತ ಹೆಚ್ಚು ಮಾನವೀಯವು ಮತ್ತು ನ್ಯಾಯಯುತವೂ ಆದಂತಹ ಪರಿಸ್ಥಿತಿಯೆಡೆಗೆ ಸಮಗ್ರೀಕೃತ ಅಪೇಕ್ಷಣೀಯ ಮತ್ತು ನ್ಯಾಯಯುತ ಬದಲಾವಣೆಯ ನಿರ್ವಹಣೆಯನ್ನೂ ಮತ್ತು ಅದನ್ನು ಸುಗಮಗೊಳಿಸುವಂತಹ ಆಡಳಿತಾಭಿವೃದ್ಧಿಯನ್ನು ಕುರಿತು ಒಂದು ಸಾರ್ವಜನಿಕ ಪ್ರಕ್ರಿಯೆ ಮತ್ತು ಅಧ್ಯಯನ ಎರಡೂ ಆಗಿದೆ.

## 1.4 ಅಭಿವೃದ್ಧಿ ಆಡಳಿತದ ಪ್ರಾಮುಖ್ಯತೆ

ಅಭಿವೃದ್ಧಿ ಆಡಳಿತವು ಸೈದ್ಧಾಂತಿಕ ಮತ್ತು ವಾಸ್ತವಿಕ ಪ್ರಾಮುಖ್ಯತೆಗಳೆರಡನ್ನೂ ಹೊಂದಿದ ಒಂದು ಅಧ್ಯಯನವಾಗಿದೆ. ಸೈದ್ಧಾಂತಿಕವಾಗಿ, ಅದು ಸಾರ್ವಜನಿಕ ಆಡಳಿತಕ್ಕೆ ಒಂದು ಉತ್ತಮ ಸ್ಥಾನವನ್ನು ಕೊಡಿಸಿದೆ. ವಾಸ್ತವಿಕವಾಗಿ, ಅಥವಾ ವ್ಯವಹಾರಿಕವಾಗಿ ಅಭಿವೃದ್ಧಿ ಆಡಳಿತವು, ವಿಶೇಷವಾಗಿ ಮೂರನೇ ವಿಶ್ವರಾಷ್ಟ್ರಗಳಲ್ಲಿ ಅಭಿವೃದ್ಧಿ ನಿರ್ವಹಣೆಗೆ ಉಪಯುಕ್ತವಾದ ಮತ್ತು ಹೊಸ ವಿಫಲ ಜ್ಞಾನ ಮತ್ತು ಸಾಧನಗಳನ್ನು ಒದಗಿಸಿದೆ.

ಸೈದ್ಧಾಂತಿಕ ಪ್ರಾಮುಖ್ಯತೆ

ಎರಡನೇ ಮಹಾಯುದ್ಧದ ಅಂತ್ಯದಲ್ಲಿ ಸಾರ್ವಜನಿಕ ಆಡಳಿತವು ತನ್ನ ಅಸ್ತಿತ್ವದ ಸಂಧಿಗ್ಧತೆಯಲ್ಲಿ ತೊಳಲಾಡುತ್ತಿತ್ತು. ರಾಜ್ಯಶಾಸ್ತ್ರ ಮತ್ತು ನಿರ್ವಹಣೆ ಮುಂತಾದ ಇತರ ಪ್ರಭಾವೀ ಸಮಾಜಶಾಸ್ತ್ರಗಳ ಸೆಳೆತ ಮತ್ತು ಒತ್ತಡಗಳಿಗೆ ಅದು ಒಳಗಾಗಿತ್ತು. ನಡವಳಿಕಾಶಾಸ್ತ್ರಗಳ ಅಧ್ಯಯನ ವಿಧಾನಗಳೊಡನೆ ಅದು ಆಗತಾನೇ ಬೆಳೆಸಿಕೊಂಡಿದ್ದ ಪ್ರೇಮ ಪ್ರಕರಣವು ಸಾರ್ವಜನಿಕ ಆಡಳಿತವನ್ನು ಒಂದು ಮೌಲ್ಯ ಮುಕ್ತ ಅಧ್ಯಯನವನ್ನಾಗಿಸುವುದರ ಜೊತೆಗೆ ಒಂದು ಸಾಮಾಜಿಕವಾಗಿ ಬೇಜವಾಬ್ದಾರಿಯುಳ್ಳ ಅಧ್ಯಯನವನ್ನಾಗಿಸಿತ್ತು.

ಇಂತಹ ಸಂದರ್ಭದಲ್ಲಿ ಅಭಿವೃದ್ಧಿ ಆಡಳಿತವು ಬೆಳೆದು ಬಂದಿತು. ಅದು ಸಾರ್ವಜನಿಕ ಆಡಳಿತದ ಸೈದ್ಧಾಂತಿಕ ಸುಧಾರಣೆಗೆ ಅನೇಕ ಕೊಡುಗೆಗಳನ್ನು ಕೊಟ್ಟಿತು.

1. ಅಭಿವೃದ್ಧಿ ಆಡಳಿತ ತಂದ 'ಅಭಿವೃದ್ಧಿ'ಯ ಮೇಲಿನ ಗಮನ ಕೇಂದ್ರೀಕರಣವು ಸಾರ್ವಜನಿಕ ಆಡಳಿತ ಸಾಮಾಜಿಕ ಪ್ರಸ್ತುತತೆ ಮತ್ತು ಅಸ್ತಿತ್ವಗಳನ್ನು ವೃದ್ಧಿಸಿತು.

2. ಅಭಿವೃದ್ಧಿಯ ಬಗ್ಗೆ ಅಭಿವೃದ್ಧಿ ಆಡಳಿತದ ಸಾಧನಾತ್ಮಕ ಮತ್ತು ತಾಂತ್ರಿಕ ದೃಷ್ಟಿಕೋನಗಳು ಸಾರ್ವಜನಿಕ ಆಡಳಿತವನ್ನು ಅದರ ಮೇಲೆ ಸವಾರಿ ಮಾಡುತ್ತಿದ್ದ 'ಸಂಪ್ರದಾಯವಾದಿ ಅಥವಾ ಬದಲಾವಣೆ ವಿರೋಧಿಯಾದ' ಮತ್ತು 'ಕ್ರಾಂತಿಕಾರಿ ಅಥವಾ ತೀವ್ರತರ ಬದಲಾವಣೆ ಪರವಾದ' ರಾಜಕೀಯಗಳೆರಡರಿಂದಲೂ ಬಿಡುಗಡೆ ಮಾಡಿತು.

3. ಸಾರ್ವಜನಿಕ ಆಡಳಿತದಲ್ಲಿ ಅಂದು ಪ್ರಭಾವಿಯಾಗಿದ್ದ ನಿರ್ವಹಣಾಶಾಸ್ತ್ರದ ಕೇವಲ ಕಾರ್ಯೋಪಾಯ (ಉದಾಹರಣೆಗೆ, ದಕ್ಷತೆ ಮತ್ತು ಮಿತವ್ಯಯ) ಕಳಕಳಿ ಹಾಗು ಯಥಾಸ್ಥಿತಿವಾದಿಯಾದ ಭಂಗಿಗಳಿಂದ ಮುಕ್ತಿಗೊಳಿಸಿ ಸಾರ್ವಜನಿಕ ಆಡಳಿತಕ್ಕೆ ಅಭಿವೃದ್ಧಿ ಆಡಳಿತವು ಅಭಿವೃದ್ಧಿ 'ಗುರಿ' ಮತ್ತು 'ಸಾಮಾಜಿಕ ಬದಲಾವಣೆ'ಗಳಂತಃ ಉದ್ಧಾತ್ತ ಧ್ಯೇಯಗಳನ್ನು ಒದಗಿಸಿತು.

4. ಅಭಿವೃದ್ಧಿ ಆಡಳಿತದ ಮೂರನೇ ವಿಶ್ವ ರಾಷ್ಟ್ರಗಳ ಮೇಲಿನ ಹೆಚ್ಚಿನ ಗಮನದಿಂದಾಗಿ ಅದು ಸಾರ್ವಜನಿಕ ಆಡಳಿತದ ಅಧ್ಯಯನಕ್ಕೆ ಒಂದು ಜಾಗತಿಕವಾದ ನೆಲೆಯನ್ನು ಒದಗಿಸಿತು. ಆದ್ದರಿಂದಲೇ ಅಭಿವೃದ್ಧಿ ಆಡಳಿತದ ಆರಂಭಿಕ ಬೆಳವಣಿಗೆಗೆ ಕಾರ್ಯಕರ್ತರಾದ ವೀಡ್ನರ್, ಎಸ್‌ಮ್ಯಾಸ್ ಮತ್ತು ವಾಲ್ಡೋರವರು ಅಭಿವೃದ್ಧಿ ಆಡಳಿತದಲ್ಲಿ ಜಾಗತಿಕ ಸಾರ್ವಜನಿಕದ ಒಂದು ಸಾಧ್ಯತೆಯನ್ನು ಕಂಡಿದ್ದರು.

5. ಸಾರ್ವಜನಿಕ ಆಡಳಿತದೊಳಗಿನ ಇತರ ಅಧ್ಯಯನ ಮಾರ್ಗಗಳಿಗೆ ಅಭಿವೃದ್ಧಿ ಆಡಳಿತ ಮಾರ್ಗವು ಒಂದು ಸಂಗಮಸ್ಥಾನವನ್ನು ಒದಗಿಸಿತು. ಇಂತಹ ಅಧ್ಯಯನ ಮಾರ್ಗಗಳಾದ ನೌಕರಶಾಹಿ ಮಾರ್ಗ, ನಿರ್ವಹಣಾ ವಿಜ್ಞಾನ ಮಾರ್ಗ, ಸಂಘಟನಾ ವಿಶ್ಲೇಷಣಾ ವಿಜ್ಞಾನ ಮಾರ್ಗ, ನೀತಿ ವಿಜ್ಞಾನ ವಿಧಾನ ಮತ್ತಿತರ ಮಾರ್ಗಗಳಿಗೆ ಅಭಿವೃದ್ಧಿ ಆಡಳಿತವು ಉನ್ನತವಾದ 'ಅಭಿವೃದ್ಧಿ' ಎಂಬ ಗುರಿ ಮತ್ತು ಸಮ್ಮಿಲನಗೊಳ್ಳುವ ಅವಕಾಶಗಳನ್ನು ಒದಗಿಸಿತು.

6. ಅಭಿವೃದ್ಧಿ ಆಡಳಿತ ಸಾಮಾಜಿಕ ಪ್ರಸ್ತುತತೆ, ಸಮಗ್ರೀಕೃತ ಮಾರ್ಗ ಮತ್ತು ಜಾಗತಿಕ ಕಳಕಳಿಗಳು ಒಂದು ಅಧ್ಯಯನ ವಿಷಯವಾಗಿ ಅಭಿವೃದ್ಧಿ ಆಡಳಿತದ ಅಂತಸ್ತಿನ ಬಗ್ಗೆ ಪ್ರಗತಿಪರ ಪ್ರಶ್ನೆಗಳನ್ನು ಎತ್ತಲು ಅವಕಾಶ ಮಾಡಿವೆ. ಅಭಿವೃದ್ಧಿ ಆಡಳಿತವು ಸಾರ್ವಜನಿಕ ಆಡಳಿತದ "ಉಪ–ಅಧ್ಯಯನ ವಿಷಯವೆ" ಅಥವಾ ಸಾರ್ವಜನಿಕ ಆಡಳಿತ ಮತ್ತಿತ್ತರ ಸಾಮಾಜಿಕ ವಿಜ್ಞಾನಗಳನ್ನೂ ಮೀರಿದ ಒಂದು "ಘನ – ಅಧ್ಯಯನ ವಿಷಯವೇ" ಎಂಬ ಪ್ರಶ್ನೆಗಳು ಉದ್ಭವವಾಗಿರುವುದನ್ನು ನೆನಪಿಸಿಕೊಳ್ಳಬಹುದು.

## <u>ವಾಸ್ತವಿಕ ಅಥವಾ ವ್ಯವಹಾರಿಕ ಪ್ರಾಮುಖ್ಯತೆ</u>

ಅಭಿವೃದ್ಧಿ ಆಡಳಿತ ಅಧ್ಯಯನ ಮಾರ್ಗವು ಅಭಿವೃದ್ಧಿಯಲ್ಲಿ ತೊಡಗಿರುವ ರಾಷ್ಟ್ರಗಳಿಗೆ, ಆದರಲ್ಲೂ ಮೂರನೇ ವಿಶ್ವರಾಷ್ಟ್ರಗಳಿಗೆ ವಿಶೇಷವಾಗಿ ಹೆಚ್ಚು ವ್ಯವಹಾರಿಕ ಪ್ರಸ್ತುತತೆಯನ್ನು ಹೊಂದಿದೆ.

1. ಅಭಿವೃದ್ಧಿ ಆಡಳಿತದ 'ಅಭಿವೃದ್ಧಿ'ಯ ಮೇಲಿನ ಗಮನ ಕೇಂದ್ರೀಕರಣದಿಂದಾಗಿ ರಾಷ್ಟ್ರಾಭಿವೃದ್ಧಿ ಮತ್ತು ನ್ಯಾಯಯುತ ಸಾಮಾಜಿಕ ಬದಲಾವಣೆಗಳ ಬಯಕೆ ಮತ್ತು ಪ್ರಕ್ರಿಯೆಗಳು ಬಲಗೊಂಡಿದೆ.

2. ಅಭಿವೃದ್ಧಿ ಆಡಳಿತದ ಅಭಿವೃದ್ಧಿ ನಿರ್ವಹಣಾ ಕಳಕಳಿಯಿಂದಾಗಿ ಅಭಿವೃದ್ಧಿ ಯೋಜನೆ, ಅಭಿವೃದ್ಧಿ ಘಟಕಗಳ ನಿರ್ವಹಣೆ, ಅಭಿವೃದ್ಧಿ ನೀತಿಗಳ ಸ್ಪಷ್ಟನೆ, ಅಭಿವೃದ್ಧಿ ಸಂಘಟನೆಯ ರಚನೆ ಮತ್ತು ಸಾಮಾನ್ಯವಾಗಿ ಅಭಿವೃದ್ಧಿ ಆಡಳಿತಗಳಲ್ಲಿ ದಕ್ಷತೆ, ಮಿತವ್ಯಯ ಮತ್ತು ಪರಿಣಾಮಕಾರತೆಗಳು ಉತ್ತಮಗೊಂಡಿವೆ.

<u>ನಿಮ್ಮ ಪ್ರಗತಿ ಪರಿಶೀಲನೆ</u>

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. ಅಭಿವೃದ್ಧಿ ಆಡಳಿತದ ಉದ್ಭವವನ್ನು ವಿವರಿಸಿ ಹಾಗೂ ಅವರ ಉದ್ಭವದ ಹಿಂದಿನ ಪರಿಸ್ಥಿತಿಗಳನ್ನು ಮತ್ತು ಕಾರಣಗಳನ್ನು ವಿಚಾರ ಮಾಡಿ**

---------------------------------------------------------------------------

---------------------------------------------------------------------------

---------------------------------------------------------------------------

---------------------------------------------------------------------------

---------------------------------------------------------------------------

**2. ಅಭಿವೃದ್ಧಿ ಆಡಳಿತದ ವಿಕಾಸದ ಹಂತಗಳನ್ನು ಗುರುತಿಸಿ**

---------------------------------------------------------------------------

---------------------------------------------------------------------------

---------------------------------------------------------------------------

---------------------------------------------------------------------------

**3. ಅಭಿವೃದ್ಧಿ ಆಡಳಿತದ ಅರ್ಥವನ್ನು ವಿವರಿಸಿ**

---------------------------------------------------------------------------

---------------------------------------------------------------------------

---------------------------------------------------------------------------

---------------------------------------------------------------------------

4. ಅಭಿವೃದ್ಧಿ ಆಡಳಿತದ ಪ್ರಾಮುಖ್ಯತೆಯನ್ನು ತಿಳಿಸಿ

---

---

---

---

## 1.5 ಸಾರಾಂಶ

ಸಾರ್ವಜನಿಕ ಆಡಳಿತದ ಒಂದು ಪರಿಕಲ್ಪನೆ ಮತ್ತು ಹೊಸಮಾರ್ಗವಾಗಿ ಅಭಿವೃದ್ಧಿ ಆಡಳಿತವು ಎರಡನೇ ಮಹಾಯುದ್ಧದ ಕಾಲದಲ್ಲಿ ಉದ್ಭವಿಸಿತು. ಗೋಸ್ವಾಮಿ ಎಂಬ ಭಾರತೀಯರು ಈ ಪದವನ್ನು ಮೊದಲ ಬಾರಿ 1955ರಲ್ಲಿ ಬಳಸಿದರು. ಸಾರ್ವಜನಿಕ ಆಡಳಿತದ ಒಂದು ಹೊಸ ಅಧ್ಯಯನ ಮಾರ್ಗವಾಗಿ ಅಭಿವೃದ್ಧಿ ಆಡಳಿತವನ್ನು ವಿಡ್ನರ್ ಅವರು ಮೊದಲು ಗುರುತಿಸಿದರು.

ವಸಾಹತು ಶಾಹಿಯ ಅಂತ್ಯ, ಹೊಸ ರಾಷ್ಟ್ರಗಳ ಉದ್ಭವ, ರಾಜ್ಯಯೋಜಿತ ರಾಷ್ಟ್ರಾಭಿವೃದ್ಧಿ ಮತ್ತು ಅವುಗಳ ಒಲವು, ವಿದೇಶಿ ನೆರವಿನ ಪಾತ್ರ ಮತ್ತು ಶೀತಲ ಸಮರದ ಉದ್ಭವಗಳು ಅಭಿವೃದ್ಧಿ ಆಡಳಿತದ ಹಿಂದಿನ ಪರಿಸ್ಥಿತಿ ಮತ್ತು ಕಾರಣಗಳಾಗಿದ್ದವು. ಹೋಲಿಕಾತ್ಮಕ ಸಾರ್ವಜನಿಕ ಆಡಳಿತ ಚಳುವಳಿ ಮತ್ತು ಮೂರನೇ ವಿಶ್ವರಾಷ್ಟ್ರಗಳ ಸಾರ್ವಜನಿಕ ಆಡಳಿತದ ಅಧ್ಯಯನ ಮಾಡಲು ಅದರ ಪ್ರಯತ್ನಗಳು ಅಭಿವೃದ್ಧಿ ಆಡಳಿತದ ಜನರದಲ್ಲಿ ಸೂಲಗಿತ್ತಿಯ ಪಾತ್ರವನ್ನು ವಹಿಸಿದ್ದವು.

ಅಭಿವೃದ್ಧಿ ಆಡಳಿತವು ಆರಂಭಿಕ ಹಂತದ ಟೀಕೆಗಳು ಮತ್ತು ಸಂದಿಗ್ಧತೆಯ ಹಂತ ಮತ್ತು ಮುಂದುವರಿಕೆ ಹಾಗೂ ಪ್ರೌಢಾವಸ್ಥೆಯ ಹಂತಗಳೆಂಬ ಮೂರು ಹಂತಗಳಲ್ಲಿ ವಿಕಾಸಗೊಂಡಿತು. ಸಂಕ್ಷಿಪ್ತವಾಗಿ ಹೇಳುವುದಾದರೆ ಅದು ಅಭಿವೃದ್ಧಿ ಆಡಳಿತವನ್ನು ಮತ್ತು ಆಡಳಿತದ ಅಭಿವೃದ್ಧಿ ಎರಡರಲ್ಲೂ ಸಮಾನ ಆಸಕ್ತಿ ಮತ್ತು ಕಳಕಳಿಗಳನ್ನು ಹೊಂದಿದೆ. ಸಾರ್ವಜನಿಕ ಆಡಳಿತ ಕ್ಷೇತ್ರದಲ್ಲಿ ಅದು ಸೈದ್ಧಾಂತಿಕ ಹಾಗೂ ವ್ಯವಹಾರಿಕ ಪ್ರಾಮುಖ್ಯತೆಗಳೆರಡನ್ನು ಹೊಂದಿದೆ.

## 1.6 ಕಠಿಣ ಪದಗಳು

1. ಯುದ್ಧಾನಂತರ ಕಾಲ – 1939 ಮತ್ತು 1945ರ ನಡುವೆ ನಡೆದ ಎರಡನೇ ಮಹಾವಿಶ್ವಯುದ್ಧದ ನಂತರದ ಕಾಲ.
2. ಮೂರನೇ ವಿಶ್ವ ರಾಷ್ಟ್ರಗಳು – 1945ರ ನಂತರ ಸ್ವಾತಂತ್ರ್ಯ ಪಡೆದ (ಕಮ್ಯೂನಿಸ್ಟೇತರ) ರಾಷ್ಟ್ರಗಳು.
3. ಶೀತಲ ಸಮರ – ಯುದ್ಧಾ ನಂತರದ ಕಾಲದಲ್ಲಿ ಅಂತರ ರಾಷ್ಟ್ರೀಯ ವ್ಯಾಪಾರ ಮತ್ತು ಸಂಬಂಧಗಳ ಕ್ಷೇತ್ರದಲ್ಲಿ ತಮ್ಮ ಮೇಲುಗೈ ಸಾಧಿಸಲು ಪಶ್ಚಿಮದ ಬಂಡವಾಳಶಾಹಿ ರಾಷ್ಟ್ರಗಳೂ ಹಾಗೂ ಪೂರ್ವದ (ಯೂರೋಪಿನ) ಕಮ್ಯೂನಿಸ್ಟ್ ರಾಷ್ಟ್ರಗಳ ನಡವೆ ನಡೆದ ತೀವ್ರತರಹದ ಸೇಣಸಾಟ.



N 545 35

| | | |
|---|---|---|
| 4.ಹೋಲಿಕಾತ್ಮಕ ಸಾರ್ವಜನಿಕ ಆಡಳಿತ | – | ಪಶ್ಚಿಮ ರಾಷ್ಟ್ರಗಳ ಆಡಳಿತದ ಅಧ್ಯಯನಕ್ಕೆ ಸೀಮಿತವಾಗಿದ್ದ ಸಾರ್ವಜನಿಕ ಆಡಳಿತ ಅಧ್ಯಯನಕ್ಕೆ 1945ರ ನಂತರ ಒಂದು ಜಾಗತಿಕ ಸ್ಥಾನಮಾನ ತರಲು ವಿವಿಧ ಜಾಗತಿಕ ರಾಷ್ಟ್ರಗಳ ಸಾರ್ವಜನಿಕ ಆಡಳಿತವನ್ನು ತುಲನಾತ್ಮಕವಾಗಿ ಅಧ್ಯಯನ ಮಾಡಲು ತೊಡಗಿದ ಒಂದು ಅಧ್ಯಯನ ಮಾರ್ಗ. |
| 5. ಯೋಜಿತ ಬದಲಾವಣೆ | – | ರಾಜ್ಯ ಯೋಜಿತ ರಾಷ್ಟ್ರೀಯ ಅಥವಾ ಸಾಮುದಾಯಿಕ ಅಭಿವ್ಯಕ್ತ ನಡೆಯುವ ಬದಲಾವಣೆ. |
| 6. ಹೊಸತನ ತರುವ ಆಡಳಿತ | – | ಸಾರ್ವಜನಿಕ ಆಡಳಿತದ ವ್ಯವಸ್ಥೆ ಮತ್ತು ವಿಧಾನಗಳಲ್ಲಿ ಹೊಸದನ್ನು ತರುವ ಆಡಳಿತ |
| 7. ಸಮಗ್ರೀಕೃತ ಬದಲಾವಣೆ | – | ಸಮಾಜದ ಸರ್ವಕ್ಷೇತ್ರಗಳ ಅಭಿವೃದ್ಧಿ ಮತ್ತು ಬದಲಾವಣೆಗಳಲಿ ಹೊಂದಾಣಿಕೆ ತರುವುದು. |
| 8. ಆಡಳಿತಾಭಿವೃದ್ಧಿ | – | ಅಭಿವೃದ್ಧಿಯ ಆಡಳಿತದಲ್ಲಿ ತೊಡಗಿರುವ ಆಡಳಿತ ವ್ಯವಸ್ಥೆ ಮತ್ತು ನಿರ್ವಹಣೆಗಳಲ್ಲಿ ತರುವ ಅಭಿವೃದ್ಧಿ. |

## 1.7 ಕೆಲವು ಉಪಯುಕ್ತ ಪುಸ್ತಕಗಳು


| | | |
|---|---|---|
| **1.** ಎಂ. ಉಮಾಪತಿ | : | *ಡೆವೆಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್ ಟುಡೇ : ಸೂಪರ್ ಆರ್.ಸಬ್ ಡಿಸಿಪ್ಲಿನ್ ?* |
| 2. **ಮೋಹಿತ್ ಭಟ್ಟಾಚಾರ್ಯ** | : | *ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಅಂಡ್ ಪ್ಲ್ಯಾನಿಂಗ್* |
| 3. ಎಂ.ಪಿ. ಶರ್ಮ ಮತ್ತು ಬಿ.ಎಲ್. ಸಾಧನ | : | *ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಇನ್ ಥಿಯರಿ ಅಂಡ್ ಪ್ರ್ಯಾಟೀಸ್* |
| 4. ಎಂ. ಲಕ್ಷ್ಮೀಕಾಂತ್ | : | *ಪಬ್ಲಿಕ್ ಅಡ್ಮಿನಿಸ್ಟ್ರೇಷನ್ ಮೂರನೇ ಎಡಿಷನ್* |


## 1.8 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರ

**ನಿಮ್ಮ ಪ್ರಗತಿ ಪರಿಶೀಲನೆ – 1**

1. ನೋಡಿ ವಿಭಾಗ 1.2 ಮತ್ತು 1.2.1
2. ನೋಡಿ ವಿಭಾಗ 1.2.2.
3. ನೋಡಿ ವಿಭಾಗ 1.3 ಇಂದ 1.3.3 ವರೆಗೆ
4. ನೋಡಿ ವಿಭಾಗ 1.4

# ಘಟಕ – 2 : ಅಭಿವೃದ್ಧಿ ಆಡಳಿತದ ಸ್ವಭಾವ ಮತ್ತು ವ್ಯಾಪ್ತಿ

**ರಚನೆ**

2.0 ಉದ್ದೇಶಗಳು

2.1 ಪರಿಚಯ

2.2 ಅಭಿವೃದ್ಧಿ ಆಡಳಿತದ ಪ್ರಕೃತಿ (ಸ್ವಭಾವ)

2.2.1 ಒಂದು ಪ್ರಕ್ರಿಯೆಯಾಗಿ

2.2.2 ಒಂದು ಅಧ್ಯಯನವಾಗಿ

2.3 ಅಭಿವೃದ್ಧಿ ಆಡಳಿತದ ಲಕ್ಷಣಗಳು ಹಾಗೂ ಅಭಿವೃದ್ಧಿ ಆಡಳಿತ ಮತ್ತು ಸಾಮಾನ್ಯ ಸಾರ್ವಜನಿಕ ಆಡಳಿತದ ನಡುವಿನ ಭಿನ್ನತೆಗಳು ಅಥವಾ ವ್ಯತ್ಯಾಸಗಳು

2.4 ಅಭಿವೃದ್ಧಿ ಆಡಳಿತದ ವ್ಯಾಪ್ತಿ

2.4.1 ಪ್ರಾದೇಶಿಕ ವ್ಯಾಪ್ತಿ

2.4.2 ಕಳಕಳಿಗಳ ವ್ಯಾಪ್ತಿ

2.4.3 ಅಧ್ಯಯನ ವಿಧಾನಗಳ ವ್ಯಾಪ್ತಿ

2.5 ಸಾರಾಂಶ

2.6 ಕಠಿಣ ಪದಗಳು

2.7 ಕೆಲವು ಉಪಯುಕ್ತ ಪುಸ್ತಕಗಳು

2.8 ನಿಮ್ಮ ಪ್ರಗತಿ ಪರಿಶೀಲನಾ ಪ್ರಶ್ನೆಗಳಿಗೆ ಉತ್ತರಗಳು

## 2.0 ಉದ್ದೇಶಗಳು

- ಒಂದು ಪ್ರಕ್ರಿಯೆ ಮತ್ತು ಅಧ್ಯಯನವಾಗಿ ಅಭಿವೃದ್ಧಿ ಆಡಳಿತದ (ಸ್ವಭಾವ) ಪ್ರಕೃತಿಯನ್ನು ಅರಿಯುವುದು
- ಅಭಿವೃದ್ಧಿ ಆಡಳಿತದ ವಿಶಿಷ್ಟ ಲಕ್ಷಣಗಳನ್ನು ತಿಳಿಯುವುದು ಮತ್ತು
- ಅಭಿವೃದ್ಧಿ ಆಡಳಿತದ ವ್ಯಾಪ್ತಿಯನ್ನು ಗಮನಿಸುವುದು.

## 2.1 ಪರಿಚಯ

ಈ ಪ್ರಸ್ತುತ ಘಟಕವು ಅಭಿವೃದ್ಧಿ ಆಡಳಿತದ ಪ್ರಕೃತಿ ಲಕ್ಷಣ ಮತ್ತು ವ್ಯಾಪ್ತಿಗಳನ್ನು ಕುರಿತದ್ದಾಗಿದೆ. ಒಂದು ವಿಷಯದ ಪ್ರಕೃತಿಯು ಅದರ ವಿಶಿಷ್ಟ ಅಂಶಗಳು, ಲಕ್ಷಣಗಳು ಮತ್ತು ವರ್ಗವನ್ನು ತಿಳಿಸುತ್ತದೆ. ಅದರ ವ್ಯಾಪ್ತಿಯು ಒಂದು ವಿಷಯದ ಪ್ರಾದೇಶಿಕ ಮತ್ತು ಕಳಕಳಿಗಳ ಪರಿಮಿತಿಗಳು ಹಾಗೂ ಅದರ ಅಧ್ಯಯನ ವಿಧಾನಗಳ ಇತಿಮಿತಿಯನ್ನು ತಿಳಿಸುತ್ತದೆ.

ಅಭಿವೃದ್ಧಿ ಆಡಳಿತದ ವಿಷಯದಲ್ಲಿ, ಅದರಲ್ಲಿನ 'ಅಭಿವೃದ್ಧಿ' ಅಂಶದ ಘನತೆ, ಅಸ್ಪಷ್ಟತೆ, ಅನೇಕತೆ, ಚಂಚಲತೆ ಅಥವಾ ಚಲನಾತ್ಮಕತೆ ಮತ್ತು ಅದನ್ನು ಯಾವಾಗಲೂ ಸುತ್ತುವರಿದಿರುವ ಸೈದ್ಧಾಂತಿಕ ನಿಲುವುಗಳ ಮತ್ತು ಆಸಕ್ತಿಗಳ ನಡುವಿನ ತೀವ್ರತರವಾದ ಸ್ಪರ್ಧೆಗಳು, ತಿಕ್ಕಾಟಗಳು ಅಥವಾ ರಾಜಕೀಯಗಳು ಅಭಿವೃದ್ಧಿ ಆಡಳಿತ (ಪ್ರಕೃತಿ ಮತ್ತು ವ್ಯಾಪ್ತಿಯ ವಿಮರ್ಶೆಯನ್ನು ಜಟಿಲ, ಚಲನಾತ್ಮಕ ಹಾಗೂ ವಿವಾದಾತ್ಮಕವಾಗಿಸುತ್ತವೆ. ಆದರೂ, ಅಭಿವೃದ್ಧಿ ಆಡಳಿತದ ಪ್ರಕೃತಿ ಮತ್ತು ವ್ಯಾಪ್ತಿಯನ್ನು ತಿಳಿಯುವುದು ಅಸಾಧ್ಯವೇನಲ್ಲ.

## 2.2 ಅಭಿವೃದ್ಧಿ ಆಡಳಿತದ ಪ್ರಕೃತಿ

ಅಭಿವೃದ್ಧಿ ಆಡಳಿತದ ಪ್ರಕೃತಿಯ ನಮ್ಮ ಈ ವಿಮರ್ಶೆಯು ಅಭಿವೃದ್ಧಿ ಆಡಳಿತದ ಪ್ರಕ್ರಿಯೆ, ಅಧ್ಯಯನ ಮತ್ತು ಲಕ್ಷಣಗಳ ಪ್ರಕೃತಿಯನ್ನು ಕುರಿತಾದ್ದಾಗಿದೆ. ತಕ್ಷಣದಲ್ಲಿ ಒಂದು ಪ್ರಕ್ರಿಯೆಯಾಗಿ ಮತ್ತು ಒಂದು ಅಧ್ಯಯನವಾಗಿ ಅಭಿವೃದ್ಧಿ ಆಡಳಿತ ಪ್ರಕೃತಿಯನ್ನು ವಿಚಾರಮಾಡುತ್ತೇವೆ. ನಂತರದಲ್ಲಿ ಅದರ ಲಕ್ಷಣಗಳನ್ನು ಗಮನಿಸುತ್ತೇವೆ.

### 2.2.1 ಒಂದು ಪ್ರಕ್ರಿಯೆಯಾಗಿ

ಒಂದು ಪ್ರಕ್ರಿಯೆಯಾಗಿ ಅಭಿವೃದ್ಧಿ ಆಡಳಿತದ ಪ್ರಕೃತಿಯನ್ನು ಅದರ ವಿಭಿನ್ನತೆಯನ್ನು ತೋರಿಸುವ ಕೆಳಕಂಡ ಅಂಶಗಳನ್ನು ವಿಚಾರವಾಡಿ ತಿಳಿಯಬಹುದು : 1) ಸಾರ್ವಜನಿಕ ಆಡಳಿತ ಪ್ರಕ್ರಿಯೆಯಾಗಿ 2) ಸಮಾಜದ ಸರ್ವಾಂಗೀಣ ಅಭಿವೃದ್ಧಿ ಪ್ರಕ್ರಿಯೆಯಾಗಿ, 3) ಆಡಳಿತಾಭಿವೃದ್ಧಿ ಪ್ರಕ್ರಿಯೆಯಾಗಿ ಮತ್ತು 4) ಪರಿಸರದೊಡವಿನ ಪರಸ್ಪರ ಸಂಬಂಧಗಳ ಪ್ರಕ್ರಿಯೆಯಾಗಿ, 5) ಚಲನಾತ್ಮಕ ಪ್ರಕ್ರಿಯೆಯಾಗಿ ಮತ್ತಿ 6) ವಿಭಿನ್ನ ಕಳಕಳಿಗಳ ಪ್ರಕ್ರಿಯೆಯಾಗಿ.

### 1) ಸಾರ್ವಜನಿಕ ಆಡಳಿತ ರಂಗದ ಪ್ರಕ್ರಿಯೆ

ಅಭಿವೃದ್ಧಿ ಆಡಳಿತವು ಸಾರ್ವಜನಿಕ ಆಡಳಿತ ರಂಗದಲ್ಲಿ ನಡೆಯುವ ಒಂದು ಪ್ರಕ್ರಿಯೆಯಾಗಿದೆ. ರಾಷ್ಟ್ರಾಭಿವೃದ್ಧಿಯ ಸಮಸ್ಯೆಗಳನ್ನು ಸ್ಪಷ್ಟವಾಗಿ ನಿರ್ಧರಿಸಿ ಅವುಗಳಿಗೆ ಪರಿಹಾರ ಒದಗಿಸುವಲ್ಲಿ ಸಾರ್ವಜನಿಕ ಆಡಳಿತ ಭಾಗವಹಿಸುವಾಗ ಇದು ಉದ್ಭವವಾಗುತ್ತದೆ. ಇದು ಹೆಚ್ಚು ಕಡಿಮೆ ಎಲ್ಲಾ ರಾಷ್ಟ್ರಗಳಲ್ಲೂ ಕಂಡುಬರುತ್ತದೆ. ಇಂತಹ ಭಾಗವಹಿಸುವಿಕೆಯು ಸ್ವಾತಂತ್ರಾ ನಂತರ ರಾಷ್ಟ್ರಾಭಿವೃದ್ಧಿಯಲ್ಲಿ ಹೆಚ್ಚಾಗಿ ತೊಡಗಿರುವ ಮೂರನೇ ವಿಶ್ವದ ರಾಷ್ಟ್ರಗಳಲ್ಲಿ ವಿಶೇಷವಾಗಿ ಕಂಡುಬರುವುದರಿಂದ ಕೆಲವರು ಅಭಿವೃದ್ಧಿ ಆಡಳಿತವನ್ನು ಈ ರಾಷ್ಟ್ರಗಳಿಗೇ ಸೀಮಿತಗೊಳಿಸಿ ಕಾಣುತ್ತಾರೆ. ಇದು

ವಾಸ್ತವಿಕವಾಗಿ ಒಪ್ಪಬೇಕಾದ ಒಂದು ಸತ್ಯವಾಗಿದೆ. ಆದರೂ ಇದನ್ನು ಸೈದ್ಧಾಂತಿಕವಾಗಿ ಒಪ್ಪಲಾಗುವುದಿಲ್ಲ. ಎಲ್ಲಾ ರಾಷ್ಟ್ರಗಳ ಮತ್ತು ಅವುಗಳ ಸಾರ್ವಜನಿಕ ಆಡಳಿತಗಳೂ ಅಭಿವೃದ್ಧಿಯಲ್ಲಿ ತೊಡಗಿರುವುದರಿಂದ ಅಭಿವೃದ್ಧಿ ಆಡಳಿತವು ತಾತ್ವಿಕವಾಗಿ ಎಲ್ಲೆಡೆ ಇದೆ ಎನ್ನಬಹುದು. ಏನೇ ಆಗಲಿ ಈ ಅಭಿವೃದ್ಧಿ ಆಡಳಿತವು ಸಾರ್ವಜನಿಕ ಆಡಳಿತ ರಂಗದಲ್ಲಿ ನಡೆಯುವ ಪ್ರಕ್ರಿಯೆಯಾಗಿದೆ.

## 2) ಸಮಾಜದ ಸರ್ವಾಂಗೀಣ ಅಭಿವೃದ್ಧಿ ಪ್ರಕ್ರಿಯೆ

ಒಂದು ರಾಷ್ಟ್ರ ಅಥವಾ ಸಮಾಜದ ಸರ್ವಾಂಗೀಣ ಅಭಿವೃದ್ಧಿಯ ಉತ್ತಮ ನಿರ್ವಹಣೆಯೇ ಅಭಿವೃದ್ಧಿ ಆಡಳಿತದ ಪ್ರಮುಖ ಉದ್ದೇಶವಾಗಿರುತ್ತದೆ. ಒಂದು ರಾಷ್ಟ್ರದ ಅಭಿವೃದ್ಧಿಯಲ್ಲಿ ಆರ್ಥಿಕಾಭಿವೃದ್ಧಿಯ ಪಾತ್ರವು ಪ್ರಮುಖವಾದರೂ ಅದು ರಾಷ್ಟ್ರದ ಸಾಮಾಜಿಕ, ಮಾನಸಿಕ ಮತ್ತು ರಾಜಕೀಯ ಅಭಿವೃದ್ಧಿಗಳ ಜೊತೆ ಹೆಣೆದುಕೊಂಡಿರುತ್ತದೆ. ಅಭಿವೃದ್ಧಿ ಆಡಳಿತವು ಸಮಾಜದ ಸರ್ವಾಂಗೀಣ ಅಭಿವೃದ್ಧಿ ನಿರ್ವಹಣೆಯ ಪ್ರಕ್ರಿಯೆಯಾಗಿರುತ್ತದೆ.

## 3) ಆಡಳಿತಾಭಿವೃದ್ಧಿ ಪ್ರಕ್ರಿಯೆ

ಸರ್ವಾಂಗೀಣ ಅಭಿವೃದ್ಧಿಯಲ್ಲಿ ಆಡಳಿತದ ಅಭಿವೃದ್ಧಿಯೂ ಅಡಗಿರುತ್ತದೆ. ಅಭಿವೃದ್ಧಿ ಆಡಳಿತ ಚೆನ್ನಾಗಿರಬೇಕಾದರೆ ಆಡಳಿತ ಉತ್ತಮವಾಗಿರಬೇಕಾಗುತ್ತದೆ. ಇದು ಸಮಾಜದ ಎಲ್ಲಾ ತರಹದ ಮತ್ತು ಕ್ಷೇತ್ರಗಳ ಆಡಳಿತಕ್ಕೆ ಸಂಬಂಧಿಸಿರುತ್ತದೆ. ಸಾರ್ವಜನಿಕ ಆಡಳಿತ ಕ್ಷೇತ್ರದ ಅಭಿವೃದ್ಧಿ ಪ್ರಾಥಮಿಕವೂ ಮತ್ತು ಪ್ರಮುಖವೂ ಆದ ಅಗತ್ಯವಾಗಿರುತ್ತದೆ. ಅಭಿವೃದ್ಧಿ ಆಡಳಿತದ ಪ್ರಕ್ರಿಯೆಯಿಂದಾಗಿ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಸಾರ್ವಜನಿಕ ಆಡಳಿತವು ಗಾತ್ರದಲ್ಲಿ ಹೆಚ್ಚು ವಿಸ್ತೀರ್ಣತೆ ಮತ್ತು ಆಂತರಿಕ ವೈವಿಧ್ಯತೆಗೆ ಒಳಗಾಗಿದೆ. ಅಭಿವೃದ್ಧಿ ಆಡಳಿತವು ಆಡಳಿತದ ಅಭಿವೃದ್ಧಿ ಪ್ರಕ್ರಿಯೆಯೂ ಆಗಿದೆ.

## 4) ಪರಿಸರದೊಡನೆ ಪರಸ್ಪರ ಸಂಬಂಧಗಳ ಪ್ರಕ್ರಿಯೆ

ಪ್ರತೀ ಆಡಳಿತಕ್ಕೂ ತನ್ನದೇ ಆದ ಪರಿಸರವಿರುತ್ತದೆ. ಆಡಳಿತ ಮತ್ತು ಪರಿಸರಗಳ ಸಂಬಂಧ ನಿರಂತರವಾಗಿರುತ್ತದೆ. ಅಭಿವೃದ್ಧಿ ಆಡಳಿತದ ವಿಷಯದಲ್ಲಂತೂ ಈ ಸಂಬಂಧ ಅಗಾಧವೂ ಮತ್ತು ಪರಿಣಾಮಕಾರಿಯೂ ಆಗಿರುತ್ತದೆ. ಅಭಿವೃದ್ಧಿಯು ಪರಿಸರದಲ್ಲಿ ಬದಲಾವಣೆಯನ್ನು ಬಯಸುತ್ತವೆ ಮತ್ತು ತರುತ್ತದೆ. ಅಭಿವೃದ್ಧಿ ವಾಹಕವಾಗಿರುವ ಅಭಿವೃದ್ಧಿ ಆಡಳಿತವು ಪರಿಸರದೊಡನೆ ಪರಸ್ಪರ ಪ್ರಭಾವಯುತವಾದ ಸಂಬಂಧಗಳ ಪ್ರಕ್ರಿಯೆಯಾಗಿರುತ್ತದೆ. ಮುಂದೆ ಅನೇಕ ಪಾಠಗಳಲ್ಲಿ ಇದನ್ನು ವಿಷದಪಡಿಸಲಾಗುತ್ತದೆ.

## 5) ಚಲನಾತ್ಮಕ ಪ್ರಕ್ರಿಯೆ

ಅಭಿವೃದ್ಧಿ ಆಡಳಿತವು ಒಂದು ಚಲನಾತ್ಮಕ ಪ್ರಕ್ರಿಯೆಯಾಗಿದೆ. ಒಂದು ಅಭಿವೃದ್ಧಿ ಆಡಳಿತದ ಪ್ರಕೃತಿ ಮತ್ತು ರಚನೆಯು ಅದರ ಗುರಿಗಳು ಪರಿಸರಗಳಿಂದ ರೂಪಿತವಾಗಿರುತ್ತವೆ. ಒಂದು ಆಡಳಿತದ ಗುರಿಗಳು ಮತ್ತು ಪರಿಸರಗಳು ಬದಲಾವಣೆಗೊಂಡಂತೆ ಅಭಿವೃದ್ಧಿ ಆಡಳಿತವೂ ಚಲನೆಗೆ ಮತ್ತು ಬದಲಾವಣೆಯಿಂದ ಕೂಡಿರುತ್ತದೆ. ಉದಾಹರಣೆಗೆ, ಭಾರತದಲ್ಲಿ ಕೇವಲ ಗ್ರಾಮೀಣಾಭಿವೃದ್ಧಿ ಆಡಳಿತವಾಗಿ ಆರಂಭವಾದ ಅಭಿವೃದ್ಧಿ ಆಡಳಿತವು ಇಂದು ವಿಶಾಲವಾದ ಮತ್ತು ನೂತನವಾದ ಮಾಹಿತಿ ತಂತ್ರಜ್ಞಾನ, ಜೀವತಂತ್ರಜ್ಞಾನ ಮತ್ತಿತರ ಸೇವಾಕ್ಷೇತ್ರಗಳ ಅಭಿವೃದ್ಧಿ ಆಡಳಿತವಾಗಿ ಪರಿವರ್ತಿತವಾಗಿದೆ. ಹೆಚ್ಚು ಸರ್ಕಾರೀ ಪ್ರಯತ್ನದಿಂದ ನಡೆಯುತ್ತಿದ್ದ ಅಭಿವೃದ್ಧಿ ಆಡಳಿತವು ಇಂದು ಸರ್ಕಾರೇತರ ಪ್ರಯತ್ನಗಳಿಂದಲೂ ನಡೆಯುವ ಅಭಿವೃದ್ಧಿ ಆಡಳಿತವಾಗಿದೆ.

## 6) ವಿಭಿನ್ನ ಕಳಕಳಿಗಳ ಪ್ರಕ್ರಿಯೆ

ಅಭಿವೃದ್ಧಿ ಆಡಳಿತವು ತನ್ನದೇ ಆದ ವಿಭಿನ್ನ ಮತ್ತು ವಿಶೇಷ ಕಳಕಳಿಗಳುಳ್ಳ ಪ್ರಕ್ರಿಯೆಯಾಗಿದೆ. ಈ ಕಳಕಳಿಗಳೆಂದರೆ 1) ಗುರಿಗಳು, 2) ಬದಲಾವಣೆ, 3) ಮೌಲ್ಯಗಳು, 4) ಯೋಜನೆ, 5) ಸರ್ಕಾರೀ ಮತ್ತು ಸರ್ಕಾರೇತರ ಪ್ರಯತ್ನಗಳು ಮತ್ತು 6) ನಾಗರೀಕರ ಭಾಗವಹಿಸುವಿಕೆ. ಮುಂದೆ, ಇವುಗಳನ್ನು ವಿಷದಪಡಿಸಲಾಗುತ್ತದೆ.

## 2.2.2 ಒಂದು ಅಧ್ಯಯನವಾಗಿ

ಒಂದು ಅಧ್ಯಯನವಾಗಿ ಅಭಿವೃದ್ಧಿಶಾಸ್ತ್ರದ ಪ್ರಕೃತಿಯನ್ನು ಕೆಳಕಂಡಂತೆ ಗುರುತಿಸಬಹುದು.

### ಎ) ಸಾರ್ವಜನಿಕ ಆಡಳಿತದಲ್ಲಿ ಬೇರು ಹೊಂದಿದೆ

ಅಭಿವೃದ್ಧಿ ಆಡಳಿತದ ಮೂಲ ಅಥವಾ ಬೇರು ಸಾರ್ವಜನಿಕ ಆಡಳಿತದಲ್ಲಿದೆ. ಅಭಿವೃದ್ಧಿ ಆಡಳಿತವನ್ನು ಸಾರ್ವಜನಿಕ ಆಡಳಿತದ ಒಂದು ಮೊಮ್ಮಗು ಎನ್ನಬಹುದು. ಇದಕ್ಕೆ ಕಾರಣ ಹೀಗಿದೆ. ಎರಡನೇ ಮಹಾಯುದ್ಧದ ನಂತರ ಸಾರ್ವಜನಿಕ ಆಡಳಿತದ ಒಂದು ಶಾಖೆಯಾಗಿ ತುಲನಾತ್ಮಕ ಸಾರ್ವಜನಿಕ ಆಡಳಿತವೆಂಬ ವಿವಿಧ ದೇಶಗಳ ಸಾರ್ವಜನಿಕ ಆಡಳಿತಗಳನ್ನು ಅಧ್ಯಯನ ಮಾಡಿ ಹೋಲಿಸಿ ನೋಡುವ ಒಂದು ಅಧ್ಯಯನ ಮಾರ್ಗ ಮತ್ತು ನಂತರ ಒಂದು ಉಪ ಅಧ್ಯಯನ ಉದ್ಭವಿಸಿತು. ಈ ತುಲನಾತ್ಮಕ ಅಧ್ಯಯನ ಮಾರ್ಗ ಅನುಸರಿಸಿ ಮೂರನೇ ವಿಶ್ವ ರಾಷ್ಟ್ರಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಆಡಳಿತದಲ್ಲಿ ತೊಡಗಿದ್ದ ಸಾರ್ವಜನಿಕ ಆಡಳಿತವನ್ನು ಅಧ್ಯಯನ ಮಾಡಿದ ತಜ್ಞರು ಅಭಿವೃದ್ಧಿ ಆಡಳಿತವನ್ನು ಒಂದು ಅಧ್ಯಯನ ಮಾರ್ಗ ಮತ್ತು ಉಪಅಧ್ಯಯನ ಮಾರ್ಗವಾಗಿ ಹೊರತಂದರು.

ಅಂತಸ್ತಿನಲ್ಲಿ ಈಗ ಅಭಿವೃದ್ಧಿ ಆಡಳಿತವು ಸಾರ್ವಜನಿಕ ಆಡಳಿತದ ಒಂದು ಶಾಖೆ ಅಥವಾ ಉಪ ಅಧ್ಯಯನವಾಗಿದೆ. ಆದರೆ ಮುಂದೆ ಇದು ಸಾರ್ವಜನಿಕ ಆಡಳಿತವನ್ನೂ ಅಲ್ಲದೆ ಇತರ ಸಮಾಜಶಾಸ್ತ್ರಗಳನ್ನೂ ಮೀರಿದ ಒಂದು ಮಹಾ ಅಧ್ಯಯನವಾಗುವ ಸಾಧ್ಯತೆಗಳನ್ನು ತೋರುತ್ತದೆ. ಅಭಿವೃದ್ಧಿ ಪಥದ ಬಹುಮುಖಗಳುಳ್ಳ ಮತ್ತು ಬಹು ಅಧ್ಯಯನ ಅವಶ್ಯಕತೆಗಳುಳ್ಳ ಪ್ರಕೃತಿಯು ಇದಕ್ಕೆ ಕಾರಣವಾಗಿದೆ.

### ಬಿ) ಅನೇಕ ದೃಷ್ಟಿಕೋನಗಳನ್ನು ಹೊಂದಿದೆ

ಅಭಿವೃದ್ಧಿ ಎಂಬ ಮಹಾಕುದುರೆಯನ್ನೇರಿ ಹೊರಟಿರುವ ಅಭಿವೃದ್ಧಿ ಆಡಳಿತದ ನೋಟ ಬಹುವಿಶಾಲವಾದ ಮಹಾನೋಟವಾಗಿದ್ದು ಅಭಿವೃದ್ಧಿಯನ್ನು ಅದು ಅನೇಕ ದೃಷ್ಟಿಕೋನಗಳಿಂದ ನೋಡುತ್ತಾ ಬಂದಿದೆ. ಇದರ ಮುಖ್ಯ ದೃಷ್ಟಿಕೋನಗಳು ಮತ್ತು ಅವುಗಳನ್ನು ಪ್ರಮುಕವಾಗಿ ಪ್ರತಿವಾದಿಸಿದವರನ್ನು (ಆವರಣ ಚಿಹ್ನೆಗಳಲ್ಲಿ ಹೆಸರಿಸಿದರು) ಕೆಳಕಂಡಂತೆ ಗುರುತಿಸಬಹುದು. ಪರಿಸರ ಸಂಬಂಧ ದೃಷ್ಟಿಕೋನ (ಎಫ್.ಡಬ್ಲ್ಯೂ.ರಿಗ್ಸ್), ವ್ಯವಸ್ಥಾತ್ಮಕ ದೃಷ್ಟಿಕೋನ ರಿಗ್ಸ್ ಮತ್ತು ಕಾಟ್ಸ್ ಸಾಮಾಜಿಕ ಬದಲಾವಣೆ (ವೀಡ್ನರ್, ಮಾಂಟ್ ಗೋಮೆರಿ, ಸ್ವೆರ್ಡಾಲೋವ್), ನೌಕರಶಾಹಿ ದೃಷ್ಟಿಕೋನ (ಲಾಪಲಾಂಬರ, ಪೈಪನಾಂಡಿಕರ್), ಪ್ರಾದೇಶಿಕ ದೃಷ್ಟಿಕೋನ (ಹೀಫಿ) ಮತ್ತು ವಿಭಾಗೀಯ ಅಥವಾ ಭಾಗಾಂಶಗಳ ಅಂದರೆ ಬಿಡಿ ಬಿಡಿ ಅಂಗಾಂಶಗಳ ದೃಷ್ಟಿಕೋನಗಳು (ಬಹುತೇಕ ಬರಹಗಾರರು) ಈ ದೃಷ್ಟಿಕೋನಗಳಲ್ಲಿ ಮುಖ್ಯವಾದವು.

### ಬಿ) ಅನೇಕ ದೃಷ್ಟಿಕೋನಗಳನ್ನು ಹೊಂದಿದೆ

ಅಭಿವೃದ್ಧಿ ಆಡಳಿತವು ನಿಂತ ನೀರಲ್ಲ. ಸದಾ ಹರಿಯುತ್ತಾ ಬದಲಾವಣೆ ಹೊಂದುತ್ತಾ ಇರುವ ಒಂದು ಅಧ್ಯಯನವಾಗಿದೆ. ಬಹು ಚಲನಾತ್ಮಕವಾಗಿರುವ ಅಭಿವೃದ್ಧಿ ಪ್ರಕ್ರಿಯ ಪ್ರಕೃತಿ ಮತ್ತು ವ್ಯಾಪ್ತಿಗಳೇ ಇದಕ್ಕೆ ಕಾರಣವಾಗಿದೆ. ಅಭಿವೃದ್ಧಿ ಆಡಳಿತದ ಪರಿಕಲ್ಪನೆಗಳು, ಸಿದ್ಧಾಂತಗಳು, ಅಧ್ಯಯನ ವಿಷಯಗಳು ಮತ್ತು ವಿಧಾನಗಳು ಹಾಗೂ ಅಭಿವೃದ್ಧಿ ಆಡಳಿತದ ಗಡಿರೇಖೆಗಳೂ ಸದಾ ಜೀವಂತವೂ, ಪ್ರಶ್ನಾಪೀಡಿತವು ಮತ್ತು ವಿವಾದಾತ್ಮಕವೂ ಆಗಿವೆ.

### ಡಿ) ಅಭಿವೃದ್ಧಿಯ ಮೇಲೆ ಗಮನಕೇಂದ್ರೀಕರಿಸಿದ ಅಧ್ಯಯನ

ಅಭಿವೃದ್ಧಿ ಆಡಳಿತದ ಗಮನ ಸಮಾಜದ ಅಥವಾ ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯ ಮೇಲೆ ಅದರಲ್ಲೂ ಈ ಅಭಿವೃದ್ಧಿಯ ಆಡಳಿತ ಮೇಲೆ ಕೇಂದ್ರೀಕೃತವಾಗಿದೆ, ಇದರ ಅಧ್ಯಯನ ಕೇಂದ್ರೀಕೃತವಾಗಿರುವ ಅಂಶಗಳೆಂದರೆ 1) ಅಭಿವೃದ್ಧಿ ಸಿದ್ಧಾಂತ, 2) ಅಭಿವೃದ್ಧಿ ಸಮಸ್ಯೆ, 3) ಅಭಿವೃದ್ಧಿ ಪರಿಸರ ಸಂಬಂಧ, 4) ಅಭಿವೃದ್ಧಿ ನೀತಿ, 5) ಅಭಿವೃದ್ಧಿ ಯೋಜನೆ, 6) ಅಭಿವೃದ್ಧಿ ನೌಕರಶಾಹಿ ಅಥವಾ ಆಡಳಿತ ಸಿಬ್ಬಂದ್ದಿ, 7) ಅಭಿವೃದ್ಧಿ ಸಂಘಟನೆ, 8) ಅಭಿವೃದ್ಧಿ ನಿರ್ವಹಣೆ ಮತ್ತು 9) ಅಭಿವೃದ್ಧಿ ಹಣಕಾಸು ಆಡಳಿತಗಳಾಗಿವೆ.

## 2.3 ಅಭಿವೃದ್ಧಿ ಆಡಳಿತದ ಲಕ್ಷಣಗಳು ಹಾಗೂ ಅಭಿವೃದ್ಧಿ ಆಡಳಿತ ಮತ್ತು ಸಾಮಾನ್ಯ ಸಾರ್ವಜನಿಕ ಆಡಳಿತಗಳ ನಡುವಿನ ವ್ಯಾಖ್ಯಾನಗಳು

ಅಭಿವೃದ್ಧಿ ಆಡಳಿತವು ಸಾಮಾನ್ಯ ಸಾರ್ವಜನಿಕ ಆಡಳಿತದಿಂದ ಉದ್ಭವಿಸಿದರೂ ತನ್ನದೇ ಆದ ಲಕ್ಷಣಗಳನ್ನು ಹೊಂದಿದೆ. ಸಾಮಾನ್ಯ ಅಥವಾ ಸಾಂಪ್ರದಾಯಿಕ ಸಾರ್ವಜನಿಕ ಆಡಳಿತವು ಮೂಲತಃ ಮತ್ತು ಪ್ರಮುಖವಾಗಿ ನಿಯಂತ್ರಣ ಕಾರ್ಯದಲ್ಲಿ ತಲ್ಲೀನವಾಗಿತ್ತು. ಅದರ ರಚನೆ, ನಿರ್ವಹಣೆ ಮತ್ತು ಸಂಸ್ಕೃತಿಗಳೆಲವೂ ಈ ಕಾರ್ಯಕ್ಕಾಗಿ ರೂಪಿತವಾಗಿದ್ದವು. ಅಭಿವೃದ್ಧಿ ಕಾರ್ಯ ಕೇಂದ್ರೀಕೃತವಾದ ಅಭಿವೃದ್ಧಿ ಆಡಳಿತವು ತನ್ನದೇ ವೈಶಿಷ್ಯತೆಯನ್ನು ಹೊಂದಿದೆ. ಇದನ್ನು ಒಂದು ಬಿನತೆಯುಳ್ಳ ಸಾರ್ವಜನಿಕ ಆಡಳಿತ ಎಂದೂ ಕರೆಯಲಾಗಿದೆ. ನಾವು ಈ ಕೆಳಗೆ ಈ ಎರಡು ತರಹ ಆಡಳಿತಗಳ ಲಕ್ಷಣಗಳನ್ನು ಒಂದರೆದುರು ಒಂದರಂತೆ ಪಟ್ಟಿ ಮಾಡಿ ಇವುಗಳ ನಡುವಿನ ಸಾನ್ಯತೆ ಮತ್ತು ಭಿನ್ನತೆಗಳನ್ನು ತಿಳಿಯುತ್ತೇವೆ.

**ಅಭಿವೃದ್ಧಿ ಆಡಳಿತದ ಲಕ್ಷಣಗಳು ಹಾಗೂ ಸಾಮಾನ್ಯ ಸಾರ್ವಜನಿಕ ಆಡಳಿತ ಮತ್ತು ಅಭಿವೃದ್ಧಿ ಆಡಳಿತಗಳ ನಡುವಿನ ವ್ಯತ್ಯಾಗಳು**

| ಸಾಮಾನ್ಯ ಸಾರ್ವಜನಿಕ ಆಡಳಿತ | ಅಭಿವೃದ್ಧಿ ಆಡಳಿತ |
|---|---|
| 1. ಬುನಾದಿ | 1. ಮೇಲ್ಕಟ್ಟಡ |
| 2. ರಾಜಕೀಯ ತಾಟಸ್ಥತೆ | 2. ಪ್ರತಿಸ್ಪಂದತೆ ಮತ್ತು ಬದ್ಧತೆ |
| 3. ನೌಕರಶಾಹೀ ಸಂಸ್ಕೃತಿ | 3. ನಿರ್ವಾಹಕ ಸಂಸ್ಕೃತಿ |
| 4. ಯೋಜನೆಯಲ್ಲಿ ಸೀಮಿತ ಆಸಕ್ತಿ | 4. ಯೋಜನೆಯಲ್ಲಿ ವಿಶಾಲವಾದ ಮತ್ತು ಗಾಢವಾದ ಆಸಕ್ತಿ |
| 5. ನಿಯಂತ್ರಣಕಾರ್ಯ ಮತ್ತು ಯಥಾಸ್ಥಿತಿ ಅಭಿಮುಖ | 5. ಅಭಿವೃದ್ಧಿ ಕಾರ್ಯ ಮತ್ತು ಬದಲಾವಣೆ ಅಭಿಮುಖ |
| 6. ಸಾಧನಗಳತ್ತ ಅಭಿಮುಖ | 6. ಗುರಿಗಳತ್ತ ಅಭಿಮುಖ |
| 7. ನಿಯಮಗಳತ್ತ ಅಭಿಮುಖ | 7. ಕಾರ್ಯಕ್ರಮ ಮತ್ತು ಕಾರ್ಯಾಚರಣೆಗಳತ್ತ ಅಭಿಮುಖ |
| 8. ಅಂತಸ್ತು ಮತ್ತು ಅಧಿಕಾರಗಳತ್ತ ಅಭಿಮುಖ | 8. ಸಾಧನಗಳತ್ತ ಅಭಿಮುಖ |
| 9. ಶ್ರೇಣಿ–ಮನೋಭಾವ | 9. ತಂಡ–ಮನೋಭಾವ |
| 10. ಗುಪ್ತ ನಡವಳಿಕೆ | 10. ಮುಕ್ತ ನಡವಳಿಕೆ |
| 11. ದರ್ಪನಡವಳಿಕೆ | 11. ನಾಗರೀಕ ಸೇವಾ ನಡವಳಿಕೆ |
| 12. ಅಂತರ್ಮುಖಿ ನಡವಳಿಕೆ | 12. ಅಭಿವೃದ್ಧಿಗಾಗಿ ಬಾಹ್ಯಮುಖ ಹೊರಗಿನವರೊಡನೆ ಕೈಗೂಡಿಸುವ ನಡವಳಿಕೆ |

| | |
|---|---|
| 13. ಇತರರನ್ನು ಹೊರಗಿಡುವ ಪ್ರವೃತ್ತಿ | 13. ಇತರರಿಗೆ ಭಾಗವಹಿಸಲು ಒಳಾವಕಾಶ ಕೊಡುವ ಪ್ರವೃತ್ತಿ |
| 14. ಹೆಚ್ಚು ಕೇಂದ್ರೀಕೃತ | 14. ಹೆಚ್ಚು ವಿಕೇಂದ್ರೀಕೃತ |
| 15. ಪೂರ್ವನಿದರ್ಶನಾಭಿಮುಖ | 15. ನಾವಿನ್ಯತೆಯುತ್ತ ಅಭಿಮುಖ |
| 16. ಬಹುಕಾರ್ಯನಿರತ ಸಾಮಾನ್ಯ ಆಡಳಿತ ವರ್ಗ ಅಥವಾ ನೌಕರಶಾಹಿ ರಚನೆಗಳು | 16. ಏಕ-ಕಾರ್ಯನಿರತ ತಜ್ಞ ಸಿಬ್ಬಂದಿ ಉಳ್ಳ ತಾತ್ಕಾಲಿಕ ಅಥವಾ ಸಂದರ್ಭೋಚಿತ ರಚನೆಗಳು |
| 17. ಗಣ್ಯ ಅಥವಾ ಉನ್ನತ ವರ್ಗದವರಿಂದ ಕೂಡಿದ ನೌಕರಶಾಹಿ ಆಡಳಿತ ಸೇವೆಗಳು | 17. ಹೆಚ್ಚು ಪ್ರಾತಿನಿಧಿಕವಾದ, ತಂತ್ರಜ್ಞಾನಿಗಳುಳ್ಳ ಮತ್ತು ಪ್ರಜಾಪ್ರಭುತ್ವದೊಡನೆ ಕೈಗೂಡಿಸುವ ಆಡಳಿತ ಸೇವೆಗಳು. |
| 18. ಒಂದು ಅಧ್ಯಯನವಾಗಿ ಏಕ-ಅಧ್ಯಯನ ಅಥವಾ ಸ್ವಾಯತ್ತತೆಯುತ್ತ ಒಲವು | 18. ಬಹು ಅಧ್ಯಯನ ಅಥವಾ ಅಂತರ್ -ಶಾಸ್ತ್ರೀಯ ಇತರ ಶಾಸ್ತ್ರಗಳನ್ನು ಒಗ್ಗೂಡಿಸಿ ಅಥವಾ ಬೃಹತ್ - ಅಧ್ಯಯನವಾಗುವ ಬಯಕೆಗಳು |

ಸಾರ್ವಜನಿಕ ಆಡಳಿತ ಅಭಿವೃದ್ಧಿ ಆಡಳಿತಗಳ ನಡುವೆ ಈ ತರಹದ ವ್ಯತ್ಯಾಸಗಳನ್ನು ಸಾಮಾನ್ಯವಾಗಿ ಗುರುತಿಸಬಹುದು. ಆದರೂ, ಈ ಎರಡೂ ತರಹದ ಆಡಳಿತಗಳನ್ನು ನಾವು ಒಂದೇ ದೇಶದ ಸಾರ್ವಜನಿಕ ಆಡಳಿತದಲ್ಲಿ ಕಾಣಬಹುದು. ನಿಯಂತ್ರಣ ಮತ್ತು ಅಭಿವೃದ್ಧಿ ಕಾರ್ಯಗಳೆರಡೂ ಎಲ್ಲಾ ದೇಶಗಳಿಗೂ ಅಗತ್ಯವಾಗಿರುವುದೆ ಇದಕ್ಕೆ ಕಾರಣ. ಇವುಗಳನ್ನು ತುಂಡರಿಸಿ ಬೇರ್ಪಡಿಸುವಂತಿಲ್ಲ. ಆದರೂ ಇವುಗಳೆರಡನ್ನು ಹೋಲಿಸಿ ನೋಡಿದಾಗ, ಸಾಮಾನ್ಯ ಸಾರ್ವಜನಿಕ ಆಡಳಿತಕ್ಕಿಂತ ಅಭಿವೃದ್ಧಿ ಆಡಳಿತ ಹೆಚ್ಚು ಸುಧಾರಿತವೂ ಮತ್ತು ಸಕಾರಾತ್ಮಕವೂ ಆಗಿದೆ. ಅಭಿವೃದ್ಧಿ ಆಡಳಿತದ ಮನೋಭಾವ ಮತ್ತು ನಡವಳಿಕೆಗಳನ್ನು ಎಷ್ಟು ಸಾಧ್ಯವೋ ಅಷ್ಟು ನಿಯಂತ್ರಣ ಕಾರ್ಯಕೇಂದ್ರಿಕೃತ ಸಾಮಾನ್ಯ ಆಡಳಿತಕ್ಕೂ ಅಳವಡಿಸಬೇಕು. ಉನ್ನತವಾದ ಅಭಿವೃದ್ಧಿ ಸಾಧನೆಗೆ ಪೂರಕವಾಗುವಂತೆ ಅದನ್ನು ರೂಪಿಸಬೇಕು. ಹೀಗೆ ಅದಾಗ ಮಾತ್ರ ಇಡೀ ಸಾರ್ವಜನಿಕ ಆಡಳಿತವು ನಿಜವಾಗಿಯೂ 'ಸಾರ್ವಜನಿಕ' ಗುಣವನ್ನು ಹೊಂದಿದ ಜನಾಭಿವೃದ್ಧಿ ಆಡಳಿತವಾಗುತ್ತದೆ.

## 2.4 ಅಭಿವೃದ್ಧಿ ಆಡಳಿತದ ವ್ಯಾಪ್ತಿ

ಗುರಿ, ಕಾರ್ಯಾಚರಣೆ ಮತ್ತು ಸಾಧನಗಳತ್ತ ಅಭಿವೃದ್ಧಿಯು ಅಭಿಮುಖವಾಗಿರುವುದರಿಂದ ಅಭಿವೃದ್ಧಿ ಆಡಳಿತವು ವ್ಯಕ್ತಿಯು ಬಹು ವಿಶಾಲವೂ ಮತ್ತು ವಿವಾದಾತ್ಮಕವೂ ಆಗಿದೆ. ಪ್ರತಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ಅನೇಕ ಮುಖಗಳಿರುತ್ತವೆ. ಆದರ ಭೌಗೋಳಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಮಾನಸಿಕ ಮತ್ತು ಸಾಂಸ್ಕೃತಿಕ ಪರಿಸರದೊಡನೆ ಅದರ ಸಂಬಂಧಗಳು ಅದರ ಮೇಲೆ ಪರಿಣಾಮ ಬೀರುತ್ತವೆ. ಅಲ್ಲದೆ ಯಾವುದು ಒಂದು 'ಅಭಿವೃದ್ಧಿ ಕಾರ್ಯಕ್ರಮ' ಮತ್ತು ಯಾವುದು ಒಂದು ಬರೀ 'ಉಳಿಸಿಕೊಂಡು ಹೋಗುವ ಕಾರ್ಯಕ್ರಮ' ಎಂಬುದು ಒಂದು ಜಟಿಲ ಸಮಸ್ಯೆಯೇ ಆಗಿರುತ್ತದೆ. ಅದೇ ತರಹದಲ್ಲಿ ಯಾವ ದೇಶ ಅಭಿವೃದ್ಧಿಯಲ್ಲಿ ತೊಡಗಿದೆ. ಯಾವುದು ಇಲ್ಲ ಎಂಬುದೂ ಗೊಂದಲಮಯ ವಿಷಯವಾಗಿದೆ. ಇವುಗಳ ಹಿನ್ನೆಲೆಯಲ್ಲಿ ಅಭಿವೃದ್ಧಿ ಆಡಳಿತದ ವ್ಯಾಪ್ತಿ ಒಂದು ಬಹು ವಿಶಾಲ ಮತ್ತು ವಿವಾದತ್ಮಕ ವಿಷಯವಾಗಿರುವುದು ಆಶ್ಚರ್ಯವಲ್ಲ. ಈ ಕೆಳಗೆ ನಾವು ಇದರ ವ್ಯಾಪ್ತಿಯನ್ನು ಪ್ರಾದೇಶಿಕ ವ್ಯಾಪ್ತಿ ಕೆಳಕಳಿಗಳ ವ್ಯಾಪ್ತಿ, ಮತ್ತು ಅಧ್ಯಯನ ವಿಧಾನಗಳ ವ್ಯಾಪ್ತಿ ಎಂಬ ಮೂರು ಭಾಗಗಳಾಗಿ ವಿಂಗಡಿಸಿ ವಿಚಾರ ಮಾಡುತ್ತೇವೆ.

ಎ) ಪ್ರಾದೇಶಿಕ ವ್ಯಾಪ್ತಿ

ಅಭಿವೃದ್ಧಿ ಆಡಳಿತ ಎಲ್ಲಿ ಇದೆ ಅಥವಾ ಯಾವ ಪ್ರದೇಶದಲ್ಲಿದೆ ಎಂಬ ಪ್ರಶ್ನೆಯೂ ವಿವಾದಾತ್ಮಕವಾಗಿದೆ. ಅಭಿವೃದ್ಧಿ ಆಡಳಿತವನ್ನು ಕೆಲವು 'ತರಹದ' ಉದಾಹರಣೆಗೆ ವಸಾಹತುಶಾಹಿಯೇತರ ಆಡಳಿತಗಳಲ್ಲಿ ಸಾರ್ವಜನಿಕ ಆಡಳಿತದ ಕೆಲವು ಭಾಗಗಳಲ್ಲಿ ಮೂರನೇ ವಿಶ್ವರಾಷ್ಟಗಳಲ್ಲಿ ಮಾತ್ರ ಅಥವಾ ಎಲ್ಲಾ ರಾಷ್ಟ್ರಗಳಲ್ಲಿ ಗುರುತಿಸುವ ಪ್ರಯತ್ನಗಳು ಕಂಡುಬರುತ್ತವೆ.

i) ವಸಾಹಾತುಶಾಹಿಯೇತರ ಆಡಳಿತ

ಕೆಲವು ಆರಂಭದ ಬರಹಗಾರರು ಅಭಿವೃದ್ಧಿ ಆಡಳಿತವನ್ನು ವಸಾಹತುಶಾಹಿಯೇತರ ಆಡಳಿತಗಳಲ್ಲಿ ಅಂದರೆ ವಸಾಹತು ಪರಿಸ್ಥಿತಿಯಿಂದ ಎರಡನೇ ಮಹಾಯುದ್ಧವಾದ ಮೇಲೆ ಸ್ವಾತಂತ್ರ ಸ್ಥಿತಿಗೆ ಬಂದ ರಾಷ್ಟಗಳ ಆಡಳಿತದಲ್ಲಿ ಗುರುತಿಸಿದರು. ಎಲ್ಲಾ ಅಭಿವೃದ್ಧಿ ಚಟುವಟಿಕೆಗಳೂ ಸ್ವತಂತ್ರ ಬಂದ ಮೇಲೆ ಮಾತ್ರ ಶುರು ಆಗುತ್ತದೆ ಮತ್ತು ಎಲ್ಲಾ ಸ್ವತಂತ್ರ ಪಡೆದ ರಾಷ್ಟಗಳೂ ಅಭಿವೃದ್ಧಿಯಲ್ಲಿ ತೊಡಗಿವೆ ಎಂಬ ಅನ್ನಿಸಿಕೆಗಳು ಇದರ ಹಿಂದಿದೆ. ಈಅನ್ನಿಸಿಕೆಗಳು ಭಾಗಶಃ ನಿಜವಾದರೂ ಪೂರ್ಣವಾಗಿ ಅಲ್ಲ. ಸ್ವಾತಂತ್ರಕ್ಕೆ ಮುಂಚೆಯೇ ಭಾರತದಲ್ಲಿ ನಿರಾವರಿ ಕಟ್ಟಗಳ ನಿರ್ಮಾಣ, ರೈಲು ಮತ್ತು ರಸ್ತೆಗಳಂತಹ ಕೆಲವು ಅಭಿವೃದ್ಧಿ ಕಾರ್ಯಗಳು ನಡೆದಿತ್ತಲ್ಲವೇ? ಆದರೂ, ಅಗಿನ ಆಡಳಿತವು ಮುಖ್ಯವಾಗಿ ನಿಯಂತ್ರಣ ಮತ್ತು ಸುಲಿಗೆಗಳಲ್ಲಿ ಆಸಕ್ತಿ ಇದ್ದ (ವಿದೇಶೀ) ವಸಾಹತು ಆಡಳಿತವಾಗಿತ್ತೇ ವಿನಃ ಅಭಿವೃದ್ಧಿ ಆಡಳಿತ ಅಸಕ್ತಿಗಳನ್ನಾಗಲೀ ಅಥವಾ ಮನೋಧರ್ಮವನ್ನಾಗಲೀ ಹೊಂದಿರಲಿಲ್ಲವೆಂಬುದನ್ನೂ ಮರೆಯುವಂತಿಲ್ಲ. ಹಾಗೆಯೇ ಸ್ವಾತಂತ್ರ್ಯ ಪಡೆದ ಬಹುತೇಕ ರಾಷ್ಟಗಳು ಅಭಿವೃದ್ಧಿಯಲ್ಲಿ ತೊಡಗಿದ್ದರೂ ಅ ಸ್ವಾತಂತ್ರ್ಯದಡೆಗೆ ಎಲ್ಲಾ ರಾಷ್ಟಗಳೂ ಅಭಿವೃದ್ಧಿಯಲ್ಲಿ ತೊಡಗಿವೆ ಎಂಬುದೂ ಅಷ್ಟು ಸತ್ಯವಲ್ಲ. ಒಂದು ರಾಷ್ಟ್ರದ ಅಥವಾ ಜನರ ಅಭಿವೃದ್ಧಿಯನ್ನೇ ತನ್ನ ಗುರಿ ಮತ್ತು ಅದರ ಕ್ರಿಯಾಶೀಲ ನಿರ್ವಹಣೆಯನ್ನೇ ತನ್ನ ಮನೋಧರ್ಮವಾಗಿ ಉಳ್ಳ ಆಡಳಿತವನ್ನು ಮಾತ್ರ ಅಭಿವೃದ್ಧಿ ಆಡಳಿತವೆನ್ನಬಹುದು. ಇದರ ಹಿನ್ನೆಲೆಯಲ್ಲಿ ಅಭಿವೃದ್ಧಿ ಆಡಳಿತದ ವ್ಯಾಪ್ತಿಯನ್ನು ಗುರುತಿಸುವ ಮೇಲಿನ ಈ ಪ್ರಯತ್ನ ಸಮಂಜಸವಲ್ಲ.

ii) ಅಭಿವೃದ್ಧಿ ಆಡಳಿತ ಇಲಾಖೆಗಳು

ಗೋಸ್ವಾಮಿ ಮತ್ತು ತಾರಲೋಕಸಿಂಗ್ ಮುಂತಾದ ಕೆಲವು ಆರಂಭಿಕ ಬರಹಗಾರರು ಅಭಿವೃದ್ಧಿ ಆಡಳಿತವನ್ನು ಕೇವಲ ಕೆಲವು ಅಭಿವೃದ್ಧಿಯಲ್ಲಿ ತೊಡಗಿರುವ ಇಲಾಖೆಗಳಲ್ಲಿ ಮಾತ್ರ, ಉದಾಹರಣೆಗೆ ಗ್ರಾಮೀಣಾಭಿವೃದ್ಧಿ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಮುಂತಾದವುಗಳಲ್ಲಿ ಮಾತ್ರ ಗುರುತಿಸಿದರು. ಆದರೆ, ಡಬ್ಲ್ಯೂ.ಉಡ್. ಎಂಬುವರು ಬೆಟ್ಟು ಮಾಡಿ ತೋರಿಸಿದಂತೆ, ಸಾರ್ವಜನಿಕ ಆಡಳಿತವನ್ನು ಹೀಗೆ ಅಭಿವೃದ್ಧಿ ಮತ್ತು ಅಭಿವೃದ್ಧೀಯೇತರ ಭಾಗಗಳಾಗಿ ಮಾಡುವುದು ಮತ್ತು ನೋಡುವುದು ಕೃತಕವಾಗಿರುವುದಷ್ಟೇ ಅಲ್ಲದೆ ಅಪಾಯಕಾರಿಯೂ ಆಗಿರುತ್ತದೆ. ಅಭಿವೃದ್ಧಿಗೆ ಕೇವಲ ಅಭಿವೃದ್ಧಿ ಇಲಾಖೆಗಳ ಕೊಡುಗೆ ಇರುವುದಿಲ್ಲ. ಅಭಿವೃದ್ಧಿಯೇತರ ಅಥವಾ ನಿಯಂತ್ರಣ ಇಲಾಖೆಗಳೆಂದು ಹೆಸರಿಸಿಕೊಳ್ಳುವ ಪೋಲಿಸ್, ಕಂದಾಯ, ನ್ಯಾಯಾಂಗ ಮುಂತಾದ ಇಲಾಖೆಗಳೂ ಕಾನೂನು ಕಾಪಾಡುವುದು ತೆರಿಗೆ ಮೂಲಕ ಅಭಿವೃದ್ಧಿಗೆ ಸಂಪನ್ಮೂಲ ಒದಗಿಸುವುದೂ ಮುಂತಾದ ಅಭಿವೃದ್ಧಿ ಪೂರಕ ಕಾರ್ಯಗಳನ್ನು ಖಂಡಿತ ಮಾಡುತ್ತವೆ.

iii) ಮೂರನೇ ವಿಶ್ವರಾಷ್ಟಗಳಲ್ಲಿನ ಆಡಳಿತ

ಅಭಿವೃದ್ಧಿ ಆಡಳಿತ ಅಧ್ಯಯನಕ್ಕೆ ಬುನಾದಿ ಹಾಕಿದ ವೀಡ್ನರ್, ಸ್ವೆರ್ಡ್‌ಲೋವ್ ಮುಂತಾದವರು, ಅಭಿವೃದ್ಧಿ ಆಡಳಿತವನ್ನು ಮೂರನೇ ವಿಶ್ವರಾಷ್ಟಗಳಲ್ಲಿ ಮಾತ್ರ ಇದೆ ಎಂಬ ಅಭಿಪ್ರಾಯ ಹೊಂದಿದ್ದರು. ತುಲನಾತ್ಮಕ ಸಾರ್ವಜನಿಕ ಆಡಳಿತದ ಮತ್ತು ವಿದೇಶಿ ನೆರವಿನ ಸಂದರ್ಭದ ಇವರು ಅಧ್ಯಯನ ಮಾಡುತ್ತಿದ್ದ ಹಿನ್ನೆಲೆಯಲ್ಲಿ, ಈ ಅಭಿಪ್ರಾಯ ವಾಸ್ತವಿಕವಾಗಿತ್ತು. ಆದರೆ ಸೈದ್ಧಾಂತಿಕವಾಗಿ ಇದನ್ನು ಒಪ್ಪಲಾಗುವುದಿಲ್ಲ. ವಿಶ್ವದ ಎಲ್ಲಾ ರಾಷ್ಟಗಳಿಗೂ ಅಭಿವೃದ್ಧಿಯಲ್ಲಿ ಆಸಕ್ತಿ ಮತ್ತು ಭಾಗವಹಿಸುವಿಕೆಗಳೆರಡೂ ಇರುವುದರಿಂದ ಈ ಮೇಲಿನ ಅಭಿಪ್ರಾಯ ಸಮಂಜಸವಾಗಿಲ್ಲ.

## iv) ಎಲ್ಲಾ ರಾಷ್ಟಗಳ ಆಡಳಿತ

ವಿಶ್ವದ ಎಲ್ಲಾ ರಾಷ್ಟಗಳೂ ಅಭಿವೃದ್ಧಿಯಲ್ಲಿ ಆಸಕ್ತಿ ಮತ್ತು ಭಾಗವಹಿಸುವಿಕೆ ಹೊಂದಿರುವುದರಿಂದ ವಿಶ್ವದ ಎಲ್ಲಾ ರಾಷ್ಟಗಳ ಆಡಳಿತಗಳೂ ಹೆಚ್ಚು ಕಡಿಮೆ ಅಭಿವೃದ್ಧಿ ಆಡಳಿತಗಳೇ ಆಗಿವೆ. ಇದನ್ನು ಗಮನಿಸದೇ ವಿಶ್ವದ ರಾಷ್ಟಗಳನ್ನು 'ಅಭಿವೃದ್ಧಿ ಹೊಂದಿದೆ' ಮತ್ತು 'ಅಭಿವೃದ್ಧಿ ಹೊಂದುತ್ತಿರುವ' ಅಥವಾ 'ಅಭಿವೃದ್ಧಿ ಶೀಲ' ರಾಷ್ಟಗಳೆಂದು ವಿಂಗಡಿಸುವುದು ಮತ್ತು ಇದರ ಆಧಾರದ ಮೇಲೆ ಅಭಿವೃದ್ಧಿ ಆಡಳಿತವನ್ನು ಗುರುತಿಸಲು ಹೋಗುವುದು ತರ್ಕಬದ್ಧವಾಗಿ ಕಾಣುವುದಿಲ್ಲ. ಆದ್ದರಿಂದ ವಾಲ್ಡೋ ಮುಂತಾದವರು ಅಭಿವೃದ್ಧಿ ಆಡಳಿತದ ವಿಶ್ವವ್ಯಾಪ್ತಿಯನ್ನು ಒತ್ತಿಹೇಳಿದ್ದಾರೆ.

ಆದರಿಂದ ಅಭಿವೃದ್ಧಿ ಆಡಳಿತದ ಪ್ರಾದೇಶಿಕ ವ್ಯಾಪ್ತಿಯನ್ನು ವಸಾಹತುಶಾಹಿಯೇತರ ಆಡಳಿತಗಳಗಾಗಲೀ, ಮೂರನೇ ವಿಶ್ವರಾಷ್ಟಗಳ ಆಡಳಿತಗಳಗಾಗಲೀ ಅಥವಾ ಸಾರ್ವಜನಿಕ ಆಡಳಿತದ ಕೆಲವೇ ಇಲಾಖೆಗಳಿಗೆ ಅಥವಾ ಭಾಗಗಳಗಾಗಲೀ ಸೀಮಿತಗೊಳಿಸುವುದು ಸಮಂಜಸವಲ್ಲ. ತಾತ್ವಿಕವಾಗಿ ವಿಶ್ವದ ಎಲ್ಲಾ ಸಾರ್ವಜನಿಕ ಆಡಳಿತಗಳೂ ಹೆಚ್ಚು ಕಡಿಮೆ ಅಭಿವೃದ್ಧಿ ಆಡಳಿತಗಳೇ ಆಗಿವೆ ಎನ್ನಬಹುದು. ಆದರೂ, ನಾವು ವಾಸ್ತವಿಕವಾಗಿ ಅಭಿವೃದ್ಧಿಶೀಲ ಮೂರನೇ ವಿಶ್ವರಾಷ್ಟಗಳ ಸಾರ್ವಜನಿಕ ಆಡಳಿತಕ್ಕೆ ಸಂಬಂಧಿಸಿದಂತೆ ಹೆಚ್ಚಾಗಿ ಅಭಿವೃದ್ಧಿ ಆಡಳಿತದ ಬಳಕೆ ಇರುವುದನ್ನು ಮರೆಯುವಂತಿಲ.

## ಬಿ) ಕಳಕಳಿಗಳ ವ್ಯಾಪ್ತಿ

ಅಭಿವೃದ್ಧಿ ಆಡಳಿತಕ್ಕೆ ಅನೇಕ ಕಳಕಳಿವೆ. ಇವುಗಳನ್ನು ಪ್ರಕ್ರಿಯೆಯ ಕಳಕಳಿ ಮತ್ತು ಅಧ್ಯಯನದ ಕಳಕಳಿಗಳೆಂದು ಎರಡು ವರ್ಗಗಳಾಗಿ ಬೇರ್ಪಡಿಸಬಹುದು.

### ಪ್ರಕ್ರಿಯೆಯ ಕಳಕಳಿ

ಒಂದು ಪ್ರಕ್ರಿಯೆಯಗಿ ನಡೆಯುವ ಅಭಿವೃದ್ಧಿ ಆಡಳಿತ ಪಥದಲ್ಲಿ ನಾವು 1) ಗುರಿಗಳು, 2) ಬದಲಾವಣೆ, 3) ಮೌಲ್ಯಗಳು, 4) ಯೋಜನೆ, 5) ಸರ್ಕಾರೀ ಮತ್ತು ಸರ್ಕಾರೇತರ ಕ್ರಿಯೆ ಹಾಗೂ 6) ನಾಗರೀಕ ಭಾಗವಹಿಸುವಿಕೆಗಳೆಂಬ ಕಳಕಳಿಗಳನ್ನು ಕಾಣುತ್ತೇವೆ.

### 1) ಗುರಿಗಳು

ಅಭಿವೃದ್ಧಿಯ ಗುರಿಗಳು ಮತ್ತು ಅವುಗಳ ಸಾಧನೆಗಳು ಅಭಿವೃದ್ಧಿ ಆಡಳಿತದ ಪ್ರಥಮ ಕಳಕಳಿಗಳಾಗಿವೆ. ವಿಡ್ನರ್ ಅವರು ಅಭಿವೃದ್ಧಿ ಆಡಳಿತವನ್ನು 'ಗುರಿ ಅಭಿಮುಖ ಮತ್ತು ಕ್ರಿಯೆ ಅಭಿಮುಖ ಆಡಳಿತವೆಂದೇ ಬಣ್ಣಿಸಿರುವುದನ್ನು ಈ ಹಿಂದೆಯೇ ಗಮನಿಸಿದ್ದೇವೆ. ಇದು ಬರುವ ತನಕ ಸಾರ್ವಜನಿಕ ಆಡಳಿತವು ಗುರಿಗಳನ್ನು ಮರೆತು ಬರೀ ಸಾಧನೆಗಳ ಬೆನ್ನು ಹತ್ತಿತ್ತು ಎಂಬುದು ಅವರ ಅನ್ನಿಸಿಕೆಯಾಗಿತ್ತು. ಈ ಹಿನ್ನೆಲೆಯಲ್ಲಿ ಸಾಮಾಜಿಕ ಬದಲಾವಣೆಗಳಂತಹ ಮೌಲ್ಯಯುತ ಗುರಿಗಳನ್ನು ಉದ್ದೇಶಿಸುತ್ತಾ ಚಲಿಸುವ ಅಭಿವೃದ್ಧಿ ಆಡಳಿತವು ಸಾರ್ವಜನಿಕ ಆಡಳಿತಕ್ಕಿಂತ ಹೆಚ್ಚು ಸಕಾರತ್ಮವೂ ಮತ್ತು ಪ್ರಸ್ತುತವೂ ಆಗಿದೆ.

### 2) ಬದಲಾವಣೆ

ಸಾಂಪ್ರದಾಯಿಕ ಸಾರ್ವಜನಿಕ ಆಡಳಿತವೂ ಮೂಲತಃ ಯಥಾಸ್ಥಿತಿವಾದಿಯೂ, ಚಲನೆರಹಿತವೂ ಹಾಗೂ ನಿಯಂತ್ರಣಾಭಿಮುಖವೂ ಆಗಿತ್ತು. ಇದಕ್ಕೆ ವಿರುದ್ಧವಾಗಿ ಅಭಿವೃದ್ಧಿ ಆಡಳಿತವು ಸಾಮಾಜಿಕ ಹಾಗೂ ಆಡಳಿತಾತ್ಮಕ 'ಬದಲಾವಣೆ'ಯನ್ನು ಅರಸುತ್ತದೆ.

### 3) ಮೌಲ್ಯಗಳು

ಸಾಂಪ್ರದಾಯಿಕ ಸಾರ್ವಜನಿಕ ಆಡಳಿತವೂ 'ಮೌಲ್ಯ-ತಾಟಸ್ಥತೆ'ಯನ್ನು ಪ್ರತಿಪಾದಿಸುತ್ತಿತ್ತು. ಒಂದು ಪ್ರಮುಖ ಸಾಮಾಜಿಕ ಮತ್ತು ಮಾನವೀಯ ಪ್ರಕ್ರಿಯೆಯಾದ ಸಾರ್ವಜನಿಕ ಆಡಳಿತಕ್ಕೆ ಇದು ಭೂಷಣವಾಗಿರಲಿಲ್ಲ. ಎರಡನೇ ಮಹಾಯುದ್ಧದ ನಂತರದ ಕಾಲದಲ್ಲಿ ಬಂದ 'ಹೊಸ ಸಾರ್ವಜನಿಕ ಆಡಳಿತ' ಮತ್ತು "ಅಭಿವೃದ್ಧಿ ಆಡಳಿತ" ಅಧ್ಯಯನ ಮಾರ್ಗಗಳೆರಡೂ ಸಾರ್ವಜನಿಕ ಆಡಳಿತವನ್ನು ಮೌಲ್ಯಗಳತ್ತ ಒಯ್ಯಲು ಸೆಣಿಸಿದವು. ಅಭಿವೃದ್ಧಿ ಆಡಳಿತವನ್ನು, ಫೈನಾಸಾಡ್ ಅವರು "ಹೊಸ ಮೌಲ್ಯಗಳ ವಾಹಕ" ವೆಂದೇ ಬಣ್ಣಿಸಿದರು. ಅಭಿವೃದ್ಧಿ ಆಡಳಿತವು ಸರಿಯಾದ ಮತ್ತು ನ್ಯಾಯಯುತವಾದ ಮೌಲ್ಯಗಳಿಗಾಗಿ ತೀವ್ರಕಳಕಳಿಯನ್ನು ತೋರಿ ಕಾರ್ಯನಿರ್ವಹಿಸುತ್ತದೆ.

### 4) ಯೋಜನೆಗಳು

ಅಭಿವೃದ್ಧಿ ಆಡಳಿತವನ್ನು "ಯೋಜಿತ ಬದಲಾವಣೆಯ ಆಡಳಿತ"ವೆಂದೇ ಅನೇಕರು ಬಣ್ಣಿಸಿದ್ದಾರೆ. ನಿರ್ವಹಣಾಶಾಸ್ತ್ರದ ಯೋಜನೆ ಬಗೆಗಿನ ಕಳಕಳಿಗಿಂತ ಅಭಿವೃದ್ಧಿ ಆಡಳಿತಕ್ಕೆ ಯೋಜನೆಯ ಬಗ್ಗೆ ಒಂದು ಕೈ ಹೆಚ್ಚು ಕಳಕಳಿ ಇದೆ. ಯೋಜನೆಯಲ್ಲಿ ಅಭಿವೃದ್ಧಿ ಆಡಳಿತದ ಆಸಕ್ತಿ ರಾಷ್ಟ್ರೀಯ ಅಭಿವೃದ್ಧಿ ಯೋಜನೆಯಿಂದ ಆರಂಭಿಸಿ ಅದನ್ನು ಕಾರ್ಯಗತ ಮಾಡಲು, ಎಲ್ಲಾ ಮಟ್ಟದಲ್ಲೂ ನೆರವಾಗುವ ಎಲ್ಲಾ ಅದರ ಜನ್ಯ ಅಥವಾ ಆಧಾರಿತ ಉಪಯೋಜನೆಗಳಿಗೂ ವಿಸ್ತರಿಸುತ್ತದೆ.

### 5) ಸರ್ಕಾರೀ ಮತ್ತು ಸರ್ಕಾರೇತರ ಕ್ರಿಯೆ

ಅಭಿವೃದ್ಧಿ ಆಡಳಿತದ ಆರಂಭದಲ್ಲಿ ರಾಷ್ಟ್ರದ ಅಭಿವೃದ್ಧಿಗಾಗಿ ಸರ್ಕಾರೀ ಕ್ರಿಯೆಯನ್ನೇ ಅವಲಂಬಿಸಬೇಕೆಂಬುದು ಒಂದು ಮೂಲವಾದವಾಗಿತ್ತು. ಮೂರನೇ ವಿಶ್ವ ರಾಷ್ಟ್ರಗಳಲ್ಲಿ ಆ ಕಾಲದಲ್ಲಿ ಖಾಸಗೀ ಉದ್ಯಮ ಕ್ಷೇತ್ರ ಅಷ್ಟಾಗಿ ಬೆಳೆಯದೇ ಇದ್ದುದು ಹಾಗೂ ವಿದೇಶೀ ಉದ್ಯಮಗಳಿಗೆ ಅಭಿವೃದ್ಧಿ ಕಾರ್ಯಗಳನ್ನು ಒಪ್ಪಿಸುವ ವಿರುದ್ಧ ಇದ್ದ ನವರಾಷ್ಟ್ರೀಯತೆಯ ಜನಾಭಿಪ್ರಾಯಗಳೂ ಇದಕ್ಕೆ ಕಾರಣವಾಗಿದ್ದವು. ಆದರೆ ಕಾಲ ಬದಲಾದಂತೆ, ರಾಷ್ಟ್ರಗಳು ಅಭಿವೃದ್ಧಿ ಹೊಂದಿದಂತೆ ಈ ಪರಿಸ್ಥಿತಿಯು ಬದಲಾಗಿ ಈಗ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಬಲಗೊಂಡಿರುವ ಆಂತರಿಕ ಹಾಗೂ ವಿದೇಶಿ ಖಾಸಗೀ ಮತ್ತಿತರ ಉದ್ಯಮಗಳ ಭಾಗವಹಿಸುವಿಕೆಯೂ ಸಾಮಾನ್ಯವಾಗಿದೆ. ಅಭಿವೃದ್ಧಿ ಆಡಳಿತವು ಈಗ ನಾಗರೀಕ ಸಮಾಜ, ಖಾಸಗೀ ಕ್ಷೇತ್ರ ಮತ್ತು ಸರ್ಕಾರೇತರ ಸಂಘಟನೆಗಳೂ ಭಾಗವಹಿಸುವ ಒಂದು ಪ್ರಕ್ರಿಯೆಯಾಗಿದೆ. ಆದರೆ ಸಮಾಜದ ಅತೀ ಪ್ರಬಲ, ಅತೀ ಜವಾಬ್ದಾರಿ ಮತ್ತು ಸಾರ್ವಜನಿಕ ಹೊಣೆಗಾರಿಕೆಗಳುಳ್ಳ ಸರ್ಕಾರವು ರಾಷ್ಟ್ರದ ಅಭಿವೃದ್ಧಿಯನ್ನು ನಿರ್ದೇಶಿಸುವ ಮತ್ತು ಆದೇಶಿಸುವ ತನ್ನ ಹೊಣೆಯನ್ನು ಯಾವಾಗಲೂ ಮತ್ತು ಎಲ್ಲೆಡೆಯೂ ತಾನೇ ನಿರ್ವಹಿಸುವ ಅನಿವಾರ್ಯವಾಗಿದೆ.

### 6) ನಾಗರೀಕ ಭಾಗವಹಿಸುವಿಕೆ

ಅಭಿವೃದ್ಧಿಯು ಮೂಲತಃ ಒಂದು "ಜನರ" ಮತ್ತು "ಜನರಿಗಾಗಿ" ನಡೆಯುವ ಪ್ರಕ್ರಿಯೆಯಾಗಿದೆ. ಇದು ವಾಸ್ತವಿಕವಾಗಿ ಅಥವಾ ನಿಜವಾಗಿ ಹೀಗಾಗದೆ ಕೆಲವು ಪಟ್ಟಭದ್ರರ ಕೈ ಪಾಲಾಗಬಹುದು. ಅದು ನಿಜವಾಗಿಯೂ 'ಜನರ' ಮತ್ತು 'ಜನರಿಗಾಗಿ' ಇರುವ ಅಭಿವೃದ್ಧಿಯಾಗಬೇಕಾದರೆ ಅದು 'ಜನರಿಂದ' ನಡೆಯುವ ಅಭಿವೃದ್ಧಿಯೇ ಆಗಬೇಕು. ಅಭಿವೃದ್ಧಿ ಆಡಳಿತದಲ್ಲಿ ನಾಗರೀಕರ ಭಾಗವಹಿಸುವಿಕೆಗೆ ಬಲವಾದ ಪಾತ್ರ ಉಂಟು. ಸ್ವಾತಂತ್ರ ಬಂದ ತಕ್ಷಣ ಆರಂಭವಾದ ಭಾರತದ ಗ್ರಾಮೀಣ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ ಇದರ ಆಧಾರದ ಮೇಲಿತ್ತು. ನಂತರದ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳು. ಮತ್ತು ಯೋಜನೆಗಳಲ್ಲೂ ಇದನ್ನು ಬಾಯಿ ಮಾತಿಗಾದರೂ ಪುನರುಚ್ಚಾರ ಮಾಡುತ್ತಲೇ ಬಂದಿದ್ದೇವೆ. ಆದರೆ, ಜನರ ಭಾಗವಹಿಸುವಿಕೆ ಇನ್ನೂ ಬರೀ ಕಾಗದದ ಮೇಲೆ ಹೆಚ್ಚಿರುವುದು ದುರದೃಷ್ಟಕರವಾಗಿದೆ.

## ಅಧ್ಯಯನದ ಕಳಕಳಿಗಳು

ಒಂದು ಅಧ್ಯಯನವಾಗಿ ಅಭಿವೃದ್ಧಿ ಆಡಳಿತವು ಕೆಲವು ವಿಶಿಷ್ಟ ಕಳಕಳಿಗಳನ್ನು ಹೊಂದಿದೆ. ಇವುಗಳಲ್ಲಿ 1) ಅಭಿವೃದ್ಧಿ ಸಮಸ್ಯೆ 2) ಅಭಿವೃದ್ಧಿ ಪರಿಸರ-ಸಂಬಂಧ, 3) ಅಭಿವೃದ್ಧಿಯ ಸೈದ್ಧಾಂತಿಕ ನೆಲೆ, 4) ಅಭಿವೃದ್ಧಿ ನೀತಿ, 5) ಅಭಿವೃದ್ಧಿ ಯೋಜನೆ, 6)ಅಭಿವೃದ್ಧಿ ಆಡಳಿತ ಸಿಬ್ಬಂಧಿ, 7) ಅಭಿವೃದ್ಧಿ ಸಂಘಟನೆ, 8) ಅಭಿವೃದ್ಧಿ ನಿರ್ವಹಣೆ ಮತ್ತು 9) ಅಭಿವೃದ್ಧಿ ಹಣಕಾಸು ಆಡಳಿತಗಳನ್ನು ಹೊಂದಿದೆ.

## 1) ಅಭಿವೃದ್ಧಿ ಸಮಸ್ಯೆ

ದೇಶದ ಅಭಿವೃದ್ಧಿ ಸಮಸ್ಯೆಗಳನ್ನು ಗುರುತಿಸಿ, ವಿಶ್ಲೇಷಿಸಿ ಪರಿಹಾಗಳನ್ನು ಕಂಡುಹಿಡಿದು ಜಾರಿಗೆ ತರುವುದು ಅಭಿವೃದ್ಧಿ ಆಡಳಿತದ ಪ್ರಮುಖ ಕಳಕಳಿಯಾಗಿದೆ. ಆದ್ದರಿಂದ ಅಭಿವೃದ್ಧಿ ಆಡಳಿತವು ಅಭಿವೃದ್ಧಿ ಸಮಸ್ಯೆಯನ್ನು ಗುರುತಿಸಿರುವುದರಿಂದ ಆರಂಭವಾಗುತ್ತದೆ.

## 2) ಅಭಿವೃದ್ಧಿ ಪರಿಸರ –ಸಂಬಂಧ

ಅಭಿವೃದ್ಧಿ ಸಮಸ್ಯೆಯಾಗಲೀ ಅಥವಾ ಅದರ ಆಡಳಿತವಾಗಲೀ ಒಂದು ಪರಿಸರದಲ್ಲೇ ಹುಟ್ಟಿ, ಅದರಲ್ಲೇ ತಮ್ಮ ಉಳಿವು, ಅಳಿವು ಅಥವಾ ಗೆಲುವುಗಳನ್ನು ಕಾಣುತ್ತೇವೆ. ತಮ್ಮ ಪರಿಸರ ಅವುಗಳಿಗೆ ಒಂದು ಪರಸ್ಪರ ಸಂಬಂಧವಿರುತ್ತದೆ. ಒಂದರ ಮೇಲೆ ಒಂದು ಪರಸ್ಪರ ಪ್ರಭಾವ ಬೀರುತ್ತದೆ. ಆದ್ದರಿಂದ ಅಭಿವೃದ್ಧಿ ಆಡಳಿತವು ಅಭಿವೃದ್ಧಿ ಸಮಸ್ಯೆಗಳಿಗೇ ಪರಿಹಾರ ನೀಡುವಾಗ ಅದರೆ ಸಾಮಾಜಿಕ, ಆರ್ಥಿಕ, ರಾಜಕೀಯ, ಭೌಗೋಳಿಕ ಮತ್ತು ಸಾಂಸ್ಕೃತಿಕ ಪರಿಸರದ ಚೌಕಟ್ಟಿನಲ್ಲೇ ಕಾರ್ಯವಾಡಬೇಕಾಗುತ್ತದೆ. ಎಫ್.ಡಬ್ಲೂ.ರಿಗ್ಸ್ ರವರು ಈ ಪರಿಸರ ಮತ್ತು ಅಭಿವೃದ್ಧಿ ಆಡಳಿತದ ಸಂಬಂಧಗಳನ್ನು ಉತ್ತಮವಾಗಿ ವಿಶ್ಲೇಷಿಸಿ ವಿವರಿಸಿದ್ದಾರೆ. ಈ ಪತ್ರಿಕೆಯ ಎರಡನೇ ಬ್ಲಾಕ್‌ನಲ್ಲಿ ವಿಶೇಷವಾಗಿ ಈ ವಿಚಾರವನ್ನೇ ಕುರಿತು ಅಧ್ಯಯನ ಮಾಡುತ್ತೇವೆ.

## 3) ಅಭಿವೃದ್ಧಿ ಸಿದ್ಧಾಂತ

ಅಭಿವೃದ್ಧಿಯು ಒಂದು ಮೌಲ್ಯಧಾರಿತ ವ್ಯವಹಾರ ಅಭಿವೃದ್ಧಿ ಆಡಳಿತವನ್ನು, ಆದ್ದರಿಂದಲೇ ಒಂದು ಉತ್ತಮ ಹಾಗೂ ನವೀನ ಮೌಲ್ಯಗಳ ವಾಹಕ ಎಂದು ಪರಿಗಣಿಸಲಾಗಿದೆ. ಒಂದು ದೇಶದ ಜನರ ಅಭಿವೃದ್ಧಿ ಸಿದ್ಧಾಂತವು ಆದರ ಅಭಿವೃದ್ಧಿಯ ಮೌಲ್ಯದ – ಚೌಕಟ್ಟನ್ನು ಒದಗಿಸುತ್ತದೆ. ಒಂದು ದೇಶದ ಸಂವಿಧಾನ, ಆಳುವ-ಪಕ್ಷಗಳ ಸೈದ್ಧಾಂತಿಕ ನೆಲೆ, ಸರ್ಕಾರದ ನೀತಿ, ಯೋಜನೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ನಡೆಸುವ ರೀತಿಗಳಲ್ಲಿ ಹಾಗೂ ಅಲ್ಲಿನ ಜನರ ನಡವಳಿಕೆಗಳಲ್ಲಿ ಈ ಸಿದ್ಧಾಂತ ಮತ್ತು ಮೌಲ್ಯಗಳು ಕಂಡುಬರುತ್ತವೆ. ಪ್ರತೀ ಅಭಿವೃದ್ಧಿ ಆಡಳಿತದ ಅಧ್ಯಯನವು ಈ ಸಿದ್ಧಾಂತ ಮತ್ತು ಮೌಲ್ಯಗಳನ್ನು ಅರಿತು, ತನ್ನ ಕಾರ್ಯಕ್ರಮಗಳಲ್ಲಿ ಅಳವಡಿಸಿ, ಬದ್ಧತೆ ತೋರುವುದೇ ಅಲ್ಲದೇ ಅವುಗಳನ್ನು ಸರಿಯಾಗಿ ರೂಪಿಸುವುದರಲ್ಲೂ ಸಹಾಯ ಮಾಡಬೇಕು.

## 4) ಅಭಿವೃದ್ಧಿ ನೀತಿ

ಅಭಿವೃದ್ಧಿ ನೀತಿಯು ಅಭಿವೃದ್ಧಿ ಆಡಳಿತದ ಮಾರ್ಗದರ್ಶಿಯಾಗಿರುತ್ತದೆ. ಈ ಅಭಿವೃದ್ಧಿ ನೀತಿಗಳನ್ನು ಅಭಿವೃದ್ಧಿ ಸಿದ್ಧಾಂತ ಮತ್ತು ಅವಶ್ಯಕತೆಗಳ ಆಧಾರದ ಮೇಲೆ ಸರ್ಕಾರಗಳು ರೂಪಿಸುತ್ತವೆ. ಅಭಿವೃದ್ಧಿ ಆಡಳಿತದ ಈ ನೀತಿಯ ಅಧ್ಯಯನ ಮತ್ತು ರೂಪಿಸುವ ಹೊಣೆಯನ್ನು ಹೊತ್ತಿದೆ.

**5) ಅಭಿವೃದ್ಧಿ ಯೋಜನೆಗಳು**

ಯೋಜನೆಗಳು ಅಭಿವೃದ್ಧಿಯ ಪ್ರಾಥಮಿಕ ಅಗತ್ಯವಾಗಿರುತ್ತವೆ. ಅಭಿವ್ಯಕ್ತಿ ಆಡಳಿತದ ಅಧ್ಯಯನವು ಅಭಿವೃದ್ಧಿ ಯೋಜನಗೆಳ ಪ್ರಕೃತಿ, ಯೋಜನಾ ಪ್ರಕ್ರಿಯೆ, ಯೋಜನಾ ವ್ಯವಸ್ಥೆ ಮತ್ತು ಯೋಜನಾ ಕಾರ್ಯಗತ ವಿಧಾನಗಳನ್ನು ಅಧ್ಯಯನ ಮಾಡುತ್ತದೆ.

**6) ಅಭಿವೃದ್ಧಿ ಆಡಳಿತ ಸಿಬ್ಬಂಧಿ ಅಥವಾ ನೌಕರಶಾಹಿ**

ಒಂದು ದೇಶದ ಅಭಿವೃದ್ಧಿ ಆಡಳಿತವು ಅಲ್ಲಿನ ಸರ್ಕಾರೀ ಸಿಬ್ಬಂಧಿ ಅಥವಾ ನೌಕರಶಾಹಿಯನ್ನು ಬಹಳವಾಗಿ ಅವಲಂಬಿಸಿರುತ್ತದೆ. ಒಂದು ಅಧ್ಯಯನವಾಗಿ ಅಭಿವೃದ್ಧಿ ಆಡಳಿತವು ನೌಕರಶಾಹಿ ಮತ್ತು ಅಭಿವೃದ್ಧಿಗಳ ಸಂಬಂಧವನ್ನು ಅಧ್ಯಯನ ಮಾಡುತ್ತದೆ ಹಾಗೂ ಅದನ್ನು ಒಂದು ಅಭಿವೃದ್ಧಿ ಪರ ನೌಕರಶಾಹಿಯನ್ನಾಗಿ ರೂಪಿಸುವುದರದಲ್ಲಿ ಸಹಾಯ ಮಾಡುತ್ತದೆ.

**7) ಅಭಿವೃದ್ಧಿ ಸಂಘಟನೆ**

ಒಂದು ಅಭಿವೃದ್ಧಿ ಆಡಳಿತ ಕಾರ್ಯಕ್ರಮದ ಸಫಲತೆ ಅದನ್ನು ನಿರ್ವಹಿಸುವ ಆಡಳಿತ ಸಂಘಟನೆಯನ್ನು ಅವಲಂಬಿಸಿರುತ್ತದೆ. ಅಭಿವೃದ್ಧಿ ಕಾರ್ಯಕ್ರಮ ಮತ್ತು ಅದರ ಅಭಿವೃದ್ಧಿ ಸಂಘಟಣೆ ಅಥವಾ ಆಡಳಿತದ ರಚನೆಗಳ ನಡುವಿನ ಹೊಂದಾಣಿಕೆ ತುಂಬಾ ಅಗತ್ಯವಾಗಿರುತ್ತದೆ. ಆದ್ದರಿಂದ, ಅಭಿವೃದ್ಧಿ ಸಂಘಟನೆಯ ಸಮಸ್ಯೆಗಳಲ್ಲಿ ಬಗ್ಗೆ ಅಭಿವೃದ್ಧಿ ಆಡಳಿತದ ಕಳಕಳಿ ವಿಶೇಷವಾಗಿರುತ್ತದೆ.

**8) ಅಭಿವೃದ್ಧಿ ನಿರ್ವಹಣೆ**

ಅಭಿವೃದ್ಧಿ ನಿರ್ವಹಣೆ ಒಂದು ಕ್ಲಿಷ್ಟ ಸಮಸ್ಯೆ. ಇದು ಸರ್ಕಾರದ ನಿರ್ವಹಣಾ ಕಾರ್ಯಗಳ ನಿರ್ವಹಣೆ ಅಥವಾ ವ್ಯಾಪಾರ ನಿರ್ವಹಣೆಗಿಂತ ಭಿನ್ನ ಅವಶ್ಯಕತೆಗಳನ್ನು ಹೊಂದಿದೆ. ಅಭಿವೃದ್ಧಿ ಆಡಳಿತವು, ಒಂದು ಅಧ್ಯಯನವಾಗಿ ಈ ಅಭಿವೃದ್ಧಿ ನಿರ್ವಹಣೆಯ ಪ್ರಕೃತಿ ಮತ್ತು ಪ್ರಕ್ರಿಯೆಗಳನ್ನು ವಿಶ್ಲೇಷಣೆ, ಒಂದು ಸೂಕ್ತ ಅಭಿವೃದ್ಧಿ ನಿರ್ವಹಣಾ ತತ್ವ, ಸೂತ್ರಗಳು ತಂತ್ರಗಳು ಮತ್ತು ಪ್ರಕ್ರಿಯೆಗಳನ್ನು ರೂಪಿಸುವ ವಿಚಾರಗಳಲ್ಲಿ ಸ್ವಾಭಾವಿಕವಾದ ಮತ್ತು ಅಧಿಕವಾದ ಆಸಕ್ತಿ ಹೊಂದಿದೆ.

**9) ಅಭಿವೃದ್ಧಿ ಹಣಕಾಸು ಆಡಳಿತ**

ಸಂಪ್ರದಾಯಸ್ಥ ಸಾರ್ವಜನಿಕ ಆಡಳಿತದಲ್ಲಿ ಅದರಲ್ಲೂ ವಿಶೇಷವಾಗಿ ನಮ್ಮ ದೇಶದಲ್ಲಿ ಹಿಂದೆ ಇದ್ದ ವಸಾಹತುಶಾಹಿ ಆಡಳಿತದಲ್ಲಿ ಹಣಕಾಸು ಆಡಳಿತ ವ್ಯವಸ್ಥೆಯು ಪ್ರಧಾನವಾಗಿ ನಿಯಂತ್ರಣಾ ಸೂತ್ರದ ಮೇಲೆ ರಚಿಸಲಾಗಿತ್ತು. ಅಭಿವೃದ್ಧಿ ಸಂದರ್ಭದ ಹಣಕಾಸು ಆಡಳಿತವು ಸ್ವಾಯತ್ತತೆ ಮತ್ತು ಪರಿಣಾಮಕರತೆ ಸೂತ್ರಗಳನ್ನು ಆಧರಿಸಿದ ಬೇಕಾಗುತ್ತದೆ. ಈ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳು ಮತ್ತು ಅಭಿವೃದ್ಧಿ ಆಡಳಿತಕ್ಕೆ ಪೂರಕವಾದ ಹಣಕಾಸು ಆಡಳಿತಕ್ಕೆ ಅಗತ್ಯವಾದ ಮತ್ತು ಆಗಬೇಕಾದ ವಿಷಯಗಳ ಬಗ್ಗೆ ಅಭಿವೃದ್ಧಿ ಆಡಳಿತದ ಸ್ವಾಭಾವಿಕ ಕಳಕಳಿ ಇದೆ.

**ಸಿ) ಅಧ್ಯಯನ ವಿಧಾನಗಳ ವ್ಯಾಪ್ತಿ**

ಅಭಿವೃದ್ಧಿಯ ಮೌಲ್ಯಾಧಾರಿತ ಹಿನ್ನಲೆಯಲ್ಲಿ ಅಭಿವೃದ್ಧಿ ಆಡಳಿತ ಅಧ್ಯಯನದ ಆರಂಭದಲ್ಲಿ ಸಾಂಪ್ರದಾಯಿಕ ಅಧ್ಯಯನ ಮಾರ್ಗಗಳು ಅಂದರೆ ತತ್ವಶಾಸ್ತ್ರೀಯ ಮಾರ್ಗ ಅಥವಾ ಆದರ್ಶ ಸೂತ್ರಾನ್ವೇಷಣೆಯ ಮಾರ್ಗಗಳನ್ನು ಹೆಚ್ಚು ಅವಲಂಭಿಸಲಾಗಿತ್ತು. ನಂತರದಲ್ಲಿ ಅನುಭವಾತ್ಮಕ ಅಥವಾ ವಸ್ತುನಿಷ್ಠ ವಿವರಾಣಾತ್ಮಕ ವಿಧಾನಗಳು, ತುಲನಾತ್ಮಕ ವಿಧಿಗಳು ಮತ್ತು ಸಂಗತಿ ವಿಶ್ಲೇಷಣೆಗಳಂತಃ ವೈಜ್ಞಾನಿಕ ಅಧ್ಯಯನ ವಿಧಾನಗಳ ಬಳಕೆಯು ಹೆಚ್ಚಾಗಿದೆ.

## ನಿಮ್ಮ ಪ್ರಗತಿ ಪರಿಶೀಲನೆ –1

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. ಅಭಿವೃದ್ಧಿ ಆಡಳಿತದ ಪ್ರಕ್ರಿಯೆ ಮತ್ತು ಅಧ್ಯಯನಗಳೆರಡೂ ಸೇರಿದಂತೆ ಅಭಿವೃದ್ಧಿ ಆಡಳಿತದ ಪ್ರಕೃತಿಯನ್ನು ವಿಶ್ಲೇಷಿಸಿ.**

------------------------------------------------------------

------------------------------------------------------------

------------------------------------------------------------

------------------------------------------------------------

**2. ಸಾಂಪ್ರದಾಯಿಕ ಸಾರ್ವಜನಿಕ ಆಡಳಿತ ಮತ್ತು ಅಭಿವೃದ್ಧಿ ಆಡಳಿತಗಳ ಗುಣಗಳನ್ನು ಪಟ್ಟಿ ಮಾಡಿ.**

------------------------------------------------------------

------------------------------------------------------------

------------------------------------------------------------

------------------------------------------------------------

**3. ಅಭಿವೃದ್ಧಿ ಆಡಳಿತದ ವ್ಯಾಪ್ತಿಯನ್ನು ವಿವರಿಸಿ.**

------------------------------------------------------------

------------------------------------------------------------

------------------------------------------------------------

------------------------------------------------------------

## 2.5 ಸಾರಾಂಶ

ಅಭಿವೃದ್ಧಿ ಆಡಳಿತವು 1950 ಮತ್ತು 1960ರ ದಶಕಗಳಲ್ಲಿ ಉಗಮವಾಯಿತು. ಅದಕ್ಕೆ ತನ್ನದೇ ಆದ ಪ್ರಕೃತಿ, ಗುಣಗಳು ಮತ್ತು ವ್ಯಾಪ್ತಿ ಇದೆ. ಅಭಿವೃದ್ಧಿ ಆಡಳಿತದ ಪ್ರಕೃತಿ ಮತ್ತು ವ್ಯಾಪ್ತಿಗಳನ್ನು ಅದರ ಪ್ರಕ್ರಿಯೆ ಮತ್ತು ಅಧ್ಯಯನ ರೂಪಗಳೆರಡರಲ್ಲೂ ಬೇರ್ಪಡಿಸಿ ನೋಡಬಹುದು.

ಒಂದು ಪ್ರಕ್ರಿಯೆಯಾಗಿ ಅಭಿವೃದ್ಧಿ ಆಡಳಿತದ ಪ್ರಕೃತಿಯಲ್ಲಿ ಕೆಳಕಂಡ ಅಂಶಗಳನ್ನು ಕಾಣುತ್ತೇವೆ. i) ಸಾರ್ವಜನಿಕ ಆಡಳಿತ ರಂಗದ ಪ್ರಕ್ರಿಯೆ ii) ಸಮಾಜದ ಸರ್ವಾಂಗೀಣ ಅಭಿವೃದ್ಧಿ ಪ್ರಕ್ರಿಯೆ iii) ಆಡಳಿತಾಭಿವೃದ್ಧಿ ಪ್ರಕ್ರಿಯೆ vi) ಪರಿಸರದೊಡನೆ ಪರಸ್ಪರ ಸಂಬಂಧಗಳ ಪ್ರಕ್ರಿಯೆ v) ಚಲನಾತ್ಮಕ ಪ್ರಕ್ರಿಯೆ ಮತ್ತು vi) ವಿಭಿನ್ನ ಕಳಕಳಿಗಳ ಪ್ರಕ್ರಿಯೆ

ಅಧ್ಯಯನವಾಗಿ ಅದರ ಪ್ರಕೃತಿಯಲ್ಲಿ ಕಂಡುಬರುವ ಅಂಶಗಳೆಂದರೆ : ಎ) ಸಾರ್ವಜನಿಕ ಆಡಳಿತದಲ್ಲಿನ ಅದರ ಬೇರು, ಬಿ) ಅದರ ಅನೇಕ ದೃಷ್ಟಿಕೋನಗಳು, ಸಿ) ಅದರ ಚಲನಾತ್ಮಕತೆ ಮತ್ತು ಡಿ) ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸಿದ ಅದರ ಗಮನ.

ಅಭಿವೃದ್ಧಿ ಆಡಳಿತಕ್ಕೆ ಸಾರ್ವಜನಿಕ ಆಡಳಿತಕ್ಕಿಂತ ಭಿನ್ನವಾದ ತನ್ನದೇ ಆದ ಲಕ್ಷಣಗಳಿವೆ : 1)ಮೌಲ್ಯಾಭಿಮುಖ 2) ಗುರಿ ಅಭಿಮುಖ, 3) ಬದಲಾವಣೆ ಅಭಿಮುಖ, 4) ಯೋಜನಾಭಿಮುಖ, 5) ಕ್ರಿಯೆ ಮತ್ತು ಕಾರ್ಯಕ್ರಮಾಭಿಮುಖ, 6) ಸಾಧನಾಭಿಮುಖ, 7)ನಿರ್ವಹಣಾಭಿಮುಖ, 8) ಭಾಗವಹಿಸುವಿಕೆ ಅಭಿಮುಖ.

ಅಭಿವೃದ್ಧಿ ಆಡಳಿತದ ವ್ಯಾಪ್ತಿಯೂ ವಿಶಾಲವೂ ಮತ್ತು ವಿವಾದಾತ್ಮಕವೂ ಆಗಿದೆ. ಅದರ ಪ್ರಾದೇಶಿಕ ವ್ಯಾಪ್ತಿಯು ಸೈದ್ಧಾಂತಿಕವಾಗಿ ವಿಶ್ವವ್ಯಾಪ್ತಿಯಾದರೂ ವಾಸ್ತವವಾಗಿ ಅದು ಮೂರನೇ ವಿಶ್ವ ರಾಷ್ಟ್ರಗಳ ಆಡಳಿತಕ್ಕೆ ಸೀಮಿತವಾಗಿದೆ. ಇಂದು ಪ್ರಕ್ರಿಯೆಯಾಗಿ ಅದರ ವ್ಯಾಪ್ತಿಯು ವಿಶಾಲವಾಗಿದೆ. ಇದರಲ್ಲಿ ಗುರಿ, ಬದಲಾವಣೆ, ಮೌಲ್ಯಗಳು, ಯೋಜನೆ, ಸರ್ಕಾರೀ ಮತ್ತು ಸರ್ಕಾರೇತರ ಕ್ರಿಯೆಗಳು ಅಡಕವಾಗಿವೆ. ಒಂದು ಅಧ್ಯಯನವಾಗಿ ಅದರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಸಮಸ್ಯೆ. ಅಭಿವೃದ್ಧಿ ಸಿದ್ಧಾಂತ, ಅಭಿವೃದ್ಧಿ ಪರಿಸರ –ಸಂಬಂಧ, ಅಭಿವೃದ್ಧಿ ನೀತಿ, ಅಭಿವೃದ್ಧಿ ಯೋಜನೆ, ಅಭಿವೃದ್ಧಿ ನೌಕರಶಾಹಿ, ಅಭಿವೃದ್ಧಿ ಸಂಘಟನೆ, ಅಭಿವೃದ್ಧಿ ನಿರ್ವಹಣೆ ಮತ್ತು ಅಭಿವೃದ್ಧಿ ಹಣಕಾಸು ಆಡಳಿತಗಳ ಅಧ್ಯಯನಗಳು ಕಂಡುಬರುತ್ತದೆ.

ಅಭಿವೃದ್ಧಿ ಆಡಳಿತದ ಅಧ್ಯಯನ ವಿಧಾನಗಳ ವ್ಯಾಪ್ತಿಯೂ ವಿಶಾಲವಾಗಿದೆ. ಸಾಂಪ್ರದಾಯಿಕ ಮತ್ತು ಆಧುನಿಕ ಅಧ್ಯಯನ ವಿಧಾನಗಳೆರಡನ್ನೂ ಬಳಸಲಾಗುತ್ತದೆ.

## 2.6 ಕಠಿಣ ಪದಗಳು

1. ಪ್ರಕ್ರಿಯೆ – ನಡೆಯುತ್ತಿರುವ ಅಭಿವೃದ್ಧಿ ಆಡಳಿತದ ಹರಿವು
2. ಅಧ್ಯಯನ – ಅಭಿವೃದ್ಧಿ ಆಡಳಿತ ಶಾಸ್ತ್ರ
3. ಸಾಮಾಜಿಕ ಅಭಿವೃದ್ಧಿ – ರಾಷ್ಟ್ರೀಯ ಅಥವಾ ಸಮುದಾಯದ ಅಭಿವೃದ್ಧಿ
4. ಪರಿಸರ – ಸಂಬಂಧ – ಅಭಿವೃದ್ಧಿ ಮತ್ತು ಪರಿಸರಗಳ ನಡುವಿನ ಪರಸ್ಪರ ಸಂಬಂಧಗಳು
5. ವಿಭಿನ್ನ – ಬೇರೆ ಬೇರೆ
6. ಕಳಕಳಿ – ಹಂಬಲ ಅಥವಾ ಆಸಕ್ತಿ

## 2.7 ಕೆಲವು ಉಪಯುಕ್ತ ಪುಸ್ತಕಗಳು


1. **ಎಂ. ಉಮಾಪತಿ** : *ಡೆವೆಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್ ಟುಡೇ*
2. **ಅರೋರ. ಆರ್ .ಕೆ** : *ಕಂಪ್ಯಾರಿಟಿವ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್*
3. **ಹೆಡಿ, ಫೆರೆಲ್** : *ಪಬ್ಲಿಕ್ ಅಡ್ಮಿನಿಸ್ಟ್ರೇಷನ್ :ಎ ಕಂಪ್ಯಾರಿಟಿವ್ ಪರ್ಸ್‌ಪೆಕ್ಟಿವ್*
4. **ವರ್ಮ ಎಸ್. ಪಿ. ಮತ್ತು ಶರ್ಮ ಎಸ್.ಕೆ** : *ಡೆವೆಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್ : ಕಾನ್ಸೆಪ್ಟ್ಸ್, ಗೋಲ್ಸ್ ಅಂಡ್ ಮೆಥಡ್ಸ್*

## 2.8 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರ

### ನಿಮ್ಮ ಪ್ರಗತಿ ಪರಿಶೀಲನೆ – 1

1. ಮೊದಲನೆಯ ಪ್ರಶ್ನೆಗೆ ನೋಡಿ ವಿಭಾಗ 2.2, 2.2.1 ಮತ್ತು 2.2.2
2. ಎರಡನೆಯ ಪ್ರಶ್ನೆಗೆ ನೋಡಿ ವಿಭಾಗ 2.3
3. ಮೂರನೆಯ ಪ್ರಶ್ನೆಗೆ ನೋಡಿ ವಿಭಾಗ 2.4 ರಿಂದ 2.4.3.

# ಘಟಕ – 3 : ಅಭಿವೃದ್ಧಿ ಆಡಳಿತದ ಪರಿಕಲ್ಪನೆ ಮತ್ತು ವಿವಿಧ ಸಿದ್ಧಾಂತಗಳು

**ರಚನೆ**

3.0 ಉದ್ದೇಶಗಳು

3.1 ಪರಿಚಯ

3.2 ಅಭಿವೃದ್ಧಿ ಪರಿಕಲ್ಪನೆ : ಪದ ಮತ್ತು ಅದರ ಅರ್ಥ

3.3 ಅಭಿವೃದ್ಧಿಯ ವಿವಿಧ ಮಾದರಿಗಳು, ಮಾರ್ಗಗಳು ಮತ್ತು ಸಿದ್ಧಾಂತಗಳು

- 3.3.1 ಪಾಶ್ಚ್ಯಾತೀಕರಣ ಅಥವಾ ಆಧುನೀಕರಣ ಮಾದರಿ
- 3.3.2. ಅಭಿವೃದ್ಧಿಯ ಬಗೆಗಿನ ವಿವಿಧ ಪಾಶ್ಚಿಮಾತ್ಯ ಸಿದ್ಧಾಂತಗಳು
- 3.3.3 ಸ್ವಾಯತ್ತ ಅಥವಾ ಬದಲೀ ಅಭಿವೃದ್ಧಿ ಮಾದರಿಗಳು
- 3.3.4 ಅಭಿವೃದ್ಧಿಯ ಬಗೆಗಿನ ಸಮಕಾಲೀನ ಸಿದ್ಧಾಂತಗಳು ಅಥವಾ ಮಾರ್ಗಗಳು

3.4 ಸಾರಾಂಶ

3.5 ಕಠಿಣ ಪದಗಳು

3.6 ಕೆಲವು ಉಪಯುಕ್ತ ಗ್ರಂಥಗಳು

3.7 ನಿಮ್ಮ ಪ್ರಗತಿ ಪರಿಶೀಲನಾ ಪ್ರಶ್ನೆಗಳಿಗೆ ಉತ್ತರಗಳು

## 3.0 ಉದ್ದೇಶಗಳು

- ಅಭಿವೃದ್ಧಿ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳುವುದು.
- ಅದರ ವಿವಿಧ ವಿವರಣೆಗಳನ್ನು ತಿಳಿಯುವುದು, ಮತ್ತು.
- ಅಭಿವೃದ್ಧಿಯ ಬಗೆಗಿನ ವಿವಿಧ ಮಾದರಿಗಳು, ಮಾರ್ಗಗಳು ಮತ್ತು ಸಿದ್ಧಾಂತಗಳನ್ನು ತಿಳಿಯುವುದು.

## 3.1 ಪರಿಚಯ

'ಅಭಿವೃದ್ಧಿ' ಎಂಬುದು ಒಂದು ಮೋಹಕ ಪದವಾಗಿದೆ. ಎರಡನೇ ಮಹಾಯುದ್ಧದ ನಂತರ ಇದರ ಬಳಕೆ ವ್ಯಾಪಕವಾಗಿದೆ. ವಸಾಹತುಗಳಾಗಿದ್ದ ಭಾರತದಂತಹ ಅನೇಕ ರಾಷ್ಟ್ರಗಳು 1945ರ ನಂತರ ಸ್ವಾತಂತ್ರ್ಯವನು ಪಡೆದು ಅಭಿವೃದ್ಧಿಯ ಕನಸು ಮತ್ತು ಪ್ರಯತ್ನಗಳನ್ನು ಹೊಂದಲಾರಂಭಿಸಿದ್ದು ಇದಕ್ಕೆ ಕಾರಣವಾಯಿತು. ಮೂರನೇ ವಿಶ್ವರಾಷ್ಟ್ರಗಳೆಂದು ಕರೆಯಲ್ಪಟ್ಟು ಇಂತಹಃ ರಾಷ್ಟ್ರಗಳು ಹಿಂದುಳಿದ ರಾಷ್ಟ್ರಗಳಾಗಿದ್ದವು. ಸ್ವಾತಂತ್ರ್ಯ ಪಡೆದ ನಂತರ 'ರಾಷ್ಟ್ರೀಯ ಅಭಿವೃದ್ಧಿ' ಮತ್ತು 'ರಾಷ್ಟ್ರೀಯ ಸಬಲೀಕರಣ' ಬಯಸುವುದು ಈ ರಾಷ್ಟ್ರಗಳಿಗೆ ಸ್ವಾಭಾವಿಕವಾಗಿತ್ತು. ಇದರಿಂದ ವ್ಯಕ್ತಿಗತವಾದ ಮಾನವ ಅಭಿವೃದ್ಧಿಯೂ ಆಗಬಹುದೆಂಬುದು ಈ ರಾಷ್ಟ್ರಗಳ ಜನರ ಬಯಕೆಯಾಯಿತು.

ಕಾಲ ಉರುಳಿದಂತೆ ಈ ರಾಷ್ಟ್ರಗಳಲ್ಲಿ ಅನೇಕ ತರಹದ ಅಭಿವೃದ್ಧಿ ಯೋಜನೆಗಳು, ನೀತಿಗಳು, ಕಾರ್ಯಕ್ರಮಗಳು, ಘಟಕಗಳು ಮತ್ತು ಸಂಸ್ಥೆಗಳೂ ಜಾರಿಗೆ ಬಂದವು. ಅಭಿವೃದ್ಧಿ ಬಗೆಗಿನ ಚರ್ಚೆ ಮತ್ತು ಚಿಂತನೆಗಳು ಹೆಚ್ಚಾದವು. ಪ್ರಜಾಪ್ರಭುತ್ವ , ಚುನಾವಣೆಗಳು, ವೈಚಾರಿಕ ಸ್ವಾತಂತ್ರ್ಯ, ಮಾಧ್ಯಮಗಳ ಅಭಿವೃದ್ಧಿ ಮತ್ತು ಶೈಕ್ಷಣಿಕ ಅಭಿವೃದ್ಧಿಯಾದಂತೆ ಇದಕ್ಕೆ ಪ್ರೋತ್ಸಾಹ ಸಿಕ್ಕಿತು. ವಿಶ್ವವಿದ್ಯಾನಿಲಯಗಳಲ್ಲಿ ಅಭಿವೃದ್ಧಿ ಅಧ್ಯಯನ ಶುರುವಾಯಿತು. ಸಮಾಜಶಾಸ್ತ್ರ ಇಲಾಖೆಗಳಲ್ಲಿ "ಅಭಿವೃದ್ಧಿ ಅರ್ಥಶಾಸ್ತ್ರ". 'ಅಭಿವೃದ್ಧಿ ಆಡಳಿತ' ಸಾಮಾಜಿಕ ಅಭಿವೃದ್ಧಿಶಾಸ್ತ್ರ, 'ರಾಜಕೀಯ ಅಭಿವೃದ್ಧಿ' ಮುಂತಾದವುಗಳ ಶಾಸ್ತ್ರೀಯ ಅಧ್ಯಯನವು ಆರಂಭವಾಯಿತು. ಕ್ರಮೇಣ ಅಭಿವೃದ್ಧಿ ಅಧ್ಯಯನಕ್ಕೆ ಮೀಸಲಿಟ್ಟ ವಿಶೇಷ ಸ್ನಾತಕಪೂರ್ವ ಮತ್ತು ಸ್ನಾತಕೋತ್ತರ ಪದವಿಗಳು ಮತ್ತು ಅಭಿವೃದ್ಧಿ ಅಧ್ಯಯನ ಸಂಸ್ಥೆಗಳೂ ಜಾರಿಗೆ ಬಂದವು.

ಈಗ ಅಂತರರಾಷ್ಟ್ರೀಯ ಶಾಂತಿ ಮತ್ತು ವ್ಯವಸ್ಥೆ, ಪ್ರಜಾಪ್ರಭುತ್ವ ಮತ್ತು ಮಾನವ ಹಕ್ಕುಗಳ ಉಳಿವು ಮತ್ತು ಬೆಳೆವುಗಳಿಗೂ ಅಭಿವೃದ್ಧಿಯ ಮೇಲಿನ ಒತ್ತು ಹೆಚ್ಚಿದೆ. ಇತ್ತೀಚೆಗೆ ವಿಶ್ವಸಂಸ್ಥೆಯು ಇತರ ಮಾನವ ಹಕ್ಕುಗಳ ಜೊತೆಗೆ ಮಾನವನ ಅಭಿವೃದ್ಧಿ ಹಕ್ಕನ್ನು ಗುರುತಿಸಿದೆ. ವಿಶ್ವಸಂಸ್ಥೆಯು ಈ ಉದ್ದೇಶಕ್ಕಾಗಿ 1986ರಲ್ಲಿ "ಅಭಿವೃದ್ಧಿಗೆ ಹಕ್ಕಿನ ಪ್ರಣಾಳಿಕೆ "1986" ಎಂಬುದನ್ನು ಘೋಷಿಸಿತ್ತು. ಇದರ ಪ್ರಕಾರ ಅಭಿವೃದ್ಧಿಯು ರಾಷ್ಟ್ರಗಳ ಮತ್ತು ವ್ಯಕ್ತಿಗಳ ಹಕ್ಕೆಂದು ಪರಿಗಣಿಸಲಾಗಿದೆ. ಈ ಅಭಿವೃದ್ಧಿ ಹಕ್ಕನ್ನು ಫಲಿಸುವಂತೆ ಮಾಡುವ ಜವಾಬ್ದಾರಿಯನ್ನು ರಾಷ್ಟ್ರ ರಾಜ್ಯಗಳ ಮೇಲೆ ಹೊರಿಸಲಾಗಿದೆ. ಭಾರತದ ಶ್ರೇಷ್ಠ ನ್ಯಾಯಾಲಯವು 1997ರಲ್ಲಿ "ಸಮತಾ ಮತ್ತು ಆಂಧ್ರಪ್ರದೇಶ ರಾಜ್ಯ 1997" ಎಂಬ ವಿವಾದ ಬಗೆಹರಿಸುವಾಗ ಈ ವಿಶ್ವಸಂಸ್ಥೆಯ ಘೋಷಣೆಯನ್ನು ಗಮನಕ್ಕೆ ತೆಗೆದುಕೊಂಡು ರಾಜ್ಯಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ನಿರ್ದೇಶಿಸಿ ಭಾರತದಲ್ಲಿ ಈ ಅಭಿವೃದ್ಧಿಗೆ ಹಕ್ಕಿಗೆ ವಿಶೇಷ ಕಾನೂನಿನ ಬೆಂಬಲ ದೊರೆಯುವಂತೆ ಮಾಡಿದೆ.

ಹೀಗೆ, ಅಭಿವೃದ್ಧಿಯ ಬಗ್ಗೆ ಜ್ಞಾನ, ಸ್ಥಾನ ಮತ್ತು ಮಾನಗಳೆಲ್ಲಾ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಇದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕಾಗಿದೆ. ಅತೀ ವಿಶಾಲವಾಗಿ ಬೆಳೆದಿರುವ ಈ ಕ್ಷೇತ್ರದ ಎಲ್ಲಾ ಜ್ಞಾನವನ್ನು ತಿಳಿದುಕೊಳ್ಳುವುದು. ನಮಗೆ ಇಲ್ಲ ಅಗತ್ಯವೂ ಇಲ್ಲ ಮತ್ತು ಸಾಧ್ಯವೂ ಇಲ್ಲ. ಸಾರ್ವಜನಿಕ ಆಡಳಿತದ ಒಂದು ಭಾಗವಾದ 'ಅಭಿವೃದ್ಧಿ ಆಡಳಿತದ' ನಮ್ಮ ಅಧ್ಯಯನಕ್ಕೆ ಅವಶ್ಯಕವಾದ ಒಂದು ಮಿತಿಯೊಳಗೆ ನಾವು ಈ ಅಭಿವೃದ್ಧಿ' ಪರಿಕಲ್ಪನೆ ಮತ್ತು ಸಿದ್ಧಾಂತಗಳನ್ನು

ತಿಳಿದರೆ ಸಾಕಾಗುತ್ತದೆ. ಆದ್ದರಿಂದ ಅಭಿವೃದ್ಧಿ ಪರಿಕಲ್ಪನೆ ಮತ್ತು ಸಿದ್ಧಾಂತಗಳ ಬಗೆಗಿನ ಒಂದು ಸಂಕ್ಷಿಪ್ತ ಪಕ್ಷಿ ನೋಟ ಮಾತ್ರ ಈ ಕೆಳಗೆ ನಮ್ಮ ಗುರಿಯಾಗಿದೆ.

## 3.2 ಅಭಿವೃದ್ಧಿ ಪರಿಕಲ್ಪನೆ : ಪದ ಮತ್ತು ಅದರ ಅರ್ಥ

### ಪದ

'ಅಭಿವೃದ್ಧಿ' ಎಂಬ ಪದ ಬಹಳ ವಿವಾದಾತ್ಮಕವಾಗಿದೆ. ಇದಕ್ಕೆ ಕಾರಣ ಅದಕ್ಕೆ ನೀಡಿರುವ ವಿವಿಧಾರ್ಥಗಳು ಅಥವಾ ಅದರ ವಿವಿಧ ಬಳಕೆಗಳು. ಈ ವಿವಾದಗಳಿಂದ ಬೇಸತ್ತು ಕೆಲವರು ಈ ಡೆವಲಪ್‌ಮೆಂಟ್ ಅಂದರೆ ಅಭಿವೃದ್ಧಿ ಎಂಬ ಪದವನ್ನು ಕೈಬಿಡುವುದೇ ಒಳ್ಳೆಯದು ಎಂದಿದ್ದಾರೆ. ಆದರೆ ಇದು ಆಗದ ಕೆಲಸ.

### ಅರ್ಥ

ಅಭಿವೃದ್ಧಿ ಎಂಬ ಪದಕ್ಕೆ ವಿವಿಧ ಅರ್ಥಗಳಿದ್ದು ಸಮಂಜಸವಾಗಿ ಇದನ್ನು ಅರ್ಥಮಾಡಿಕೊಳ್ಳಲು ನಾವು ಈ ಪದದ ವಿವಿಧ ಬಳಕೆಗಳನ್ನು ಮತ್ತು ಅರ್ಥಗಳನ್ನು ಪರಿಚಯಿಸಿಕೊಳ್ಳುವ ಅಗತ್ಯವಿದೆ. ಈ ವಿವಿಧ ಬಳಕೆ ಮತ್ತು ಅರ್ಥಗಳನ್ನು ಕೆಳಗಿನಂತೆ ವರ್ಗೀಕರಿಸಿ ತಿಳಿಯಬಹುದಾಗಿದೆ. : (1) ಶಬ್ದಕೋಶದ ಅರ್ಥ. (2) ಭಾಗಶಃ ಬಳಕೆ, 3) ಸಾಮಾನ್ಯ ಬಳಕೆ, 4) ಭಾವಾತೀತ (ತಟಸ್ಥ) ಬಳಕೆ ಮತ್ತು 5) ಮಾನವೀಯ ಮತ್ತು ಸರ್ವವ್ಯಾಪಿಯಾದ ಬಳಕೆಗಳು.

### 1. ಶಬ್ದಕೋಶದ ಅರ್ಥ

ಶಬ್ದಕೋಶಗಳಲ್ಲಿ ಅಭಿವೃದ್ಧಿಯನ್ನು ಸಾಮಾನ್ಯವಾಗಿ "ಹೆಚ್ಚು ಪೂರ್ಣವಾದ, ಎತ್ತರದ ಅಥವಾ ಪ್ರಬುದ್ಧ ಪರಿಸ್ಥಿತಿಗಳೆಡೆಗಿನ ಬೆಳವಣಿಗೆ', 'ವಿಕಾಸ', 'ವಿಕಸನ' ಪಕ್ವಸ್ಥಿತಿ ಅಥವಾ "ಕಡಿಮೆ ಅಥವಾ ಕೆಳಗಿನ ಹಂತಗಳಲ್ಲಿದ್ದ ಸಾಮರ್ಥ್ಯಗಳನ್ನು ಅಥವಾ ಒಳಶಕ್ತಿಗಳನ್ನು ಹೊರಕ್ಕೆ ಅಥವಾ ಎತ್ತರಕ್ಕೆ ತರುವ ಪ್ರಕ್ರಿಯೆ" ಎಂದು ವಿವರಿಸಲಾಗಿದೆ. ಈ ಅರ್ಥದಲ್ಲಿ ಉದಾಹರಣೆಗೆ ಬಾಲ್ಯಾವಸ್ಥೆಯಿಂದ ವಯಸ್ಕರಾಗುವುದು, ಬೀಜದಿಂದ ಮರವಾಗುವುದು. ಕರುವಿನಿಂದ ಹಸುವಾಗುವುದನ್ನು ನಾವು ನೋಡಬಹುದು. ಹೀಗೆ ಬಳಸಿದಾಗ ಅಭಿವೃದ್ಧಿಯು ಒಂದು ಜೈವಿಕ ಬೆಳವಣಿಗೆಯನ್ನು ಸೂಚಿಸುತ್ತದೆ.

### 2. ಭಾಗಶಃ ಬಳಕೆ

ಅ) ನಿಸ್‌ಬೆತ್ ಎಂಬ ಒಬ್ಬ ತತ್ವಜ್ಞಾನಿಯು ಅಭಿವೃದ್ಧಿ ಎಂಬ ಪದವನ್ನು ಮೇಲಿನ ತರಹದ ಜೈವಿಕ ವಿಕಾಸನಗಳನ್ನು ಮಾತ್ರ ಸೂಚಿಸಲು ಬಳಸುವುದಕ್ಕೆ ಮಿತಿಗೊಳಿಸುತ್ತಾರೆ. "ಸಾಮಾಜಿಕ" ಕ್ಷೇತ್ರಗಳಲ್ಲಿ ಇದರ ಬಳಕೆಯನ್ನು ಅವರು ಒಂದು "ದುರುಪಯೋಗ" ವೆನ್ನುತ್ತಾರೆ.

ಆ) ದಯಾಕೃಷ್ಣ ಎಂಬ ಒಬ್ಬ ಭಾರತೀಯ ತತ್ವಜ್ಞಾನಿಯು ನಿಸ್‌ಬೆತ್‌ರ ವಾದವನ್ನು ತಿರಸ್ಕರಿಸಿ ಸಾಮಾಜಿಕ ಕ್ಷೇತ್ರಗಳಲ್ಲ ಎಲ್ಲಾ ನಿರ್ದೇಶನತ್ವ, ಮುಂದುವರಿಕೆ ಮತ್ತು ಒಟ್ಟುಗೂಡುವಿಕೆಗಳು ಸಕಾರಾತ್ಮಕವಾಗಿರುತ್ತವೇಯೋ ಅಂತಃ ಸಮಾಜಿಕ ಪ್ರಕ್ರಿಯಗಳಲ್ಲೂ ಈ ಅಭಿವೃದ್ಧಿ ಪದದ ಬಳಕೆ ಸರಿಯಾಗಿರುತ್ತೆನ್ನುತ್ತಾರೆ. ಇದಕ್ಕೆ ಉದಾಹರಣೆಯಾಗಿ ಅವರು "ಆರ್ಥಿಕಾಭಿವೃದ್ಧಿ" ಯನ್ನು ಗುರುತಿಸುತ್ತಾರೆ. ಆದರೆ, ಹೀಗಿರದೆಂಬ ಕಾರಣಕ್ಕೆ ಕಲೇ, ತತ್ವಶಾಸ್ತ್ರ, ಧರ್ಮ, ನೀತಿ ಮುಂತಾದ ಕ್ಷೇತ್ರಗಳಲ್ಲಿ ಈ ಪದದ ಬಳಕೆಯನ್ನು ಇವರು ನಿಷೇಧಿಸುತ್ತಾರೆ.

ಇದೇನೆ ಇರಲಿ, ದಯಾಕೃಷ್ಣ ಅವರು ಗುರುತಿಸಿರುವ ಅಭಿವೃದ್ಧಿ ಕೆಳಕಂಡಂತಿರುವ ಮೂರು ಗುಣಗಳು ಗಮನಾರ್ಹವಾಗಿದೆ, ಹೋಲಿಕೆ ಮಾಡುವ ಗುಣ, ಮೌಲ್ವೀಕರಿಸುವ ಗುಣ ಮತ್ತು ನಿರಂತರತೆಉಳ್ಳ ಗುಣಗಳೇ ಈ ಮೂರು ಗುಣಗಳಾಗಿವೆ. ಅಭಿವೃದ್ಧಿಯನ್ನು ಗುರುತಿಸುವಾಗ, ಯಾವ ಕ್ಷೇತ್ರದಲ್ಲಾಗಲಿ, ಅದರ ಹಿಂದಿನ ಮತ್ತು ಇಂದಿನ ಹೋಲಿಕೆಗಳನ್ನೂ, ಗುಣಾತ್ಮಕ ಮತ್ತು ಗುಣಾತ್ಮಕ ಮೌಲ್ವೀಕರಣವನ್ನು ಹಾಗೂ ಒಂದು ನಿರ್ಧಿಷ್ಟ ದಿಕ್ಕಿನಲ್ಲಿ ನಿರಂತರವಾಗಿ ಮುಂದುವರಿಯುವುದನ್ನು ಗಮನಿಸುತ್ತೇವೆ.

ಇ) ಎರಡನೆ ಮಹಾಯುದ್ಧನಂತರದ ಆರಂಭದ ದಶಕಗಳಲ್ಲಿ ಅಥವಾ "ಆರ್ಥಿಕ ಬೆಳವಣಿಗೆಗೆ " ಅಭಿವೃದ್ಧಿಯನ್ನು "ಆರ್ಥಿಕಾಭಿವೃದ್ಧಿ" ಗ್ಗೆ ಸೀಮಿತಗೊಳಿಸಿ ಬಳಸಲಾಗುತ್ತಿತ್ತು. ರಾಷ್ಟ್ರೀಯ ಉತ್ಪತ್ತಿ, ಆದಾಯ ಮತ್ತು ವೈಯಕ್ತಿಕ ವಾರ್ಷಿಕ ಆದಾಯಗಳನ್ನು ಬಳಸಿ ಇದನ್ನು ಅಳಯಲಾಗುತ್ತಿತ್ತು.

ಈ) ಸಮಾಜಶಾಸ್ತ್ರಜ್ಞರು ಅಭಿವೃದ್ಧಿಯನ್ನು "ಸಾಮಾಜಿಕ ಅಭಿವೃದ್ಧಿ" ಅಂದರೆ ಸಾಮಾಜಿಕ ರಚನೆ ಮತ್ತು ಸಂಸ್ಕೃತಿಗಳು ಸಾಂಪ್ರದಾಯಿಕತೆಯಿಂದ ಆಧುನಿಕತೆಗಳ ಕಡೆಗೆ ಹೊಮ್ಮುವುದು ಎಂಬುದಾಗಿ ಬಳಸಿದರು.

ಉ) ರಾಜ್ಯಶಾಸ್ತ್ರಜ್ಞರು "ರಾಜಕೀಯ ಅಭಿವೃದ್ಧಿ" ಅಂದರೆ "ರಾಷ್ಟ್ರ-ನಿರ್ಮಾಣ", "ರಾಜ್ಯ ನಿರ್ಮಾಣ" ಮತ್ತು "ಪ್ರಜಾಪ್ರಭುತ್ವ-ನಿರ್ಮಾಣ" ಅಥವಾ "ಭಾಗವಹಿಸುವಿಕೆಯ -ನಿರ್ಮಾಣಗಳನ್ನು ಅಭಿವೃದ್ಧಿ ಎನ್ನುತ್ತಿದ್ದರು.

## 3. ಸಾಮಾನ್ಯ ಬಳಕೆ

i) ಕಾಲಕ್ರಮೇಣ ಅಭಿವೃದ್ಧಿಯನ್ನು ಮೇಲಿನತರಹದ ಸೀಮಿತ ಬಳಕೆಗಳಿಂದ ಮುಕ್ತಿಗೊಳಿಸಿ ರಾಷ್ಟ್ರದ "ಸರ್ವಾಂಗೀಣ ಅಭಿವೃದ್ಧಿ" ಎಂಬ ವಿಶಾಲ ಸಾಮನ್ಯ ಅರ್ಥದಲ್ಲಿ ಬಳಸಲಾಗಿದೆ. ರಾಷ್ಟ್ರೀಯ ಅಭಿವೃದ್ಧಿಯ ಒಳಗೆ "ಆರ್ಥಿಕಾಭಿವೃದ್ಧಿ", ಸಾಮಾಜಿಕಾಭಿವೃದ್ಧಿ, 'ರಾಜಕೀಯ ಅಭಿವೃದ್ಧಿ' ಮುಂತಾದ ರಾಷ್ಟ್ರದ ಮತ್ತು ಮಾನವ ಜೀವನದ ಸಕಲ ಅಂಶಗಳ ಅಭಿವೃದ್ಧಿಗಳೂ ಸೇರಿದ ಸರ್ವಾಂಗೀಣ ಅಭಿವೃದ್ಧಿ ಎಂಬ ಅರ್ಥದಲ್ಲಿ 'ಅಭಿವೃದ್ಧಿ' ಪದದ ಬಳಗೆಯಾಗಿದೆ.

ii) ಎರಡನೇ ಮಹಾಯುದ್ಧದ ನಂತರದ ಆರಂಭಿಕ ದಶಕಗಳಲ್ಲಿ 'ಅಭಿವೃದ್ಧಿ' ಎಂದರೆ 'ಆರ್ಥಿಕ ಅಭಿವೃದ್ಧಿ' ಅದರಲ್ಲೂ "ಆರ್ಥಿಕ ಬೆಳವಣಿಗೆ" ಎಂಬ ಅರ್ಥದ ಬಳಕೆ ಪ್ರಬಲವಾಗಿತ್ತು. ರಾಷ್ಟ್ರೀಯ ಉತ್ಪಾದನೆ ಮತ್ತು ರಾಷ್ಟ್ರ ಹಾಗೂ ವೈಯಕ್ತಿಕ ಆದಾಯಗಳ ಒಟ್ಟಾರೆ ಅಂಕಿಗಳ ಸಂಖ್ಯೆಗಳಲ್ಲಿನ ಹೆಚ್ಚಳವನ್ನು ಇದು ಅವಲಂಬಿಸುತಿತ್ತು. ಇಂತಹ ಬೆಳವಣಿಗೆಯಲ್ಲಿ ಪರಿಪೂರ್ಣತೆಯೂ ಇಲ್ಲ ಮತ್ತು ಮಾನವೀಯತೆಯೂ ಇಲ್ಲ ಎಂಬುದು ನಂತರ ಕಂಡುಬಂದಿತು. ಈ ಕಾರಣದಿಂದ 1970ರಿಂದೀಚೆಗೆ ಅಭಿವೃದ್ಧಿ ಎಂದರೆ ಸರ್ವಾಂಗೀಣವಾದ "ಮಾನವಅಭಿವೃದ್ಧಿ" ಎಂದರೆ ಸಾಮಾನ್ಯ ಜನರ ಅನುಭೋಗ ಅಥವಾ ಪದಾರ್ಥಗಳ ಬಳಕೆ, ಆರೋಗ್ಯ ಮತ್ತು ವಿದ್ಯಾಭಾಸಗಳ ಹೆಚ್ಚಳದಿಂದ ಕೂಡಿದ ಮಾನವ ಜೀವನದ ಗುಣಾತ್ಮಕ ಸುಧಾರಣೆ ಎನ್ನಲಾಗಿದೆ. ಮಾನವ ಅಭಿವೃದ್ಧಿ ಈ ತರಹವಾಗಬೇಕಾದರೆ ಅಭಿವೃದ್ಧಿ ಪ್ರಕ್ರಿಯೆ ಮತ್ತು ಅದರ ಫಲಾನುಭವಿಸುವಲ್ಲಿ ಹಿಂದಿಳಿದವರಿಗೆ ಮತ್ತು ಅಭಿವೃದ್ಧಿ ವಂಚಿತ ಜನರಿಗೆ ಹೆಚ್ಚು ಭಾಗವಹಿಸುವಿಕೆ ಇರಬೇಕು. ಆದ್ದರಿಂದ ಈ ಮಾನವ ಅಭಿವೃದ್ಧಿಯನ್ನು "ಒಳಗೊಂಡ ಅಭಿವೃದ್ಧಿ' (ಇನ್‌ಕ್ಲೂಸಿವ್ ಡೆವೆಲಪ್‌ಮೆಂಟ್) ಅಥವಾ "ಭಾಗವಹಿಸುವಿಕೆಉಳ್ಳ ಅಭಿವೃದ್ಧಿ" (ಪಾರ್ಟಿಸಿಪೆಟಿವ್ ಡೆವೆಲಪ್‌ಮೆಂಟ್) ಎಂದೂ ಕರೆಯಲಾಗುತ್ತದೆ.

iii) ಅಭಿವೃದ್ಧಿಯು ಒಂದು ನಿರ್ಧಿಷ್ಟ ಪರಿಪೂರ್ಣ, ಎತ್ತರದ, ಪ್ರಬುದ್ಧ ಪರಿಸ್ಥಿತಿ ಎನ್ನುವ ಒಂದು ಅಂತ್ಯ ನಿಲ್ದಾಣದಂತೆ ಕಾಣುವುದು ಸರಿಯಲ್ಲ ವೆಂಬುದು ಎಡ್‌ವರ್ಡ್ ವೀಡ್ನರ್ ಅವರವಾದ. ಇವರು ಅಭಿವೃದ್ಧಿಯನ್ನು "ಒಂದು ನಿರ್ಧಿಷ್ಟ ಗುರಿಯಾಗಿರುವ ಬದಲು ಅದೊಂದು ಮಾನಸಿಕ ಸ್ಥಿತಿ, ಒಂದು ಪ್ರವೃತ್ತಿ, ಒಂದು ನಿರ್ಧಿಷ್ಟ ದಿಕ್ಕಿನಲ್ಲಿ ಚಲಿಸುವಲ್ಲಿ ಕಂಡು ಬರುವ ಬದಲಾವಣೆಯ ಗತಿ' ಎನ್ನುತ್ತಾರೆ.

iv) ಮಾನ್ಟ್‌ಗೋಮರಿ ಎಂಬ ಇನ್ನೊಬ್ಬ ತಜ್ಞರು ಅಭಿವೃದ್ಧಿ ಎಂದರೆ "ಯೋಜಿತ ಬದಲಾವಣೆ" ಎನ್ನುತ್ತಾರೆ. ಇವರ ಪ್ರಕಾರ ಅಭಿವೃದ್ಧಿ ಎಂದರೆ "ಬಯಸಬಹುದಾದ, ಮುನ್ನೆಡೆಯಬಹುದಾದ, ಅಥವಾ ಯೋಜಿತವಾದ ಅಥವಾ ಸರ್ಕಾರದ ಕ್ರಿಯೆಯಿಂದ ಪ್ರಭಾವಿತವಾದ (ರಾಷ್ಟ್ರೀಯ ಜೀವನದಲ್ಲಿನ) ಬದಲಾವಣೆಯ ಒಂದು ಅಂಶ" ಎನ್ನುತ್ತಾರೆ.

v) ಪಾಶ್ಚಿಮಾತ್ಯ ವಿದ್ಯಾಭಾಸ ಪಡೆದ ನಾಯಕರು ಮತ್ತು ತಜ್ಞರು ಅಭಿವೃದ್ಧಿ ಎಂದರೆ "ಪಾಶ್ಚಿಮಾತೀಕರಣ" ಅಥವಾ "ಆಧುನೀಕರಣ" ಎಂದೂ ಬಣ್ಣಿಸುತ್ತಾರೆ. ಪಶ್ಚಿಮದ ರಾಷ್ಟಗಳಲ್ಲಿರುವಂತೆ ಬೆಳವಣಿಗೆಯ ಪರಿಸ್ಥಿತಿಗಳನ್ನು ಬೆನ್ನು ಹತ್ತುವುದು ಮತ್ತು ಅನುಸರಿಸುವುದು ಇದರ ಗುರಿಯಾಗಿರುತ್ತದೆ.

## 4. ಭಾವನಾತೀತ(ತಟಸ್ಥ) ಬಳಕೆ

ಅಭಿವೃದ್ಧಿಯ ಪದದ ಮೇಲಿನ ತರಹದ ಬಳಕೆಗಳನ್ನು "ಭಾವನಾಪೇರಿತ ಅಥವಾ ಮೌಲ್ಯಾಧಾರಿತ ಮತ್ತು (ಪಶ್ಚಿಮ ರಾಷ್ಟ್ರೀಯರ ಮೂಗಿನ ನೇರದ) "ಜನಾಂಗೀಯ ಕೇಂದ್ರಿತ" ವಾದವುಗಳೆಂದು ಅಪಾದಿಸುವ ಎಫ್.ಡಬ್ಲ್ಯೂ ರಿಗ್ಸ್ ರವರು ಅಭಿವೃದ್ಧಿಯ ಒಂದು ಭಾವನಾತೀತ ಅಂದರೆ ಮೌಲ್ಯತೀತವಾದ, ವಸ್ತುನಿಷ್ಠ ವಿವರಣೆ ನೀಡಲು ಮುಂದಾಗಿದ್ದಾರೆ. ರಿಗ್ಸ್ ರವರ ಪ್ರಕಾರ ಅಭಿವೃದ್ಧಿ ಎಂದರೆ

"ವೃದ್ಧಿಗೊಳ್ಳುತ್ತಿರುವ ವಿಕರಣದ ಮೂಲಕ ಒಂದು ಸಾಮಾಜಿಕ ವ್ಯವಸ್ಥೆಯ ಸ್ವಾಯತ್ತತೆ (ಇಚ್ಛಾಶಕ್ತಿ)ಯನ್ನು ಹೆಚ್ಚಿಸುವ ಒಂದು ಪ್ರಕ್ರಿಯೆಯಾಗಿದೆ".

ರಾಷ್ಟ್ರೀಯ ಅಭಿವೃದ್ಧಿಗೆ ಅಂಟುಕೊಂಡಿದ್ದ ಅಭಿವೃದ್ಧಿ ಚಿಂತನೆಯನ್ನು ವಿಶಾಲಗೊಳಿಸಿ ಮಾನವ ಸಮಾಜದ ಯಾವುದೇ ಒಂದು ವ್ಯವಸ್ಥೆಯಲ್ಲಿ ಅಭಿವೃದ್ಧಿಯನ್ನು ವಿವರಿಸುವ ಪ್ರಯತ್ನ ಇವರದಾಗಿದೆ. ವ್ಯವಸ್ಥಾ ವಿಶ್ಲೇಷಣೆ ಮತ್ತು ಪರಿಸರ ಸಂಬಂಧ ವಿಶ್ಲೇಷಣೆಗಳ ದೃಷ್ಟಿಯಿಂದ ಮಾಡಿದ ವಿವರಣೆಯೂ ಇದಾಗಿದೆ. ಯಾವುದೇ ಒಂದು ವ್ಯವಸ್ಥೆಯು ತನ್ನ ಪರಿಸರ ಮೂಲದ ಹಿಡಿತಗಳಿಂದ ಹೊರಬಂದು ಅಥವಾ ಮೆಟ್ಟು ನಿಂತು ತನ್ನ ಸ್ವಾಯಕ್ತತೆಯನ್ನು ಹೆಚ್ಚಿಸಿಕೊಳ್ಳುವ ಪ್ರಕ್ರಿಯೆಯೇ ಅಭಿವೃದ್ಧಿ ಎಂಬುದು ರಿಗ್ಸ್ ರವರ ವಿವರಣೆ. ಈ ರೀತಿ ನೋಡಿದಾಗ ಅಭಿವೃದ್ಧಿಯು ಒಂದು ವ್ಯವಸ್ಥೆಯ ಆಯ್ಕೆಯ (ಛಾಯ್ಸ್) ಶಕ್ತಿಯ ಹೆಚ್ಚಳವಾಗುತ್ತದೆ. ಇದರ ವಿವರಣೆಯಲ್ಲಿ ಈ 'ಸ್ವಾಯತ್ತತೆ' ಮತ್ತು 'ವಿಕಿರಣ' ಪದಗಳು ಬಹಳ ಮುಖ್ಯವಾದವು. ಅಭಿವೃದ್ಧಿಯಲ್ಲಿ ಸ್ವಾಯತ್ತತೆಯು ಒಂದು ಗುರಿಯಾದರೆ, ವಿಕಿರಣವು ಆದರ ಸಾಧನವಾಗುತ್ತದೆ. ವಿಕಿರಣ ಎಂಬ ಪದವನ್ನು ಭೌತಶಾಸ್ತ್ರದ ಅಶ್ರಗ (ಪ್ರಿಸಂ) ಪ್ರಯೋಗದಿಂದ ಇವರು ಎರವಲು ಪಡೆದಿದ್ದಾರೆ. ಪ್ರಿಸಂ ಪ್ರಯೋಗದಲ್ಲಿ ಒಂದಾಗಿರುವ ಬಿಳಿಯ ಬಣ್ಣದ ರೇಖೆಯು ಹೊರ ವಿಕಿರಣ (ಅಥವಾ ಹೊರಹೊಮ್ಮುವ)ಗೊಳ್ಳುವ ಏಳುಬಣ್ಣಗಳಂತೆ ಒಂದು ಸಾಮಾಜಿಕ ವ್ಯವಸ್ಥೆ ಅಭಿವೃದ್ಧಿಯಾಗುವಾದ ತನ್ನ ಒಳಗಿನ ಕಾರ್ಯ ಮತ್ತು ರಚನೆಗಳ ಕ್ಷೇತ್ರದಲ್ಲಿ ವೈವಿಧ್ಯತೆಯನ್ನು ಹೆಚ್ಚಿಸಿಕೊಳ್ಳುತ್ತದೆ. ಬೇರ್ಪಡಿಸುವಿಕೆ ಮತ್ತು ತಜ್ಞತೆಗಳು ಹೆಚ್ಚಿದಂತೆ ಈ ವೈವಿಧ್ಯತೆ ಹೆಚ್ಚುತ್ತದೆ. ರಿಗ್ಸ್ ರವರ ವಿವರಣೆಯಲ್ಲಿ ವೈವಿಧ್ಯತೆಯ ಹೆಚ್ಚಳದ ಜೊತೆಗೆ ಅದರ ಸಮಗ್ರತೆ ಅಥವಾ ವಿವಿಧತೆಗಳ ನಡುವಿನ ಹೊಂದಾಣಿಕೆ ತರುವುದೂ ಸೇರಿದೆ. ಇಂತಹಾ ವೈವಿಧತೆ ಮತ್ತು ಸಮಗ್ರತೆಗಳೂ ಕಂಡು ಬಂದ ಸಾಮಾಜಿಕ ವ್ಯವಸ್ಥೆಗಳು ತಮ್ಮ ಸಮಸ್ಯೆಗಳನ್ನು ಬಗೆಹರಿಸಲು ತಮ್ಮ ಪರಿಸರವನ್ನು ಮೆಟ್ಟು ನಿಂತು ಕೆಲಸ ಮಾಡುವ ಸಾಮರ್ಥ್ಯವನ್ನು ಪಡೆಯುವುದೇ ಅಭಿವೃದ್ಧಿ ಎಂಬುದು ಇವರ ಅರ್ಥವಾಗಿದೆ.

ಅಭಿವೃದ್ಧಿಯ ಒಂದು ಮೌಲ್ಯಾತೀತ ಅಥವಾ ಭಾವನಾತೀತ ಅಥವಾ ತಟಸ್ಥ ವಿವರಣೆಗೆ ರಿಗ್ಸ್‌ರವದೇ ಅದ್ವಿತೀಯ ಪ್ರಯತ್ನವಾಗಿತ್ತು. ಆದರೆ ಇದು ಒಂದು ಸಫಲ ಪ್ರಯತ್ನವಾಗಲಿಲ್ಲ. ದಯಾಕೃಷ್ಣ ಎಂಬ ಭಾರತೀಯ ತತ್ವಶಾಸ್ತ್ರ ಪ್ರಧಾಪಕರೊಬ್ಬರು ಈ ವಿಚಾರದಲ್ಲಿ ರಿಗ್ಸ್‌ರೊಡನೆ ವಾಗ್ವಾದಕ್ಕೆ ನಿಂತು ಸಾಮಾಜಿಕ ವ್ಯವಸ್ಥೆಗಳು ತಮ್ಮ ಸ್ವಾಯತ್ತತೆ ಹೆಚ್ಚಿದಂತೆ ಇತರರ ಮೇಲೆ ತನ್ನ ಶಕ್ತಿ ಬಡಾವಣೆ ಅಥವಾ ವೈಭವೀಕರಣಕ್ಕೆ ಮುಂದಾಗುವ ಕೆಟ್ಟ ಭಾವನೆ ಅಥವಾ ಮೌಲ್ಯ ಪ್ರವೇಶಿಸಬಹುದು

ಎಂಬುದನ್ನು ತೋರಿಸಿಕೊಟ್ಟರು. ಇದನ್ನು ಒಪ್ಪಿಕೊಂಡ ರಿಗ್ಸ್‌ರವರು ನಂತರದಲ್ಲಿ ಅಭಿವೃದ್ಧಿಯನ್ನು ನಕಾರಾತ್ಮಕ ಮತ್ತು ಸಕಾರಾತ್ಮಕವೆಂದು ವಿಂಗಡಿಸಲು ಹೊರಟಾಗ ಅವರ ವಿವರಣೆ ಭಾವನಾತೀತ ಅಥವಾ ಮೌಲ್ಯಾತೀತವಾಗಿ ಉಳಿಯಲಿಲ್ಲ.

ಅಭಿವೃದ್ಧಿಯು ಒಂದು ಮಾನವ ಪ್ರಕ್ರಿಯೆಯಾಗಿರುವ ತನಕ ಅದನ್ನು ಮೌಲ್ಯಗಳಿಂದ ಮುಕ್ತಗೊಳಿಸಲಾಗುವುದಿಲ್ಲ. ಮೌಲ್ಯಗಳು ವ್ಯಕ್ತಿ ಮತ್ತು ಅವ್ಯಕ್ತವಾಗಿ ಈ ಪ್ರಕ್ರಿಯೆಯಲ್ಲಿ ಅಡಗಿರುತ್ತದೆ. ಅಭಿವೃದ್ಧಿಯಲ್ಲಿ ಅಡಗಿರುವ ಮೌಲ್ಯ ಪ್ರಶ್ನೆಗಳನ್ನು ನೇರವಾಗಿ ಗಮನಕ್ಕೆ ತೆಗೆದುಕೊಳ್ಳುವುದರಿಂದ ಅಭಿವೃದ್ಧಿಯು ಉತ್ತಮ ಮೌಲ್ಯಗಳನ್ನು ಹೊಂದಿದ್ದು ಉತ್ತಮ ಅಭಿವೃದ್ಧಿಗೂ ಎಡೆಮಾಡುತ್ತದೆ. ರಿಗ್ಸ್‌ರವರಂತೆಃ ಅಸಫಲ ಪ್ರಯತ್ನಗಳನ್ನು ಒಟ್ಟರೆ ಅಭಿವೃದ್ಧಿ ಚಿಂತನೆಯು ಸಾಮಾನ್ಯವಾಗಿ ಮೌಲ್ಯಾತ್ಮಕವಾಗಿದೆ. ಅಭಿವೃದ್ಧಿಯನ್ನು ಹೆಚ್ಚು ಮಾನವೀಯ ಮತ್ತು ಸರ್ವವ್ಯಾಪಿ ಮಾಡುವುದು ಅನಿವಾರ್ಯವಾಗಿದ್ದು ಅಭಿವೃದ್ಧಿಯ ಮಾನವೀಯ ಮತ್ತು ವಿಶ್ವವ್ಯಾಪಿ ಅಥವಾ ಸರ್ವವ್ಯಾಪಿ ಅರ್ಥದ ಬಳಕೆಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದೆ.

## 5. ಮಾನವೀಯ ಮತ್ತು ಸರ್ವ ವ್ಯಾಪಿಯಾದ ಬಳಕೆ

"ಆರ್ಥಿಕ ಬೆಳವಣಿಗೆ" ಎಂಬ ಅರ್ಥದಲ್ಲಿ ಹೆಚ್ಚು ಬಳಸಲಾಗುತ್ತಿದ್ದ ಅಭಿವೃದ್ಧಿ ಪದವನ್ನು 1970ರ ದಶಕದಿಂದ ವಿಶಾಲವಾದ ಮಾನವೀಯ ಮತ್ತು ಸರ್ವವ್ಯಾಪಿಯಾದ ಅರ್ಥದಲ್ಲಿ ಹೆಚ್ಚು ಬಳಸುವುದು ಕಂಡುಬಂದಿದೆ. ಅಭಿವೃದ್ಧಿಯ ಬಗೆಗಿನ ಕೆಳಕಂಡ ಹೇಳಿಕೆಗಳು ಇದಕ್ಕೆ ಉದಾಹರಣೆಯಾಗಿದೆ.

**ಅ) ಡೆನ್ನಿಸ್ ಗೆಲೆಟ್‌ರ ಪ್ರಕಾರ**

"ವಿಶಾಲವಾಗಿ ನೋಡಿದರೆ, ಅಭಿವೃದ್ಧಿ ಎಂದರೆ, ಯಾವುದೇ ಒಂದು ಸಾಮಾಜಿಕ ವ್ಯವಸ್ಥೆಯು, ಸಾಮಾನ್ಯವಾಗಿ ಅಸಮಾಧಾನಕರವೆಂದು ಪರಿಗಣಿಸಲ್ಪಟ್ಟ ಜೀವನ ಪರಿಸ್ಥಿತಿಯಿಂದ ಸ್ವಲ್ಪವಾದರೂ ಮಾನವೀಯವಾಗಿ ಉತ್ತಮವೆನ್ನುವ ಯಾವುದಾದರೂ ಪರಿಸ್ಥಿತಿಯ ಕಡೆಗೆ, ತನ್ನ ಒಳಗಿನ ವ್ಯಕ್ತಿಗಳು ಮತ್ತು ಉಪವ್ಯವಸ್ಥೆಗಳ ಬಯಕೆಗಳಿಗೆ ಸ್ಪಂದಿಸುತ್ತಾ ಚಲಿಸುವಾಗ ಆಗುವ ಅಮೂಲಾಗ್ರ ಬದಲಾವಣೆಗಳಾಗಿವೆ ಎನ್ನಬಹುದು".

ಆ) 1980ರಲ್ಲಿ ನಡೆದ ವಿಶ್ವಸಂಸ್ಥೆಯ ಏಷ್ಯಾ-ಪೆಸೆಫಿಕ್ ಅಭಿವೃದ್ಧಿ ಕೇಂದ್ರದವರು ಕೌಲಾಲಂಪುರದಲ್ಲಿ ನಡೆಸಿದ ಸಮ್ಮೇಳನದ ಪ್ರಕಾರ.

"ಸಾಮಾನ್ಯ ಮಾನವನನ್ನು ಕ್ರಿಯಾತ್ಮಕ ಮಾನವನನ್ನಾಗಿಸಿ, ತನ್ನನ್ನೂ ಮತ್ತು ತನ್ನ ಲೌಕಿಕ ಪರಿಸರವನ್ನೂ ನೀತಿಯುತವಾಗಿ ಮತ್ತು ಪರಿಪೂರ್ಣವಾಗಿ ಬದಲಾಯಿಸುವ ಸೃಜನಾತ್ಮಕ ವ್ಯಕ್ತಿಯನ್ನಾಗಿಸುವುದು ಅಭಿವೃದ್ಧಿಯ ಸಾರವೆನ್ನಬಹುದು".

ಇ) ಅಮಾರ್ತ್ಯಸೇನರ ಪ್ರಕಾರ ಅಭಿವೃದ್ಧಿಯ

"ಎಲ್ಲಾ ಮಾನವರ "ಸಾಮರ್ಥ್ಯಗಳನ್ನು" ಹೆಚ್ಚಿಸಿ, ಅವರ "ಆಯ್ಕೆಗಳನ್ನು" ವಿಶಾಲಗೊಳಿಸಿ ಅವರ "ಸ್ವಾತಂತ್ರ್ಯ"ವನ್ನು ವಿಸ್ತರಿಸುವುದೇ ಆಗಿದೆ.

ಈ) ವಿಶ್ವಸಂಸ್ಥೆಯ 1986ರ ಅಭಿವೃದ್ಧಿ ಹಕ್ಕಿನ ಘೋಷಣೆಯ ಪ್ರಕಾರ

"ಒಂದು ಸಂಪೂರ್ಣ ಜನಸಮುದಾಯವು ಮತ್ತು ಅದರಲ್ಲಿನ ವ್ಯಕ್ತಿಗಳು ಅಭಿವೃದ್ಧಿಯಲ್ಲಿ ಮತ್ತು ..ವರ ಫಲಗಳ ನ್ಯಾಯಯುತ ವಿತರಣೆಯಲ್ಲಿ ಕ್ರಿಯಾಶೀಲವಾಗಿ ಮತ್ತು ಅರ್ಥಪೂರ್ಣವಾಗಿ ಭಾಗವಹಿಸುತ್ತಾ ಎಲ್ಲಾ ಜನರ ಕಲ್ಯಾಣವನ್ನು ನಿರಂತರವಾಗಿ ವೃದ್ಧಿಸುವ ಸಮಗ್ರ ಆರ್ಥಿಕ, ಸಾಮಾಜಿಕ, ಸಂಸ್ಕೃತಿಕ ಮತ್ತು ರಾಜಕೀಯ ಪ್ರಕ್ರಿಯೆಯೇ ಅಭಿವೃದ್ಧಿಯಾಗಿದೆ".

ಉ) ಮಹಾತ್ಮ ಗಾಂಧೀಜಿಯವರ ಅಭಿವೃದ್ಧಿ ಪರಿಕಲ್ಪನೆಯನ್ನು ಇಲ್ಲಿ ಸ್ಮರಿಸಬಹುದಾಗಿದೆ. ಇವರ ಪ್ರಕಾರ

ಅಂತ್ಯೋದಯದ ಮೂಲಕ ಆಗುವ ಸರ್ವೋದಯವೇ ಅಭಿವೃದ್ಧಿಯಾಗಿದೆ. ನಮ್ಮೊಡನಿರುವ ಅತ್ಯಂತ ಹಿಂದುಳಿದವ ಮತ್ತು ಅವರ ಅಂದೆರೆ ಅಂತ್ಯದ, ವಿಕಾಸಕ್ಕೆ ಪ್ರಾಥಮಿಕ ಗಮನ ನೀಡುತ್ತಾ ಸರ್ವರ ಸರ್ವಾಂಗೀಣ ವಿಕಾಸ ಪ್ರಕ್ರಿಯೆಯೇ ಅಭಿವೃದ್ಧಿಯಾಗಿದೆ.

**ಕೊನೆಯ ಮಾತು**

ಕೊನೆಯದಾಗಿ ನಾವು ಅಭಿವೃದ್ಧಿಯೆಂದರೆ ನ್ಯಾಯಯುತ ಗುಣಉಳ್ಳ ಹಾಗೂ ಎಲ್ಲರಿಗೂ, ಅದರಲ್ಲೂ ನಿರ್ಧಿಷ್ಟವಾಗಿ ಅತ್ಯಂತ ಹಿಂದುಳಿದವರಿಗೆ ನ್ಯಾಯ ಒದಗಿಸಲು ಬದ್ಧವಾಗಿರುವ ಒಂದು 'ನ್ಯಾಯಯುತ ಪರಿವರ್ತನೆ' ಎನ್ನಬಹುದು. ಅಭಿವೃದ್ಧಿಯು ವ್ಯಕ್ತಿಯನ್ನು ಈಗ ರಕ್ಷಿಸಿ ಮುಂದೆ ಅರಳಿಸುವ ಪ್ರಕ್ರಿಯೆಯಾಗಿದೆ.

**ನಿಮ್ಮ ಪ್ರಗತಿ ಪರಿಶೀಲನೆ-1**

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

**1. ಅಭಿವೃದ್ಧಿ ಪರಿಕಲ್ಪನೆ ಮತ್ತು ಅದರ ಅರ್ಥ ಅಥವಾ ವಿವಿಧ ಬಳಕೆಗಳ ಬಗ್ಗೆ ಒಂದು ಪ್ರಬಂಧ ಬರೆಯಿರಿ.**

-----------------------------------------------------------------------

-----------------------------------------------------------------------

-----------------------------------------------------------------------

-----------------------------------------------------------------------

-----------------------------------------------------------------------

**2. ಕೆಳಕಂಡವುಗಳನ್ನು ಕುರಿತು ಟಿಪ್ಪಣಿ ಬರೆಯಿರಿ.**

**i. ಅಭಿವೃದ್ಧಿ ಪದದ ಭಾವನಾತೀತ (ತಟಸ್ಥ)ಬಳಕೆ**

-----------------------------------------------------------------------

-----------------------------------------------------------------------

-----------------------------------------------------------------------

-----------------------------------------------------------------------

-----------------------------------------------------------------------

ii. ಮಾನವೀಯ ಮತ್ತು ಸರ್ವವ್ಯಾಪಿ ಬಳಕೆ

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

## 3.3 ಅಭಿವೃದ್ಧಿಯ ವಿವಿಧ ಮಾದರಿಗಳು, ಮಾರ್ಗಗಳು ಮತ್ತು ಸಿದ್ಧಾಂತಗಳು

ಅಭಿವೃದ್ಧಿ ಬಗೆಗಿನ ಚರ್ಚೆ ಮತ್ತು ಸಾಹಿತ್ಯ ವಿಫಲವಾಗಿದೆ. ಇವುಗಳಲ್ಲಿ ಅಭಿವೃದ್ಧಿಯ ಬಗೆಗಿನ ಮಾದರಿಗಳು, ಮಾರ್ಗಗಳು ಮತ್ತು ಸಿದ್ಧಾಂತಗಳು ಅನೇಕ ವಿದೆ. ಇವುಗಳನ್ನು ಅರಿಯುವ ಸಂಧರ್ಭದಲ್ಲಿ ಈ 'ಮಾದರಿ', 'ಮಾರ್ಗ' ಮತ್ತು 'ಸಿದ್ಧಾಂತ' ಎಂಬ ಪದಗಳ ಬಳಕೆಯ ಬಗ್ಗೆ ಒಂದು ಮಾತು ಅಗತ್ಯವಿದೆ. ತಾತ್ವಿಕವಾಗಿ ಈ ಪದಗಳನ್ನು ಬೇರ್ಪಡಿಸಬಹುದು. ಆದರೆ, ಅಭಿವೃದ್ಧಿ ಬಗೆಗಿನ ಚಿಂತನೆಯಲ್ಲಿ ಸಾಮಾನ್ಯವಾಗಿ ಇವುಗಳನ್ನು ಸಮಾನಾರ್ಥದಲ್ಲಿ ಹಾಗೂ ಪರ್ಯಾಯ ಪದಗಳಾಗಿ ಬಳಸಲಾಗಿದೆ. ಇದಕ್ಕೆ ಕಾರಣವೆಂದರೆ, ಇವುಗಳ ನಡೆವೆ ಇರುವ ತುಂಬಾ ಹತ್ತಿರದ ಸಂಬಂಧವಾಗಿದೆ. ಈ ಕಾರಣದಿಂದ ನಾವು ಕೂಡ ಈ ನಮ್ಮ ಕೆಳಗಿನ ಬರವಣಿಗೆಯಲ್ಲಿ ಈ ಪದಗಳನ್ನು ಪರ್ಯಾಯ ಪದಗಳಂತೆಯೇ ಬಳಸಿದ್ದೇವೆ.

ಅಭಿವೃದ್ಧಿ ಬಗೆಗಿನ ಮಾದರಿಗಳು, ಮಾರ್ಗಗಳು ಮತ್ತು ಸಿದ್ಧಾಂತಗಳು ಅನೇಕ ವಿವೆ. ಇವುಗಳನ್ನು ಅನೇಕ ವಿಧದಲ್ಲಿ ವರ್ಗೀಕರಿಸಿ ಅಧ್ಯಯನ ಮಾಡಬಹುದು. ಇವುಗಳ ಬಗೆಗಿನ ನಮ್ಮ ಅಧ್ಯಯನವು ಈ ಕೆಳಗೆಕೆಂಡಂತೆ ವ್ಯವಸ್ಥಿಸಲಾಗಿದೆ : 1 ಪಾಶ್ಚಿಮಾತೀಕರಣ ಅಥವಾ ಆಧುನೀಕರಣ; 2.ಅಭಿವೃದ್ಧಿಯ ಬಗೆಗಿನ ವಿವಿಧ ಪಾಶ್ಚಿಮಾತ್ಯ ಸಿದ್ಧಾಂತಗಳು; 3. ಸ್ವಾಯತ್ತ ಅಥವಾ ಬದಲೀ ಅಭಿವೃದ್ಧಿ ಮಾದರಿಗಳು ; 4. ಅಭಿವೃದ್ಧಿಯ ಬಗೆಗಿನ ಸಮಕಾಲೀನ ಸಿದ್ಧಾಂತಗಳು ಅಥವಾ ಮಾರ್ಗಗಳು. ಇವುಗಳ ಬಗ್ಗೆ ಚಿಂತೆಮಾಡುವಾಗ ಅಭಿವೃದ್ಧಿ ಆಡಳಿತದ ವಿದ್ಯಾರ್ಥಿಗಳಾದ ನಮಗೆ ಅಗತ್ಯವಿರುವಷ್ಟು ಮಾತ್ರ ಸಂಕ್ಷಿಪ್ತವಾಗಿ ಪರಿಚಯಿಸುವ ಪ್ರಯತ್ನವಿದೆ.

### 3.3.1 "ಪಾಶ್ಚಿಮಾತೀಕರಣ" ಅಥವಾ "ಆಧುನೀಕರಣ ಮಾದರಿ"

ಮೂರನೇ ವಿಶ್ವರಾಷ್ಟ್ರಗಳೆಲ್ಲಾ ಬಹುತೇಕ ಪಶ್ಚಿಮ ರಾಷ್ಟ್ರಗಳ ವಸಾಹತುಗಳಾಗಿದ್ದವು. ಸ್ವಾತಂತ್ರ್ಯ ಬಂದ ಮೇಲೆ ಇವುಗಳು ತಾವು ಪಶ್ಚಿಮದ ರಾಷ್ಟ್ರಗಳಂತೆ ಅಭಿವೃದ್ಧಿ ಹೊಂದಬೇಕೆಂಬ ಬಯಕೆ ಸ್ವಾಭಾವಿಕವಾಗಿ ಹೊಂದಿದ್ದವು. ಇಂಗ್ಲೆಂಡ್, ಫ್ರಾನ್ಸ್ ಮುಂತಾದ ಪಶ್ಚಿಮ ರಾಷ್ಟ್ರಗಳಲ್ಲಿ ವಿದ್ಯಾಭ್ಯಾಸ ಪಡೆದಿದ್ದ ಈ ರಾಷ್ಟ್ರಗಳ ನಾಯಕರುಗಳು, ವಿದ್ವಾಂಸರುಗಳ ನಡುವೆ ಈ ಮೂರನೇ ವಿಶ್ವರಾಷ್ಟ್ರಗಳು ಅಭಿವೃದ್ಧಿಗೆ "ಪಾಶ್ಚಿಮಾತೀಕರಣ ಮಾದರಿ"ಯನ್ನು ಅನುಸರಿಸವುದರ ಬಗ್ಗೆ ಒಮ್ಮತ ಮಾಡಿತ್ತು.

"ಪಾಶ್ಚಿಮಾತೀಕರಣ ಮಾದರಿ" ಎಂದರೆ ಇಂಗ್ಲೆಂಡ್, ಫ್ರಾನ್ಸ್ ಮುಂತಾದ ಯೂರೋಪಿನ ದೇಶಗಳು ಹಿಂದಿನ ಸುಮಾರು 200–300 ವರ್ಷಗಳಲ್ಲಿ ನಡೆದು ಬಂದ ಪ್ರಗತಿ ಪಥವೆಂದು ಹೇಳಬಹುದು. ಈ ಪಥದಲ್ಲಿ ಈ ಪಶ್ಚಿಮದ ದೇಶಗಳು "ಸಂಪ್ರದಾಯಸ್ಥ" ಪರಿಸ್ಥಿತಿಯಿಂದ "ಆಧುನಿಕ" ಪರಿಸ್ಥಿತಿಯನ್ನು ತಲುಪಿದವು. ಈ ಆಧುನೀಕರಣ ಪರಿಸ್ಥಿತಿಯನ್ನು ತಲುಪಲು ಅವುಗಳಲ್ಲಿ ಮುಖ್ಯವಾಗಿ ಕೆಳಕಂಡ ಕ್ರಾಂತಿಕಾರಕ ಬದಲಾವಣೆಗಳು ಕಂಡುಬಂದವು. ಮೊದಲನೆಯದಾಗಿ ಆದದ್ದು ಭೌತಿಕಕ್ರಾಂತಿ, ಜ್ಞಾನದ ಮನರೋದ್ಧಾನ (ರಿನೇಯಸಾನ್ಸ್) ಎಂಬ ಚಳುವಳಿಯಿಂದ ಆರಂಭವಾದ ಈ ಕ್ರಾಂತಿ

ಇಂದ ಭಕ್ತಿ ಮತ್ತು ಧರ್ಮಾತಿರೇಕವಾಗಿದ್ದ ಅಲ್ಲಿನ ಸಮಾಜಗಳು ಆಧುನಿಕ ವಿಜ್ಞಾ ಸುಧಾರಿತ "ಜ್ಞಾನ-ಸಮಾಜ"ದ ಸ್ಥಿತಿ ತಲುಪಿದವು. ಎರಡನೇಯದಾಗಿ ಆದದ್ದು "ತಾಂತ್ರಿಕಕ್ರಾಂತಿ". "ಹಬೆ-ಎಂಜಿನ್" ನೊಡನೆ ಆರಂಭವಾದ ಇಂದಿನ ಮಾಹಿತಿತಂತ್ರ ಜ್ಞಾನ (ಐ.ಟಿ) ಮತ್ತು ಜೈವಿಕ-ತಂತ್ರಜ್ಞಾನ (ಬಿ.ಟಿ)ಕ್ರಾಂತಿಯು ಹಂತ ತಲುಪಿದೆ. ಮೂರನೆಯವಾಗಿ ಆದದ್ದು ಆರ್ಥಿಕ ಕ್ರಾಂತಿ. ಈ ದೇಶಗಳಲ್ಲಿ "ಕೈಗಾರಿಕಾ ಕ್ರಾಂತಿ" ಯೊಡನೆ ಆರಂಭವಾದ ಈ ಕ್ರಾಂತಿಯು ಈ ದೇಶಗಳ ಅರ್ಥವ್ಯವಸ್ಥೆಯನ್ನು ವ್ಯವಸಾಯಾಧಾರಿತ ಪರಿಸ್ಥಿತಿಯಿಂದ ಕೈಗಾರಿಕಾ ಪರಿಸ್ಥಿತಿ ಮತ್ತು ಈಗ ಕೈಗಾರಿಕೋತ್ತರ (ಪೋಸ್ಟ್ - ಇಂಡಸ್ಟ್ರಿಯಲ್) "ನವ-ಅರ್ಥ ವ್ಯವಸ್ಥೆಗೆ ತಲುಪಿಸಿದೆ. ಆಧುನೀಕರಣ ಪಥದಲ್ಲಿ ನಾಲ್ಕನೆಯದಾಗ ಈ ದೇಶಗಳಲ್ಲಿ ರಾಜಕೀಯ-ಕ್ರಾಂತಿ ನಡೆಯಿತು. ಊಳಿಗಮಾನ್ಯ ಪದ್ಧತಿ, ವಂಶಪಾರಿಕ ಆಳ್ವಿಕೆ, ಸಾಮ್ರಾಜ್ಯ-ಆಳ್ವಿಕೆಗಳಿಂದ ಇವುಗಳ ರಾಜಕೀಯವು "ರಾಷ್ಟ-ರಾಜ್ಯ" "ಗಣ-ರಾಜ್ಯ" ಮತ್ತು "ಪ್ರಜಾಪ್ರಭುತ್ವ" ಹಂತ ತಲುಪಿತು. ಐದನೆಯದಾಗಿ ಈ ರಾಷ್ಟಗಳಲ್ಲಿ ಆದದ್ದು "ಸಾಮಾಜಿಕ ಕ್ರಾಂತಿ". ಇದು ಈ ಸಮಾಜಗಳನ್ನು ಗ್ರಾಮೀಣ, ಸಂಪ್ರದಾಯಿಸ್ಥ, ಧರ್ಮಾತೀರೇಕ, ಸ್ವಾತಂತ್ರರಹಿತ-ಸಮಷ್ಟಿ ಸ್ವಾಮ್ಯ ಪರಿಸ್ಥಿತಿ ಇಂದ ನಗದೀಕರಣಗೊಂಡ, ಆಧುನಿಕ, ಧರ್ಮನಿರಪೇಕ್ಷ, ವ್ಯಕ್ತಿಸ್ವಾತಂತ್ರಪ್ರಿಯ, ಸಾಮಾಜಿಕ ಪರಿಸ್ಥಿತಿಗೆ ತಲುಪಿಸಿತು.

ಈ ಹಂತದಲ್ಲಿ ಎರಡು ಸ್ಪಷ್ಟನೆಗಳು ಅವಶ್ಯಕವೆನ್ನಿಸುತ್ತದೆ. ಮೊದಲನೆಯದಾಗಿ, ನಾವು ಈ "ಪಾಶ್ಚಿಮಾತೀಕರಣ" ಮತ್ತು "ಆಧುನೀಕರಣ" ಪದಗಳನ್ನು ಪರ್ಯಾಯವಾಗಿಯೇ ಬಳಸಿದ್ದೇವೆ. ಇದಕ್ಕೆ ಕಾರಣವೆಂದರೆ ಇವುರೆಡು ಪದಗಳನ್ನು ಬೇರ್ಪಡಿಸುವ ಪ್ರಯುತ್ನಗಳು ನಡೆದರೂ ಸಫಲವಾಗಿಲ್ಲ. ಪಶ್ಚಿಮದಲ್ಲಿ ನಡೆದದ್ದೇ ಆಧುನೀಕರಣ. ಎರಡನೆಯದಾಗಿ, ಈ "ಆಧುನೀಕರಣ" ಮಾದರಿಯಲ್ಲಿ ನಾವು "ಬಂಡವಾಳಶಾಹಿ" ಮತ್ತು "ಸಮಾಜವಾದೀ" ಮಾದರಿಗಳೆರಡನ್ನೂ ಒಂದೇ ಎಂಬಂತೆ ಕಂಡಿದ್ದೇವೆ. ಕಾರಣ, ಇವೆರಡೂ ದೊಡ್ಡ ಯಂತ್ರಗಳನ್ನಾಧರಿಸಿದ ಆಧುನೀಕರಣಕ್ಕೆ ಇರುವ ಎರಡು ಕವಲುಗಳೇ ಹೊರತು ಬೇರೆ ಬೇರೆ ಗುರಿಗಳಿಗಿರುವ ಭಿನ್ನ ದಾರಿಗಳಲ್ಲ.

## ಟೀಕೆಗಳು

ಈ ಪಾಶ್ಚಿಮಾತೀಕರಣ ಮಾದರಿಗಳ ಬಗ್ಗೆ ಅನೇಕ ಟೀಕೆಗಳಿವೆ. ಮೊದಲನೆಯದಾಗಿ, ಇತರರೆಲ್ಲರಿಗೂ ಪಶ್ಚಿಮದ ಅಭಿವೃದ್ಧಿ ಪಥವೇ ಅತ್ಯುತ್ತಮವೆಂಬ ಪಶ್ಚಿಮ ಜನಾಂಗೀಯ ಕೇಂದ್ರೀಕೃತ ಅಹಂಕಾರದ ನಂಬಿಕೆ ಇದರ ಹಿಂದೆ ಇದೆ. ಇದೊಂದು ವಿಧಿಬದ್ಧ ಏಕತಾನದ ಮಾದರಿಯಾಗಿದೆ. ಎರಡನೆಯದಾಗಿ, ಮೂರನೇ ವಿಶ್ವರಾಷ್ಟಗಳ ಮೇಲೆ ಪಶ್ಚಿಮದ ಹಿಡಿತವನ್ನು ಮುಂದುವರೆಸುವ "ನವ-ವಸಾಹತುಶಾಹಿ" (ನಿಯೋ-ಕಾಲೋನಿಯಲ್) ಮಾದರಿ ಇದಾಗಿದೆ. ಮೂರನೇಯದಾಗಿ ಈ ಪಾಶ್ಚಿಮಾತೀಕರಣ ಮಾದರಿಯು ಪರಿಸರವನ್ನು ಉಳಿಸಿ ಬಳಸುವ ಅಭಿವೃದ್ಧಿಯಾಗಾಗಲೀ ಅಥವಾ ಸಮದರ್ಶಿತ ಅಭಿವೃದ್ಧಿಯನ್ನಾಗಲೀ ಪಶ್ಚಿಮರಾಷ್ಟಗಳಲೇ ಮಾಡಲು ಸಮರ್ಥವಾಗಿಲ್ಲ. ನಾಲ್ಕನೆಯದಾಗಿ ಮೂರೇ ವಿಶ್ವರಾಷ್ಟಗಳಲ್ಲಿ ನಾಲ್ಕೈದು ದಶಕಗಳ ಇದರ ಪ್ರಯೋಗಾನಂತರವು ಅಭಿವೃದ್ಧಿಯ ಸವಾಲುಗಳನ್ನು ಎದುರಿಸಲು ಈ ಪಾಶ್ಚಿಮಾತೀಕರಣ ಮಾದರಿಯು ಸಫಲವಾಗಿಲ್ಲ.

ಈ ಟೀಕೆಗಳಿಂದಾಗಿ ಅಭಿವೃದ್ಧಿಯ "ಪರ್ಯಾಯ ಮಾದರಿ"ಗಳಿಗಾಗಿ ಹುಡುಕಾಟ ಕಂಡುಬಂದಿದೆ. ಮಹಾತ್ಮಾ ಗಾಂಧೀಜಿಯವರ "ಸರ್ವೋದಯ-ಮಾದರಿ" ಯೂ ಸೇರಿದಂತೆ ಈ ಪರ್ಯಾಯ ಮಾದರಿಗಳ ಬಗ್ಗೆ ಸಾಕಷ್ಟು ಸಾಹಿತ್ಯ ಕಂಡುಬರುತ್ತದೆ. ಆದರೆ, ಇವುಗಳಾವುವುಗಳನ್ನು ಸುಲಭವಾಗಿಯಾಗಲೀ ಅಥವಾ ಪೂರ್ಣ ಸ್ವತಂತ್ರವಾಗಿ ಆಗಲೀ ಪ್ರಾಯೋಗಿಸಲು ಆಗಿಲ್ಲ. ಈ ಪಾಶ್ಚಿಮಾತೀಕರಣ ಮಾದರಿಯು, ಈ ಬದಲೀ ಅಭಿವೃದ್ಧಿ ಮಾದರಿಗಳ[illegible] ಅಳವಡಿಸಿಕೊಳಡ ಕೆಲವು ಸುಧಾರಣೆಗಳೊಡನೆ ನಿರಂತರವಾಗಿ ಆಕರ್ಶಕವೂ, ಜನಪ್ರಿಯವೂ, ಕಾರ್ಯಸಾಧವೂ ಹಾಗೂ ಮುಂದುವರಿಕೆಉಳ್ಳವೂ, ಆಗಿ ಕಂಡುಬರುತ್ತದೆ. ಬಹುಶಃ ಇದರ ವೈಜ್ಞಾನಿಕ ಮತ್ತು ತಾಂತ್ರಿಕ ಆಧಾರ ಹಾಗೂ ಇದರ ಕಾರ್ಯತಂತ್ರಗಳಾದ ರಾಷ್ಟ-ರಾಜ್ಯ, ಪ್ರಜಾಪ್ರಭತ್ವ, ಜಾತ್ಯಾತೀತ ಹಾಗೂ ಸ್ವತಂತ್ರ ಪ್ರಿಯ ಸಮಾಜ ಹಾಗೂ ಮುಕ್ತ-ಉದ್ಯಮಶೀಲತೆಗಳಿಂದಾಗಿ

ವಿವಿಧ ದೇಶಗಳ, ಕಾಲಗಳ ಮತ್ತು ಸಂಕಷ್ಟಗಳ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಒಂದು ಚಲನಾತ್ಮಕ ಹಾಗೂ ಸ್ವಯಂ ತಿದ್ದುಪಡಿ ಮಾಡಿಕೊಳ್ಳುವ ಗುಣಗಳು ಇದರಲ್ಲಿರುವುದೇ ಈ ನಿರಂತರ ಮುಂದುವರಿಕೆಗೆ ಕಾರಣವಾಗಿದೆ. ಸಧ್ಯಕ್ಕೆ, ಈ ಪಾಶ್ಚಿಮಾತೀಕರಣ ಮಾದರಿಗೆ ಪೂರ್ಣ ಸವಾಲೊಡ್ಡುವ ಪರ್ಯಾಯ ಅಭಿವೃದ್ಧಿ ಮಾದರಿ ಕಂಡುಬರುತ್ತಿಲ್ಲ. ಬದಲಿಗೆ ಈ ಮಾದರಿಯೇ ಸುಧಾರಣೆ ಮತ್ತು ಬಳಕೆಯಲ್ಲಿ ವಿಸ್ತರಣೆ ಹೊಂದುತ್ತಿದೆ.

## 3.3.2 ಅಭಿವೃದ್ಧಿ ಬಗೆಗಿನ ವಿವಿಧ ಪಾಶ್ಚಿಮಾತ್ಯ ಸಿದ್ಧಾಂತಗಳು

ಬೆಳವಣಿಗೆ ಮತ್ತು ಅಭಿವೃದ್ಧಿಯ ಸಿದ್ಧಾಂತಗಳನ್ನು ಮೊದಲು ಪಶ್ಚಿಮದ ವಿದ್ವಾಂಸರೇ ಮುಂದಿಟ್ಟದ್ದರು. ಅನೇಕ ವಿರುವ ಈ ಸಿದ್ಧಾಂತಗಳನ್ನು ನಾವು ಈ ಕೆಳಕಂಡಂತೆ ವರ್ಗೀಕರಿಸಿ ಸಂಕ್ಷಿಪ್ತ ಪರಿಚಯಿ ಮಾಡಿಕೊಳ್ಳುತ್ತೇವೆ. ಅ) ಆರ್ಥಿಕ ಸಿದ್ಧಾಂತಗಳು, ಆ) ಮನಃಶಾಸ್ತ್ರೀಯ ಸಿದ್ಧಾಂತ.

### ಅ) ಆರ್ಥಿಕ ಸಿದ್ಧಾಂತಗಳು

ಅಭಿವೃದ್ಧಿ ಚಿಂತನೆಯಲ್ಲಿ ಆರ್ಥಿಕಾಭಿವೃದ್ಧಿಯ ಚಿಂತನೆಯೇ ಬಹುಪಾಲು ಭಾಗವಹಿಸಿದೆ. ಆಧುನಿಕ ಅರ್ಥಶಾಸ್ತ್ರದ ಒಂದು ವಿಶಿಷ್ಟ ಶಾಖೆಯಾಗಿ "ಅಭಿವೃದ್ಧಿ ಅರ್ಥಶಾಸ್ತ್ರವು (ಡೆವೆಲಪ್‌ಮೆಂಟ್ ಎಕನಾಮಿಕ್ಸ್) 20ನೇ ಶತಮಾನದ ಮಾಧ್ಯ ಭಾಗದಲ್ಲಿ ಅರಂಭಗೊಂಡು ಲೇವಿಸ್, ಶುಲ್ಟ್ಸ್ ಮತ್ತು ಅಮಾರ್ತ್ಯ ಸೇನ್ ರಂಥವರ ಕೊಡುಗೆ ಇಂದ ಈಗ ಪ್ರಬುದ್ಧಮಾನ ಹಂತ ತಲುಪಿದೆ. ಆದರೆ ಇದಕ್ಕೆ ಸ್ವಲ್ಪ ಮುಂಚೆ ಆರಂಭವಾದ "ಬೆಳವಣಿಗೆ ಅರ್ಥಶಾಸ್ತ್ರ (ಗ್ರೋತ್ ಎಕನಾಮಿಕ್ಸ್) ಎಂಬ ಅರ್ಥಶಾಸ್ತ್ರದ ಇನ್ನೊಂದು ಶಾಖೆಯ ಕೊಡುಗೆ ಅಭಿವೃದ್ಧಿ ಅರ್ಥಶಾಸ್ತ್ರಕ್ಕೆ ಬುನಾದಿ ಹಾಕಿತೆನ್ನಬಹುದು. ಅಲ್ಲದೆ, ಆಧುನಿಕ ಅರ್ಥಶಾಸ್ತ್ರದ ಪಿತಾಮಹಾರಾದ ಆಡಂಸ್ಮಿತ್‌ರ ಬರವಣಿಗೆಯಲ್ಲೆ ಇದರ ಬೇರುಗಳನ್ನು ಗುರುತಿಸಬಹುದು. ಇವರು ಆರಂಭಿಸಿದ ಶಾಸ್ತ್ರೀಯ ಅರ್ಥಶಾಸ್ತ್ರವು ಅಭಿವೃದ್ಧಿಯ ಬಗ್ಗೆ ನೇರವಾಗಲ್ಲದಿದ್ದರೂ ಪರೋಕ್ಷವಾಗಿ ಕೊಡುಗೆ ನೀಡಿದೆ. ಆನೇಕವಿರುವ ಈ ಅಭಿವೃದ್ಧಿಯ ಬಗೆಗಿನ ಆರ್ಥಿಕ ಸಿದ್ಧಾಂತಗಳನ್ನು ನಾವು ಕೆಳಕಂಡಂತೆ ವರ್ಗೀಕರಿಸಿ ಪರಿಚಯ ಮಾಡಿಕೊಳ್ಳುತ್ತೇವೆ : i) ಅಭಿವೃದ್ಧಿಯ ಬಗ್ಗೆ ಶಾಸ್ತ್ರೀಯ ಅರ್ಥಶಾಸ್ತ್ರದ ಸಿದ್ಧಾಂತ, ii) ಮಾರ್ಕ್ಸ್‌ವಾದಿಗಳ ಅಭಿವೃದ್ಧಿ ಸಿದ್ಧಾಂತ iii) ಆರ್ಥಿಕ ಬೆಳವಣಿಗೆಯ ಬಗೆಗಿನ ಸಿದ್ಧಾಂಗಳು iv) ಪ್ರಸರಣ ಸಿದ್ಧಾಂತ v) ಪರಾವಲಂಬನ ಸಿದ್ಧಾಂತ ಮತ್ತು vi) ನವ ಅಂತರ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಮಾರ್ಗ.

### i) ಅಭಿವೃದ್ಧಿಯ ಬಗ್ಗೆ ಶಾಸ್ತ್ರೀಯ ಅರ್ಥಶಾಸ್ತ್ರದ ಸಿದ್ಧಾಂತ

ಅಭಿವೃದ್ಧಿಯ ಬಗೆಗಿನ ಶಾಸ್ತ್ರೀಯ ಅರ್ಥಶಾಸ್ತ್ರದ ಸಿದ್ಧಾಂತ ಪರೋಕ್ಷವಾಗಿದೆ. ಶಾಸ್ತ್ರೀಯ ಅರ್ಥಶಾಸ್ತ್ರದ ಪಿತಾಮಹನಾದ ಆಡಂಸ್ಮಿತ್‌ನು ತನ್ನ ಗ್ರಂಥ <u>ಅನ್ ಎಂಕ್ವೈರಿ ಇನ್‌ಟು ದಿ ನೇಚರ್ ಅಂಡ್ ವೆಲ್ತ್ ಆಫ್ ನೇಷನ್ಸ್</u> **<u>(1779)</u>** ಎಂಬ ಗ್ರಂಥದಲ್ಲಿ ರಾಷ್ಟ್ರಗಳ ಶಕ್ತಿ ಮತ್ತು ಐಶ್ವರ್ಯದ ಬೆಳವಣಿಗೆಗೆ ಲೇಸೇಫೆರ್ ಅಂದರೆ ಮುಕ್ತ ಮಾರುಕಟ್ಟೆ ಆರ್ಥಿಕ ನೀತಿ, ಜನಸಂಖ್ಯಾ ನಿಯಂತ್ರಣ, ಶ್ರಮವರ್ಗೀಕರಣ, ಮತ್ತು ಬಂಡವಾಳ ಪೇರಿಕೆಗಳನ್ನು ಅವಶ್ಯಕವಾದ ಆರ್ಥಿಕಾಂಶಗಳೆಂದಿದ್ದರು. ಇವರನ್ನನುಸರಿಸಿದ ಇತರ ಶಾಸ್ತ್ರೀಯ ಅರ್ಥಶಾಸ್ತ್ರಜ್ಞರಾದ ಜೆ.ಎಸ್.ಮಿಲ್.ರಿಕಾರ್ಡೋ, ಮಾಲ್ತೂಸ್ ಮುಂತಾದವರು ಬಂಡವಾಳಶಾಹಿ ವ್ಯವಸ್ಥೆಯ ಅಥವಾ ಮಾರುಕಟ್ಟೆ ಅರ್ಥವ್ಯವಸ್ಥೆಯಲ್ಲಿ ಪ್ರಮುಖವಾಗಿ ಪಾತ್ರವಹಿಸುವ ಅಂಶಗಳಾದ ಭೂಮಿ, ಬಂಡವಾಳ, ಕೂಲಿ, ಬಡ್ಡಿ, ಬಾಡಿಗೆ, ಬೆಲೆಗಳು, ಆದಾಯಗಳು, ಉಳಿತಾಯಗಳು, ಬೇಡಿಕೆ ಮತ್ತು ಪೂರೈಕೆ ಮುಂತಾದವುಗಳ ನಡವಳಿಕೆಗಳ ಬಗ್ಗೆ ಬೆಳಕುಚಲ್ಲಿದರು. ಆರ್ಥಿಕಾಭಿವೃದ್ಧಿಯ ಬಗ್ಗೆ ಇವರೆಲ್ಲರ ಕೊಡುಗೆ ಪರೋಕ್ಷವಾಗಿತ್ತು. ಮುಖ್ಯವಾಗಿ ಇವರ ಗಮನ ಬಂಡವಾಳಶಾಹಿ ವ್ಯವಸ್ಥೆಯನ್ನು ಬೆಳೆಸುವುದಾಗಿತ್ತು.

## ii) ಮಾರ್ಕ್ಸ್‌ವಾದಿಗಳ ಅಭಿವೃದ್ಧಿ ಸಿದ್ಧಾಂತ

ಮಾರ್ಕ್ಸ್‌ವಾದಿಗಳೆಂದು ಕರೆಯಲ್ಪಟ್ಟ ಕಾರ್ಲ್‌ಮಾರ್ಕ್ಸ್ ಮತ್ತು ಅವನ ಅನುಯಾಯಿಗಳಾದ ಈಂಗ್ಲ್ಸ್, ಲೆನಿನ್ ಮುಂತಾದವರು, ಬಂಡವಾಳಶಾಹಿವ್ಯವಸ್ಥೆಯನ್ನು ಒಂದು ಸುಲಿಗೆ ವ್ಯವಸ್ಥೆಯೆಂದೂ ಹಾಗೂ ತನ್ನದೇ ಬಾರದಿಂದ ಕೊನೆಗೆ ತಾನೇತಾನಾಗಿ ಕುಸಿದು ಬೀಳುವ ವ್ಯವಸ್ಥೆಯೆಂದು ಬಣ್ಣಿಸಿದರು. ಮಾರ್ಕ್ಸ್‌ವಾದದ ಆರ್ಥಿಕ ಚರಿತ್ರೆಯ ಪ್ರಕಾರ ಮಾನವನ ಆರ್ಥಿಕ ಜೀವನವು ಕೆಳಕಂಡ ಐದು ಹಂತಗಳಲ್ಲಿ ವಿಕಾಸಗೊಳ್ಳುತ್ತದೆ : 1) ಆದಿಕಾಲದ ಸಮತಾವಾದ, 2) ಊಳಿಗಮಾನ ಅರ್ಥವ್ಯವಸ್ಥೆ, 3) ಬಂಡವಾಳಶಾಹಿ ಅರ್ಥವ್ಯವಸ್ಥೆ, 4) ಸಮಾಜವಾದೀ ಆರ್ಥಿಕ ವ್ಯವಸ್ಥೆ ಮತ್ತು 5) ಸಮತಾವಾದೀ ಅರ್ಥಿಕ ವ್ಯವಸ್ಥೆ. ಆದ್ದರಿಂದ ಬಂಡವಾಳಶಾಹಿ ಪದ್ಧತಿಯು ಮಾನವ ಜೀವನದಲ್ಲಿ ಬಂದು ಹೋಗುವ ಒಂದು ಹಂತವಾಗಿದೆ. ಇದಕ್ಕೆ ಆಧಾರವಾಗಿರವಾಗಿರುವ ಕಾರ್ಮಿಕ ವರ್ಗದ ಶೋಷಣೆಯೇ ಇದಕ್ಕೆ ಕೊನೆಯಲ್ಲಿ ಮುಳುವಾಗುತ್ತದೆ. ನಿರಂತರ ಸುಲಿಗೆ ಇಂದ ಸಮಾಜದಲ್ಲಿ ವರ್ಗೀಕರಣ ಮತ್ತು ವರ್ಗಕಲಹಗಳು ಹೆಚ್ಚಾಗುತ್ತಾ ಹೋಗಿ ಕೊನೆಯಲ್ಲಿ ಸಾಗರದಷ್ಟು ಬೆಳೆದಿರುವ ಶೋಷಿತ ಕಾರ್ಮಿಕವರ್ಗ ದ್ವೀಪದಂತೆ ಸಣ್ಣದಾಗಿರುವ ಬಂಡವಾಳ ಶಾಹೀ ವರ್ಗವನ್ನು ಏರುವ ವರ್ಗ ಸಂಘರ್ಷದ ಅಲೆಯಿಂದ ಕೊನೆಗಾಣಿಸಿ ಸಮಾಜವಾದ ವ್ಯವಸ್ಥೆಗೆ ದಾರಿ ಮಾಡುತ್ತದೆ.

ಸಮಾಜವಾದಿ ವ್ಯವಸ್ಥೆಯಲ್ಲಿ ಕಾರ್ಮಿಕವರ್ಗದ ನಿರಂಕುಶ ಪ್ರಭುತ್ವ, ಅರ್ಥವ್ಯವಸ್ಥೆಯ ರಾಷ್ಟ್ರೀಕರಣ, ರಾಷ್ಟ್ರೀಯ ಯೋಜನೆ ಮತ್ತು ಆರ್ಥಿಕ ನಿಯಂತ್ರಣ ಮತ್ತು ಇವುಗಳಿಂದಾದ ಉತ್ತಮವಾದ ಹಾಗೂ ಸಮನ್ವಯಗೊಳಿಸಿದ ಉತ್ಪಾದನೆ, ವಿತರಣೆ ಮತ್ತು ಉಪಭೋಗಗಳಿರುತ್ತವೆ. ಕಾಲಕ್ರಮೇಣ ಸಮಾಜದಲ್ಲಿ ಸಮೃದ್ಧವಾಗಿ ಬೆಳೆಯುವ ಸಂಪತ್ತು ಮತ್ತು ವಿದ್ಯೆಗಳಿಂದಾಗಿ ಸಮಾಜವಾದ ವ್ಯವಸ್ಥೆಯು ಅಂತ್ಯಗೊಂಡು ಸಮತಾವಾದಿ ವ್ಯವಸ್ಥೆಯು ಜಾರಿಗೆ ಬರುತ್ತದೆ. ಸಮತಾವಾದಿ ಹಂತದಲ್ಲಿ "ರಾಜ್ಯರಹಿತ" ಮತ್ತು "ವರ್ಗರಹಿತ" ಸಮಾಜವಿದ್ದು ಸಮೃದ್ಧಿ, ಸಮಾಧಾನ, ಶಾಂತಿ ಮತ್ತು ಸ್ವಯಂ ಆಡಳಿತ ಸಮುದಾಯಗಳಿರುತ್ತವೆ.

20ನೇ ಶತಮಾದ ಮೊದಲ ಅರ್ದಭಾಗದಲ್ಲಿ ಕೆಲವು ಸಮಾಜವಾದೀ ಪ್ರಯೋಗಗಳು ಸೋವಿಯತ್ ಯೂನಿಯನ್, ಪೂರ್ವ ಯೋರೋಪ್ ದೇಶಗಳು ಹಾಗೂ ಚೈನಾ ದೇಶದಲ್ಲಿ ನಡೆದವು. ಇದರಿಂದ ಆದೇಶಗಳ ತ್ವರಿತ ಆರ್ಥಿಕ ಬೆಳವಣಗೆಯೂ ಆಯಿತು. ಆದರೆ 20ನೇ ಶತಮಾನದ ಕೊನೆಯ ಅರ್ದಭಾಗದಲ್ಲಿ ಸೋವಿಯತ್ ಯೂನಿಯನ್ ಮತ್ತು ಪೂರ್ವ ಯೂರೋಪ್ ರಾಷ್ಟಗಳಲ್ಲಿ ಸಮಾಜವಾದೀ ವ್ಯವಸ್ಥೆಗಳು ತಮ್ಮ ಆಂತರಿಕ ವೈರುಧ್ಯದಿಂದ ಕುಸಿದುಬಿದ್ದವು. ಇವುಗಳು ಬಂಡವಾಳಶಾಹಿ ಮಾರುಕಟ್ಟೆ ವ್ಯವಸ್ಥೆಗೆ ತೆರಳಿದವು. ಚೈನಾ ಮತ್ತು ಕೆಲವು ದಕ್ಷಿಣ ಅಮೇರಿಕಾ ರಾಷ್ಟಗಳಲ್ಲಿ ಸಮಾಜವಾದೀ ಪ್ರಯೋಗಗಳೂ ಈಗಲೂ ಮುಂದುವರೆದಿದ್ದರೂ ಅವುಗಳು ಆರ್ಥಿಕ ನಿರ್ವಹಣೆಗೆ ಮಾರುಕಟ್ಟೆಯನ್ನು ಹೆಚ್ಚು ಹೆಚ್ಚಾಗಿ ಅವಲಂಬಿಸುತ್ತಿವೆ. ಆದ್ದರಿಂದ ಇವುಗಳನ್ನು "ಮಾರುಕಟ್ಟೆ- ಸಮಾಜವಾದ" ಹೊಂದಿದ ರಾಷ್ಟಗಳೆಂದು ಕರೆಯಲಾಗುತ್ತಿದೆ. ಕೊನೆಯದಾದ ಸಮತಾವಾದಿ ಹಂತದ ಅರ್ಥವ್ಯವಸ್ಥೆಯ ಕನಸು ಕ್ಷೀಣವಾಗಿದೆ.

ಇದೇನೇ ಇರಲಿ ಸಮಾಜವಾದಿ ಪ್ರಯೋಗಗಳಿಂದ ಅರ್ಥವ್ಯವಸ್ಥೆ ನಿರ್ವಹಣೆಯಲ್ಲಿ ರಾಜ್ಯದ ಪಾತ್ರದ ಸಾಮರ್ಥ್ಯ ಮತ್ತು ಇತಿಮಿತಿಗಳು ಸ್ಪಷ್ಟಗೊಂಡವು. ಉತ್ತಮ ಆರ್ಥಿಕ ನಿರ್ವಹಣೆಗೆ ರಾಜ್ಯ ಮತ್ತು ಮಾರುಕಟ್ಟೆಗಳೆರಡರ ಪಾತ್ರವೂ ಅನಿವಾರ್ಯ ಎಂಬುದು ಸ್ಪಷ್ಟವಾಯಿತು, ಮುಕ್ತ ಮಾರುಕಟ್ಟೆ ನೀತಿಯನ್ನು ಅವಲಂಬಿಸಿದ್ದ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಮೊದಲನೆ ಮಹಾಯುದ್ಧದ ನಂತರ 1920ರ ದಶಕದ ಕೊನೆಯ ಭಾಗದಲ್ಲಿ ಆದ ಆರ್ಥಿಕ ಮಹಾಕುಸಿತದಿಂದ ಮಾರುಕಟ್ಟೆಯನ್ನು ಉತ್ತೇಜಿಸಲು ರಾಜ್ಯದ ಮಧ್ಯಪ್ರವೇಶಿಕೆ ಆರ್ಥಿಕ ನಿರ್ವಹಣೆಗೆ ಅನಿವಾರ್ಯ ವೆಂಬುದು ಅರಿವಾಯಿತು. ಜೆ.ಎಮ್.ಕೇನ್ಸ್ ಎಂಬ ಇಂಗ್ಲೇಡಿನ ಅರ್ಥಶಾಸ್ತ್ರಜ್ಞರು ಇದಕ್ಕೆ ತಾತ್ವಿಕ ನೆಲೆ ಒದಗಿಸಿದರು, ಅಮೇರಿಕಾದ "ನ್ಯೂಡೀಲ್", ಬ್ರಿಟನ್‌ನಿನ "ಕಲ್ಯಾಣರಾಜ್ಯ" ಮತ್ತು ಯೂರೋಪಿಯನ್ ದೇಶಗಳಲ್ಲಿ ಸಮಾಜವಾದಿ ಪ್ರಜಾಪ್ರಭುತ್ತ ಪ್ರಯೋಗಗಳು

ಕೇನ್ಸ್ ರವರ ಅರ್ಥಶಾಸ್ತ್ರದ ಹಾದಿ ಹಿಡಿದಿದ್ದವು. ಇವುಗಳಿಂದಾಗಿ ಎರಡನೇ ಮಹಾಯುದ್ಧದ ನಂತರ ಅಮೇರಿಕಾ ಮತ್ತು ಯೂರೋಪ್ ದೇಶಗಳಲ್ಲಿ ಆರ್ಥಿಕ ಪ್ರಗತಿ ಏರಿತ್ತು. ಅಗತಾನೆ ಸ್ವತಂತ್ರ ಪಡೆದಿದ್ದ ಮೂರನೇ ವಿಶ್ವರಾಷ್ಟ್ರಗಳಿಲ್ಲಿ ಅಂತದೇ ಆರ್ಥಿಕ ಪ್ರಗತಿಯ ಕನಸು ಪ್ರಬಲವಾಯಿತು. ಈ ಕಾಲದಲ್ಲಿ ಆರ್ಥಿಕ ಬೆಳವಣಿಗೆಯ ಅನೇಕ ಸಿದ್ಧಾಂತಗಳು ಹೊರಹೊಮ್ಮಿದವು.

## iii) ಆರ್ಥಿಕ ಬೆಳಬಣಿಗೆಯ ಬಗೆಗಿನ ಸಿದ್ಧಾಂತಗಳು

1950ರ ದಶಕದಲ್ಲಿ ಆರ್ಥಿಕ ಬೆಳವಣಿಗೆಯ ಮೇಲೆ ಒತ್ತು ಹೆಚ್ಚು ನೀಡಲಾಗುತ್ತಿತ್ತು. ದೇಶದ ಒಟ್ಟಾರೆ ಉತ್ಪಾದನೆಯನ್ನು ಅಳೆದು ಇದನ್ನು ತಿಳಿಯಬಹುದೆಂದು ಡೊಗ್ಲಾಸ್ ನಾರ್ತ್ ಎಂಬ ಅರ್ಥಶಾಸ್ತ್ರಜ್ಞರು ಮತ್ತು ದೇಶದ ಒಟ್ಟಾರೆ ಆದಾಯ ಹಾಗೂ ಒಟ್ಟಾರೆ ತಲಾವಾರು ಆದಾಯಗಳನ್ನು ಅಳೆದು ಇದನ್ನು ತಿರ್ಮಾನಿಸಬಹುದೆಂದು ಸೈಮಾನ್ ಕುಜ್‌ನೆಟ್‌ರೆಂಬ ಅರ್ಥಶಾಸ್ತ್ರಜ್ಞರು ಪ್ರತಿಪಾದಿಸಿದರು. ಆರ್ಥಿಕ ಬೆಳವಣಿಗೆಯ ಅನೇಕ ನಾಜೋಕಾದ ಸಂಖ್ಯಾಶಾಸ್ತ್ರ ಮತ್ತು ಗಣಿತಶಾಸ್ತ್ರ ಆಧಾರಿತ ಮಾದರಿಗಳು ಹೊರಬಂದವು. ಇವುಗಳನ್ನು "ಬೆಳವಣಿಗೆಯ ಅರ್ಥಶಾಸ್ತ್ರ (ಗ್ರೋತ್ ಎಕ್‌ನಾಮಿಕ್ಸ್) ಎಂದು ಕರೆಯಲಾಯಿತು.

ಈ ಆರ್ಥಿಕ ಬೆಳವಣಿಗೆಯ ಸಿದ್ಧಾಂತಗಳು ಅಥವಾ ಬೆಳವಣಿಗೆಯ ಅರ್ಥಶಾಸ್ತ್ರವು ಅಭಿವೃದ್ಧಿ ಹೊಂದಿದ ಮತ್ತು ಹಿಂದುಳಿದ ರಾಷ್ಟಗಳೆರಲ್ಲಿ ಆರ್ಥಿಕ ಬೆಳವಣಿಗೆಯನ್ನು ಅಧ್ಯಯನ ಮಾಡಿದವು. ಇವುಗಳ ಗಮನ ಆರ್ಥಿಕ ಬೆಳವಣಿಗೆಯ ಮಾತ್ರ ನೇರವಾಗಿದ್ದು ಅಭಿವೃದ್ಧಿಯ ಮೇಲೆ ಬರೀ ಪರೋಕ್ಷವಾಗಿತ್ತು. ಇದೇ ಕಾಲದಲ್ಲಿ ಬೆಳೆದ ಅಭಿವೃದ್ಧಿ ಅರ್ಥಶಾಸ್ತ್ರವು (ಡೆವೆಲಪ್‌ಮೆಂಟ್ ಏಕನಾಮಿಕ್ಸ್) ಅಭಿವೃದ್ಧಿಯ ಮೇಲೆ ಹಾಗೂ ಹಿಂದುಳಿದ ಮೂರನೇ ವಿಶ್ವರಾಷ್ಟ್ರಗಳಲ್ಲಿನ ಅಭಿವೃದ್ಧಿಯ ಮೇಲೆ ತನ್ನ ಗಮನವನ್ನು ನೇರವಾಗಿ ಕೇಂದ್ರಿಕರಿಸಿತ್ತು. ಅಭಿವೃದ್ಧಿಯನ್ನು ಬರೀ ಆರ್ಥಿಕ ಬೆಳವಣಿಗೆಯಲ್ಲ ಅದು ಬೆಳವಣಿಗೆ ಮತ್ತು ಬದಲಾವಣೆ ಎಂಬುದು ಅಭಿವೃದ್ಧಿ ಅರ್ಥಶಾಸ್ತ್ರದ ನಿಲುವಾಗಿತ್ತು. ಆದರೂ 1950 ಮತ್ತು 1960ರ ದಶಕಗಳಲ್ಲಿ ಬೆಳವಣಿಗೆಯ ಸಿದ್ಧಾಂತದ ಪ್ರಾಬಲ್ಯವೇ ಹೆಚ್ಚಿತ್ತು.

ಬೆಳವಣಿಗೆಯ ಸಿದ್ಧಾಂತಗಳು ಆರಂಭದಲ್ಲಿ ಪಶ್ಚಿಮದ ಅಭಿವೃದ್ಧಿಹೊಂದಿದ ರಾಷ್ಟಗಳ ಆರ್ಥಿಕ ಬೆಳವಣಿಗೆಯ ಮೇಲೆ ಗಮನಕೇಂದ್ರೀಕರಿಸಿದ್ದವು. ಜೋನ್ ರಾಬಿನ್‌ಸನ್ ಎಂಬುವರು ಬಂಡವಾಳ ಷೇರಿಕೆ ಮತ್ತು ಹೊಡಿಕೆಯ ಏರಿಕೆಯೇ ಈ ದೇಶಗಳಲ್ಲಿ ಬೆಳವಳಿಗೆಗೆ ದಾರಿ ಎಂದರು. ರಾಬರ್ಟ್ ಸೋಲೋ ಎಂಬುವರು ತಾಂತ್ರಿಕ ಬದಲಾಣೆಗಳೇ ಬೆಳವಣಿಗೆಯ ಸೂತ್ರವೆಂದರು. ಈ ದೇಶಗಳಲ್ಲಿನ ನಿರುದ್ಯೋಗ ಸಮಸ್ಯೆಗೆ ಉಳಿತಾಯ ಮತ್ತು ಹೊಡಿಕೆ ಹೆಚ್ಚಿಸಿ ಆರ್ಥಿಕ ಬೆಳವಣಿಗೆ ತರುವ ಮಾದರಿಯನ್ನು ಹೆರಾಡ್ – ಡಾಮರ್ ಎಂಬ ಇಬ್ಬರು ತಜ್ಞರು ಮುಂದಿಟ್ಟರು.

ಮೂರನೇ ವಿಶ್ವರಾಷ್ಟಗಳಲ್ಲಿ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಗಳನ್ನು ಕುರಿತು ಮಾತನಾಡುವ ಮೊದಲು ಅಲ್ಲಿ "ಹಿಂದುಳಿದಿರುವಿಕೆಗೆ" ಕಾರಣಗಳನ್ನು ಗುರುತಿಸಬೇಕಾಯಿತು. ರೆಗ್ನಾರ್ ನರ್ಕ್ಸ್ ಎಂಬುವರು ಈ ದೇಶಗಳಲ್ಲಿರುವ ಬಡತನ ಮತ್ತು ಕಡಿಮೆ ಉತ್ಪಾದನೆಗಳಿಂದಾದ "ವಿಷ ವೃತ್ತ" ಪರಿಸ್ಥಿರಿಯೇ ಇದಕ್ಕೆ ಕಾರಣವೆಂಬ ಸಿದ್ಧಾಂತವನ್ನು ಮುಂದಿಟ್ಟರು. ರೊಸ್ಟೊವ್‌ರವರು ಈ ದೇಶಗಳಲ್ಲಿರವ "ಪುರಾತನ ಸಮಾಜ" ಸ್ಥಿತಿಯೇ ಇದಕ್ಕೆ ಕಾರಣವೆಂದರು.

ಮೂರನೇ ವಿಶ್ವರಾಷ್ಟಗಳಿಗೆ ಆರ್ಥಿಕ ಬೆಳವಣಿಗೆಯನ್ನು ತರಲು ಬಂಡವಾಳ ಹೊಡಿಕೆಯಲ್ಲಿ ಒಂದು ಬೃಹತ್–ಮುಂದಬ್ಬುವಿಕೆ (ಬಿಗ್–ಪುಷ್) ಅಗತ್ಯವೆಂಬ ಸಿದ್ಧಾಂತವನ್ನು ಮುಂದಿಟ್ಟರು. ರಾಜ್ಯದಿಂದಲೇ ಬಂಡವಾಳ ಹೊಡಿಕೆಕ ಹೆಚ್ಚಿಸುವ ಪ್ರಯತ್ನವಾದರೂ ಸರಿ ಈ ದೇಶಗಳಲ್ಲಿ ಬಂಡವಾಳ ಹೊಡಿಕೆಗೆ ಸಂಬಂಧಪಟ್ಟಂತೆ ಒಂದು "ನಿರ್ಧಾರಾತ್ಮಕ ಕನಿಷ್ಠ ಪ್ರಯತ್ನ" (ಕ್ರಿಟಿಕಲ್ ಮಿನಿಮಮ್ ಎಫರ್ಟ್) ಬೇಕೆಂದು ಸಿದ್ಧಾಂತವನ್ನು ಲೆಬೆನ್‌ಸ್ಟೈನ್ ಎಂಬುವರು ಮುಂದಿಟ್ಟರು. ಈ ಮೇಲಿನ ಬೆಳವಣಿಗೆಯ ಅರ್ಥಶಾಸ್ತ್ರಜ್ಞರೆಲ್ಲರೂ ಬೆಳವಣಿಗೆಗೆ ಉಳಿತಾಯ ಮತ್ತು ಹೊಡಿಕೆಗಳ ಹೆಚ್ಚಳದ ಮೇಲೆ ಒತ್ತು ನೀಡಿದರು.

ಈ ಬೆಳವಣಿಗೆ ಚೆನ್ನಾಗಿ ಆಗಬೇಕಾದರೆ ಅದು "ಸಮತೋಲನದ ಬೆಳವಣಿಗೆ" ಆಗಬೇಕೆಂದು ಸಿದ್ಧಾಂತವನ್ನು ಹೆರಾಡ್-ಡಾಮರ್, ನರ್ಕ್ಸ ಮತ್ತು ಆರ್ಥರ್ ಲೆವಿಸ್ ಮುಂತಾದವರು ಮುಂದಿಟ್ಟರು. ಅರ್ಥವ್ಯವಸ್ಥೆಯ ವಿವಿಧ ವಲಯಗಳ ನಡುವೆ, ಉದಾಹರಣೆಗೆ, ಕೃಷಿ-ಕೈಗಾರಿಕೆ, ಪ್ರಾದೇಶಿಕ ವಲಯಗಳು, ದೇಶದ ಆಂತರಿಕ-ಬಾಹ್ಯ ವಲಯಗಳ ಬೆಳವಣಿಗಯ ಸಮತೋಲಿನ ಕಾಪಾಡಬೇಕೆಂಬುದು ಇವರ ವಾದ. ಇದಕ್ಕೆ ವಿರೋಧವಾಗಿ ಹರ್ಷ್‌ಮ್ಯಾನ್, ಸಿಂಗರ್, ಕಿಂಡಲ್ ಬರ್ಗರ್, ಪಾಲ್‌ಸ್ಟೀಟನ್ ಮತ್ತು ಡಬ್ಲ್ಯೂ. ಡಬ್ಲ್ಯೂ ರೊಸ್ಟೋವ್ ಮುಂತಾದವರು "ಅಸಮತೋಲನದ ಬೆಳವಣಿಗೆ"ಯೇ ಅಗತ್ಯವೆಂಬ ಸಿದ್ಧಾಂತವನ್ನು ಪ್ರತಿಪಾದಿಸಿದರು. ಈ ಸಿದ್ಧಾಂತದ ಪ್ರಕಾರ ಕಡಿಮೆ ಇರುವ ಬಂಡವಾಳವನ್ನು ಹರಿದು ಹಂಚಿದರೆ ಪ್ರಯೋಜನವಿಲ್ಲ. ಬದಲಾಗಿ, ಒಂದು ಅಥವಾ ಕೆಲವು ಪ್ರಮುಖ ಕ್ಷೇತ್ರಗಳ ಮೇಲೆಯೇ ಹೆಚ್ಚು ಹೂಡಿ ಅವುಗಳು ಪರಿಣಾಮಕಾರಿಯಾಗಿ ಬೆಳೆಯುವಂತೆ ಮಾಡಿದರೆ ಇತರ ಕ್ಷೇತ್ರ ಅಥವಾ ವಲಯಗಳನ್ನು ಬೆಳವಣಿಗೆಯ ಹಾದಿಯಲ್ಲಿ ಅವುಗಳು ಎಳೆದುಕೊಂಡು ಹೋಗುತ್ತವೆ ಎಂಬುದು ಇವರ ನಿಲುವಾಗಿತ್ತು.

ಆರ್ಥಿಕ ಬೆಳವಣಿಗೆಯ ಸಿದ್ಧಾಂತವನ್ನು ಹೆಚ್ಚು ವಿಷದವೂ ಮತ್ತು ವ್ಯವಸ್ಥಿತವಾಗಿಯೂ ಮಾಡುವ ಪ್ರಯತ್ನವನ್ನು ನಾವು ಡಬ್ಲ್ಯೂ. ಡಬ್ಲ್ಯೂ ರೊಸ್ಟೋವ್ ರವರ "ಬೆಳವಣಿಗೆ ಹಂತಗಳು" ಎಂಬ ಸಿದ್ಧಾಂತದಲ್ಲಿ ಕಾಣಬಹುದು. ರೊಸ್ಟೋವ್ ರವರು ತಮ್ಮ ಈ "ಹಂತಗಳ ಸಿದ್ಧಾಂತ"ದಲ್ಲಿ ಆರ್ಥಿಕ ಬೆಳವಣಿಗೆಯ ಕೆಳಕಂಡ ಐದು ನಿರ್ದಿಷ್ಟ ಹಂತಗಳನ್ನು ಗುರುತಿಸಿದ್ದಾರೆ.

1. "ಪುರಾತನ – ಸಮಾಜದ ಹಂತ"
2. "ಉಡಾವಣಿಗೆ-ಮುಂಚಿನ ಹಂತ"
3. "ಉಡಾವಣೆಯ ಹಂತ"
4. "ಪ್ರಬುದ್ಧತೆಯ ಹಂತ"
5. "ಸಾಮೂಹಿಕ ಉಪಯೋಗದ ಎತ್ತರದ ಹಂತ ಅಥವಾ ಕಾಲ"

ಈ ಐದು ಹಂತಗಳಲ್ಲಿ ಮೊದಲನೆಯದಾದ "ಪುರಾತನ-ಸಮಾಜನ ಹಂತ"ದಲ್ಲಿ ರಾಷ್ಟ್ರದ ಅರ್ಥವ್ಯವಸ್ಥೆಯು ಹಿಂದುಳಿದುರುತ್ತದೆ. ಎರಡನೆಯದಾದ "ಉಡಾವಣಿಗೆ ಮುಂಚಿನ ಹಂತದಲ್ಲಿ ಅದು ಬೆಳವಣಿಗೆ ಕಡೆಗೆ ಚಲಿಸಲಾರಂಭಿಸುತ್ತದೆ. ರಾಷ್ಟ್ರೀಯ ಒಟ್ಟು ಆದಾಯದ ಶೇಕಡ 5 ಭಾಗದಷ್ಟು ಹೂಡಿಕೆಯೊಡನೆ ಈ ಹಂತ ಆರಂಭವಾಗುತ್ತದೆ. ಈ ಹೂಡಿಕೆ ಶೇಕಡ 10 ರಷ್ಟಾದಾಗ ಮೂರನೆಯ ಹಂತವಾದ "ಉಡಾವಣೆಯ-ಹಂತ" ಆರಂಭವಾಗುತ್ತದೆ. ಈ ಮೂರನೆಯ ಹಂತದಲ್ಲಿ ಬೆಳವಣಿಗೆಯು ರಾಷ್ಟ್ರದ ಒಂದು ಸ್ವಾಭಾವಿಕ (ನಾರ್ಮಲ್) ಪರಿಸ್ಥಿತಿಯಾಗಿದ್ದು ಅಥವಾ ಉಡಾವಣೆಯಾಗಿ ಹಾರಾಡುತ್ತಿರುತ್ತದೆ. ಈ ಹಂತದಲ್ಲಿ ರಾಷ್ಟ್ರೀಯ ಆದಾಯ ಮತ್ತು ಕೈಗಾರಿಕಾ ಬೆಳವಣಿಗೆಯ ದರಗಳಲ್ಲಿ ಎತ್ತರ ಕಂಡುಬರುತ್ತದೆ. ಈ ಹಂತದಲ್ಲಿ ಬೆಳವಣಿಗೆ ಪ್ರೋತ್ಸಾಹಿಸುವ ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆ ಮತ್ತು ನಿಯಮಗಳು ಸೂಕ್ತ ಸ್ಥಾನದಲ್ಲಿರುತ್ತವೆ. ನಾಲ್ಕನೆಯದಾದ "ಪ್ರಭುದ್ಧತೆಯ-ಹಂತ"ದಲ್ಲಿ ಅರ್ಥವ್ಯವಸ್ಥೆಯು ಸ್ವಯಂಚಾಲಿತವಾಗಿ ಉಳಿದು-ಬೆಳೆಯುವ ಸ್ಥಿತಿಯಲ್ಲಿದ್ದು ಕೈಗಾರಿಕೋತ್ತರ ಸಮಾಜದೆಡೆಗೆ ಚಲಿಸುತ್ತದೆ. ಅಂದರೆ, ಈ ಹಂತದಲ್ಲಿ ಅರ್ಥವ್ಯವಸ್ಥೆಯಲ್ಲಿ ಕೈಗಾರಿಕೆ ಕ್ಷೇತ್ರದ ಪಾಮುಖ್ಯತೆ ಕಡಿಮೆಯಾಗಿ ಸೇವಾಕ್ಷೇತ್ರದ ಪ್ರಾಮುಖ್ಯತೆ ಮೇಲುಗೈ ಪಡೆಯುತ್ತದೆ. ಐದನೆಯ ಮತ್ತು ಕೊನೆಯ ಹಂತದಲ್ಲಿ ಸಮಾಜದಲ್ಲಿನ ಉತ್ಪಾದನೆ ಮತ್ತು ಅನುಭೋಗ ಸಾಮಗ್ರಿಗಳ ದೊರೆಯುವಿಕೆ ಹೇರಳವಾದ ಒಂದು ಸಂಪತ್ತಿನ-ಸಮಾಜ (ಅಫ್ಲೂಯೆಂಟ್ ಸೊಸೈಟಿ) ನಿರ್ಮಾಣವಾಗಿರುತ್ತದೆ. ಈ ಸಮಾಜವು ಉಪಭೋಗ ಮತ್ತು ಕಲ್ಯಾಣಾಭಿಮುಖವಾಗಿದ್ದು ಅದೊಂದು "ಸಾಮಾಹಿಕ ಉಪಭೋಗದ ಎತ್ತರದ ಕಾಲ" ವಾಗಿರುತ್ತದೆ.

ರೊಸ್ಟೊವ್ ರವರ ಈ "ಹಂತ-ಸಿದ್ಧಾಂತವು" ಆರ್ಥಿಕ ಬೆಳವಣಿಗೆಯ ಬಗೆಗಿನ ಒಂದು ಆಕರ್ಷಕ ಹಾಗೂ ಒಳನೋಟ ನೀಡುವ ಸಿದ್ಧಾಂತವಾಗಿದೆ. ಆದರೆ ಅನೇಕ ಅರ್ಥಶಾಸ್ತ್ರಜ್ಞರು ಇದನ್ನು ಸಾಕಷ್ಟು ವಾಸ್ತವಿಕ ಸಾಕ್ಷಿ ಇಲ್ಲದ" "ಸಾಮಾನ್ಯ ಹೇಳಿಕೆ" ಗಳೆಂದು ಟೀಕಿಸುತ್ತಾರೆ.

## iv) ಪ್ರಸರಣ ಸಿದ್ಧಾಂತ

ಮೂರನೇ ವಿಶ್ವರಾಷ್ಟ್ರಗಳ "ಬಡತನದ ವಿಷವೃತ್ತ" ಮತ್ತು ಹಿಂದುಳಿದಿರುವಿಕೆಗಳಿಂದ ಅವುಗಳನ್ನು ಹೊರ ತರುವುದು ಅಭಿವೃದ್ಧಿಹೊಂದಿದ ಪಶ್ಚಿಮರಾಷ್ಟ್ರಗಳಿಂದ ಅಭಿವೃದ್ಧಿಗೆ ಅಗತ್ಯವಾದ ಬಂಡವಾಳ, ತಂತ್ರಜ್ಞಾನ, ರಚನೆಗಳು ಮತ್ತು ಸಂಸ್ಕೃತಿಯನ್ನು ಪ್ರಸರಣ ಅಂದರೆ ತಂದು ಒದಗಿಸಿದಾಗ ಮಾತ್ರ ಸಾಧ್ಯವೆಂಬುದು ಈ ಪ್ರಸರಣ ಸಿದ್ಧಾಂತದ ವಾದ. ಎಡಾರೀ ಎಂಬ ಅರ್ಥ ಶಾಸ್ತ್ರಜ್ಞರು ಈ ವಾದವನ್ನು ಪ್ರತಿಪಾದಿಸಿದರು. ಮೂರನೇ ವಿಶ್ವರಾಷ್ಟ್ರಗಳಲ್ಲಿ ನಡೆಯುತ್ತಿರುವ ಅಭಿವೃದ್ಧಿಯು ಸ್ವಲ್ಪ ಮಟ್ಟಿಗೆ ಈ ಪ್ರಸರಣದಿಂದಲೇ ಆಗುತ್ತಿದೆ. ಆದರೆ, ವಸಾಹತುಶಾಹಿ- ನಂತರದ ಕಾಲದಲ್ಲೂ ಪಶ್ಚಿಮದವರ ಮೇಲೆ ಅವಲಂಬನೆಯನ್ನು ಹೆಚ್ಚಿಸುವ ಈ ಪ್ರಸರಣ (ಅಭಿವೃದ್ಧಿ) ಸಿದ್ಧಾಂತವು ಮೂರನೇ ವಿಶ್ವರಾಷ್ಟ್ರಗಳಿಗೆ ಅಪಾಯಕಾರಿಯಾಗಿದೆ.

## V) ಪರಾವಲಂಬನಾ ಸಿದ್ಧಾಂತ

ಈ ಪರಾವಲಂಬನಾ ಸಿದ್ಧಾಂತವು ಮೇಲಿನ ಪ್ರಸರಣ ಸಿದ್ಧಾಂತದ ಹಾಗೂ ಪಾಶ್ಚಿಮಾತೀಕರಣ ಮಾದರೀ ವಿರುದ್ಧ ಮೂಡಿಬಂದ ಸಿದ್ಧಾಂತವಾಗಿದೆ. ಗುಂಡರ್ ಫ್ರಾಂಕ್ ಎಂಬುವರು ಇದರ ಹೆಸರಾಂತ ಪ್ರತಿಪಾದಕರು.

ಈ ಪರಾವಲಂಬನಾ ಸಿದ್ಧಾಂತದ ಪ್ರಕಾರ ಪಾಶ್ಚಿಮಾತೀಕರಣ ಅಥವಾ ಅಭಿವೃದ್ಧಿ ಪ್ರಸರಣದ ಪರಿಣಾಮವಾಗಿ ಮೂರನೇ ವಿಶ್ವರಾಷ್ಟ್ರಗಳಿಗೆ ಸ್ವತಂತ್ರದ ನಂತರವೂ "ವಸಾಹತು" ಪರಿಸ್ಥಿತಿಯು ಇನ್ನೊಂದು ರೂಪದಲ್ಲಿ ಮುಂದುವರಿದಂತಾಗುತ್ತದೆ. ವಸಾಹತುಶಾಹಿ ಕಾಲದಲ್ಲಿ ನೇರವಾಗಿದ್ದ ಪಶ್ಚಿಮರಾಷ್ಟ್ರಗಳೊಡನೆಯ ನೇರ ಸಂಬಂಧ ಈಗ ಪರೋಕ್ಷವಾಗುತ್ತದೆ. ಆದರೂ ಆರ್ಥಿಕ ಮತ್ತು ಸಂಸ್ಕೃತಿಕ ಹಿಡಿತ ಮತ್ತು ಸುಲಿಗೆಗಳು ಮುಂದುವರೆದಂತಾಗುತ್ತದೆ. ಇದನ್ನು "ನವ-ವಸಾಹತುಶಾಹಿ (ನಿಯೋಕಾಲೂನಿಯಲಿಸಂ) ಎಂದು ಕರೆಯಬಹುದಾಗಿದೆ. ಈ ತರಹದ ಮೂರನೇಯ ವಿಶ್ವರಾಷ್ಟ್ರಗಳ ಅಭಿವೃದ್ಧಿಯು ಪರವಾಲಂಬಿತ ಅಭಿವೃದ್ಧಿಯಾಗುತ್ತದೆ. ಗುಂಡರ್ ಫ್ರಾಂಕ್‌ರವರು ಇದನ್ನು ಅಭಿವೃದ್ಧಿ ಬದಲು "ಅನಭಿವೃದ್ಧಿಯ ಅಭಿವೃದ್ಧಿ" ("ಡೆವೆಲಪ್‌ಮೆಂಟ್ ಆಫ್ ಅಂಡ್‌ರ್ ಡೆವೆಲಪ್‌ಮೆಂಟ್") ಎಂದು ಕರೆದರು.

ಈ ಪರಾವಲಂಬನಾ ಸಿದ್ಧಾಂತವು ಒಂದು ವಿಶಿಷ್ಟ ಸಕಾರಾತ್ಮಕ ಅಭಿವೃದ್ಧಿಯ ಸಿದ್ಧಾಂತವಾಗಿರುವುದಕ್ಕಿಂತ ಒಂದು ನಕಾರಾತ್ಮಕ ಸಿದ್ಧಾಂತವಾಗಿದೆ ಎನ್ನಬಹುದು. ಇದರ ಮುಖ್ಯ ಮೌಲ್ಯವೆಂದರೆ, ಮೂರನೇ ವಿಶ್ವರಾಷ್ಟ್ರಗಳಿಗೆ ಇದು ನೀಡಿದ ಸಕಾಲಿಕ ಎಚ್ಚರಿಕೆಯಾಗಿದೆ. ಆದರೂ ಈಗಿನ ಅಂತರ ರಾಷ್ಟ್ರೀಯ ಸಂಬಂಧಗಳ ಸ್ಥಿತಿಯಲ್ಲಿ ಅಭಿವೃದ್ಧಿಯನ್ನಾಗಲೀ ಅಥವಾ ಪರಸ್ಪರಾವಲಂಬನೆಯನ್ನಾಗಲೀ ಕೈಬಿಡುವಂತಿಲ್ಲ. ಈಗಿನ ಅಂತರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯಲ್ಲಿ ಅನೇಕ ಅಸಮಾನತೆಗಳು ಮತ್ತು ಅನ್ಯಾಯಗಳೂ ಇಲ್ಲದಿಲ್ಲ. ಆದ್ದರಿಂದಲೇ ಹೊಸ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಸ್ಥಾಪನೆಯಾಗಬೇಕೆಂಬ ಆಸೆ ಆಕಾಂಕ್ಷೆಗಳು ಸ್ವಾಭಾವಿಕವಾಗಿ ಮೂಡಿಬಂದಿದೆ.

## Vi) ನವ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಮಾರ್ಗ

ಮೂರನೇ ವಿಶ್ವರಾಷ್ಟ್ರಗಳ ಅಭಿವೃದ್ಧಿಯು ಅಂತರರಾಷ್ಟ್ರೀಯ ಸಂದರ್ಭದಲ್ಲಿ ನಡೆಯುತ್ತಿವೆ. ಇವುಗಳ ಅಭಿವೃದ್ಧಿಯಲ್ಲಿ ವಿದೇಶೀ ನೆರವು ಮತ್ತು ವಿದೇಶಿ ವ್ಯಾಪಾರದ ಪಾತ್ರ ಗಹನವಾಗಿದೆ. ಈ ಉದ್ದೇಶಕ್ಕಾಗಿ ಅನೇಕ ಅಂತರರಾಷ್ಟ್ರೀಯ ಆರ್ಥಿಕ ವಿನಿಮಯ ಮತ್ತು ಸಹಕಾರ ಕಾರ್ಯಕ್ರಮಗಳು ಮತ್ತು ಒಪ್ಪಂದಗಳೂ ಜಾರಿಗೆ ಬಂದಿವೆ. ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ (ಐ.ಎಂ.ಎಫ್), ವಿಶ್ವಬ್ಯಾಂಕ್, ವಿಶ್ವಸಂಸ್ಥೆಯ ವ್ಯಾಪಾರ ಮತ್ತು ಅಭಿವೃದ್ಧಿ ಸಮ್ಮೇಳನ ವಿಶ್ವಸಂಸ್ಥೆಯ

ಅಭಿವೃದ್ಧಿ ಕಾರ್ಯಕ್ರಮ, ವಿಶ್ವವ್ಯಾಪಾರ ಸಂಸ್ಥೆ ಮುಂತಾದ ಅನೇಕ ಸಾಮೂಹಿಕ ಅಂತರರಾಷ್ಟ್ರೀಯ ಸಂಸ್ಥೆಗಳೂ ಬೆಳೆದಿವೆ. ಅನೇಕ ಪ್ರಾದೇಶಿಕ ಅಂತರಾಷ್ಟ್ರೀಯ ಒಪ್ಪಂದ ಮತ್ತು ಸಂಸ್ಥೆಗಳೂ ಜಾರಿಯಲ್ಲಿವೆ.

ಆದರೆ ಈಗಿನ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆ ಬಲಿಷ್ಠ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಹಿತ ಮತ್ತು ಹಿಡಿತದಲ್ಲಿ ನಡೆಯುತ್ತದೆ. ಮೂರನೇ ವಿಶ್ವರಾಷ್ಟ್ರಗಳು ಅಂತರರಾಷ್ಟ್ರೀಯ ಸಾಲದ ಹೊರೆ ಹಾಗೂ ಬಲಿಷ್ಠ ರಾಷ್ಟ್ರಗಳ ಬಹುರಾಷ್ಟ್ರೀಯ ಕಂಪನಿಗಳ (ಎಂ.ಎನ್.ಸೀ) ಮತ್ತು ಸರ್ಕಾರಗಳಿಂದಾಗುವ ಸುಲಿಗೆ ಮುಂತಾದ ಸಮಸ್ಯೆಗಳಿಂದ ಪೀಡಿತವಾಗಿವೆ.

ಈ ಹಿನ್ನೆಲೆಯಲ್ಲಿ ಹೆಚ್ಚು ನೀತಿ ಮತ್ತು ನ್ಯಾಯಯುತವಾದ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆ ಆಸೆ, ಆಕಾಂಕ್ಷೆ ಮತ್ತು ಬೇಡಿಕೆಗಳು ಕಂಡುಬಂದಿದೆ. "ಹೊಸ ಅಂತರರಾಷ್ಟ್ರಿಯ ಆರ್ಥಿಕ ವ್ಯವಸ್ಥೆ" (ನ್ಯೂ ಇಂಟರ್ ನಾಷನಲ್ ಎಕನಾಮಿಕ್ ಆರ್ಡರ್)ಗೆ ವಿಶ್ವ ಸಂಸ್ಥೆಯ ಕರೆ, ಬ್ರಾಂಟ್ ಕಮಿಷನ್ ವರದಿ, ಜ್ಹಾನ್ ಟಂಬರ್‌ಜೆನ್ ರವರ "ಅಂತರರಾಷ್ಟ್ರೀಯ ವ್ಯವಸ್ಥೆಯ ಪುನಃರೂಪ"ಕ್ಕೆ ಕರೆ ಹಾಗೂ ಮೆಂಡ್ಲೊವಿಟ್ಸೆ ಸಾಲ್, ಇ.ಎಫ್.ಶೂಮೇಕರ್, ರಜನೀಕೊಠಾರಿ ಮುಂತಾದವರ ಬರವಣಿಗಳಲ್ಲಿ ಇವು ವಿವರವಾಗಿದೆ, ಕೆಲವರು ಇದನ್ನು "ಓಂ" (WOM ವರ್ಲ್ಡ್ ಆರ್ಡರ್ ಮೂವ್‌ಮೆಂಟ್ ಎಂದು ಕರೆದಿದ್ದಾರೆ. ಈ ಆಸೆ ಆಕಾಂಕ್ಷೆ ಮತ್ತು ಬೇಡಿಕೆಗಳು 1970ರ ದಶಕದಿಂದಲೇ ಹೆಚ್ಚುತ್ತಿದ್ದರೂ ಈ ದಿಕ್ಕಿನಲ್ಲಿನ ಅರ್ಥಪೂರ್ಣ ಹೆಜ್ಜೆಗಳನ್ನು ಇನ್ನೂ ಇಡಬೇಕಾಗಿದೆ.

ಆ) ಮನಃಶಾಸ್ತ್ರೀಯ ಸಿದ್ಧಾಂತ

ಮೇಲಿನ ಆರ್ಥಿಕ ಬೆಳವಣಿಗೆಯ ಸಿದ್ಧಾಂತಗಳಲ್ಲದೆ ಅಭಿವೃದ್ಧಿಯ ಬಗ್ಗೆ ಕೆಲವರು ಮನಃಶಾಸ್ತ್ರೀಯ ಸಿದ್ಧಾಂತವನ್ನು ಮುಂದಿಟ್ಟಿದ್ದಾರೆ. ಇದರ ಪ್ರಕಾರ ಅಭಿವೃದ್ಧಿಯಾಗಲು ಎಲ್ಲದಕ್ಕಿಂತ ಕೆಲವು ಸೂಕ್ತ ಮಾನಸಿಕ ಸ್ಥಿತಿಗಳು ಅಥವಾ ಗುಣಗಳು ಅವಶ್ಯಕವೆನ್ನಲಾಗಿದೆ. ಡೇವಿಡ್ ಮ್ಯಾಕ್ ಲ್ಯಾಂಡ್, ಎವರೆಟ್ ಹ್ಯಾಜೆನ್, ಕುಂಕೆಲ್, ಇಂಕೆಲ್ಸ್ ಮತ್ತು ಸ್ಮಿತ್‌ರವರು ಇದನ್ನು ಪ್ರತಿಪಾದಿಸುತ್ತಾರೆ.

ಇವರ ಪ್ರಕಾರ ಅಭಿವೃದ್ಧಿಗೆ ಸೂಕ್ತವಾದ ವೈಯಕ್ತಿಕ ಹಾಗೂ ಸಾಮಾಜಿಕ ಮನಃಶಾಸ್ತ್ರೀಯ ಸ್ಥಿತಿಗಳು ಬಹಳ ಅವಶ್ಯಕವಾಗಿರುತ್ತವೆ. ಅಭಿವೃದ್ಧಿಯನ್ನು ಘೋಷಿಸಲು ಸಾಧನಾ ಮನೋಭಾವ, ಕಷ್ಟ-ನಷ್ಟಗಳನ್ನೆದುರಿಸುವ ಧೈರ್ಯ, ಹೊಂದಿಕೊಳ್ಳುವಿಕೆ, ಹೊಸತನಾಕಾಂಕ್ಷಿ ಮುಂತಾದ ವೈಯುಕ್ತಿಕ ಮಾನಸಿಕ ಗುಣಗಳು ಅತ್ಯವಶ್ಯಕವೆನ್ನಲಾಗಿದೆ. ಹಾಗೆಯೇ ಆಧುನಿಕ ಮಾನವ ಮತ್ತು ಆಧುನಿಕ ಸಂಸ್ಥೆವುಳ್ಳ ಸಾಮಾಜಿಕ ಮನೋಭಾವವೂ ಅವಶ್ಯಕವೆನ್ನುತ್ತಾರೆ.

ಅಭಿವೃದ್ಧಿ ಪ್ರಕ್ರಿಯೆಯ ಬಹಳ ವಿಶಾಲ ಮತ್ತು ಸಂಕೀರ್ಣವಾದ ಒಂದು ಪ್ರಕ್ರಿಯೆಯಾಗಿದೆ. ಅದಕ್ಕೆ ಅವಶ್ಯಕವಾದ ಅಂಶಗಳು, ಗುಣಗಳು ಮತ್ತು ಸ್ಥಿತಿಗಳು ಅನೇಕವಿದೆ. ಮೇಲಿನ ಸಿದ್ಧಾಂತಗಳು, ಒಟ್ಟಾರೆಯಾಗಿ ಇವುಗಳ ಗಮನ ಸೆಳೆದಿದೆ.

ಟೀಕೆಗಳು

ಈ ಮೇಲಿನ ತರಹದ ಪಶ್ಚಿಮಾತ್ಯ ಅಭಿವೃದ್ಧಿ ಸಿದ್ಧಾಂತಗಳು 1950 ಮತ್ತು 1960 ದಶಕಗಳಲ್ಲಿ ಪ್ರಬಲವಾಗಿದ್ದವು. 1970ರಿಂದೀಚೆಗೆ ಅವುಗಳ ಬಗ್ಗೆ ಅಸಮಾಧಾನಗಳು ಮತ್ತು ಟೀಕೆಗಳು ಹೆಚ್ಚಿದೆ. ಇವುಗಳಲ್ಲಿ ಎರಡು ಪ್ರಮುಖವಾಗಿದೆ.

ಮೊದಲನೆಯದಾಗಿ, ಈ ಪಾಶ್ಚಿಮಾತ್ಯ ಅಭಿವೃದ್ಧಿ ಮಾದರಿಯಿಂದಾದ ಅಭಿವೃದ್ಧಿಯು ನೀತಿನ್ಯಾಯಗಳಿಂದ ದೂರವಿದೆ. ಇದರಲ್ಲಿ ಮಾನವೀಯತೆಯಾಗಲೀ ಅಥವಾ ಪರಿಪೂರ್ಣತೆಯಾಗಲೀ ಇಲ್ಲ. ಇದು ಸಮದರ್ಶಕ ಅಭಿವೃದ್ಧಿ ಮಾರ್ಗವಲ್ಲ (ಏಡ್ಲ್ ಮ್ಯಾನ್, ಮಾರಿಸ್ ಮತ್ತು ಚಿನೇರಿ). ಇದು ಅಸಮಾನತೆಯನ್ನು ಹೆಚ್ಚಿಸಿದೆ. ಇದು ಲೆಕ್ಕ ಹಾಕುವ ತಲಾವಾರು ಆದಾಯದಲ್ಲಿನ ಹೆಚ್ಚಳವು ಬರೀ ಸಂಖ್ಯಾಶಾಸ್ತ್ರೀಯ ಸತ್ಯವೇ ಹೊರತು ವಾಸ್ತವ ಆದಾಯದ ಹೆಚ್ಚಳವಲ್ಲವೆನ್ನಲಾಗದೆ. ಆದರೆ ಬೆಳವಣಿಗೆಯ ಅರ್ಥಶಾಸ್ತ್ರಜ್ಞರು ಇದನ್ನು ಅಳೆಗಳೆಯುವುದಿಲ್ಲ. ಬದಲಿಗೆ ಇದು ಅರಂಭದ ಅನಿವಾರ್ಯ ಹಾಗೂ ತಾತ್ಕಾಲಿಕವೆಂಬುದು ಅವರ ನಿಲುವು. (ಮಿರ್ಡ್‌ಲ್, ಕಾಲ್ಡರ್, ಕುಜನೆಟ್ಸ್ ಮತ್ತು ಲೆವಿಸ್).

ಎರಡನೇ ಮಹಾ ಟೀಕೆ ಏನೆಂದರೆ, ಈ ಮಾದರಿಯ ಅಭಿವೃದ್ಧಿಯು ಪರಿಸರ ವಿನಾಶವಮಾಡುತ್ತಿದೆ. ಪ್ರಕೃತಿಯ ಸಂಪನ್ಮೂಲಗಳನ್ನು ನಿರಂತರ ಬಳಕೆ ಮತ್ತು ಶೋಷಣೆ ಗಳಿಂದ ಪರಿಸರ ವಿನಾಶ, ಪರಿಸರ ಮಾಲಿನ್ಯ ಹಾಗೂ ಹವಾಮಾನ ಬದಲಾವಣೆಗಳಂಹತಃ ವಿನಶಾಕಾರಿ ಬೆಳವಣಿಗೆಗಳು ಕಂಡುಬಂದಿವೆ. ಇದರಿಮದ ಮುಂದಿನ ಪೀಳಿಗೆ ಅಭಿವೃದ್ಧಿಯಿಂದ ವಂಚಿತವಾಗುವುದಷ್ಟೇ ಅಲ್ಲದೆ ಉಳಿಯುವುದೂ ಕಷ್ಟವಾಗುತ್ತದೆ ಎಂಬ ಟೀಕೆ ಇದಾಗಿದೆ. (ರೋಮ್ ಕ್ಲಬ್ ರವರ ಲಿಮಿಟ್ಸ್ ಟು ಗ್ರೋತ್ ವರದಿ ಹಾಗೂ ವಿಶ್ವ ಅಭಿವೃದ್ಧಿ ವರದಿ 1992 : ಅಭಿವೃದ್ಧಿ ಮತ್ತು ಪರಿಸರ)

### 3.3.3. ಸ್ವಾಯತ್ತ ಅಥವಾ ಬದಲೀ ಅಭಿವೃದ್ಧಿ ಮಾದರಿಗಳು

ಪಾಶ್ಚಿಮಾತ್ಯ ಅಭಿವೃದ್ಧಿ ಮಾದರಿಗಳ ಮೇಲಿನ ಅಸಮಾಧಾನ ಮತ್ತು ಟೀಕೆಗಳಿಂದಾಗಿ ಕೆಲವು ಚಿಂತಕರು "ಸ್ವಾಯತ್ತ" ಅಥವಾ "ಬದಲೀ ಅಭಿವೃದ್ಧಿ ಮಾದರಿ"ಗಳ ಮೊರೆಹೋಗಿದ್ದಾರೆ. ಇನಾಯತ್ ಉಲ್ಲಾ ಎಂಬ ಏಷ್ಯಾ ಖಂಡದ ಒಬ್ಬ ಪರಿಣಿತರ "ಅಮದು" ಮಾಡಿಕೊಂಡ ಅಭಿವೃದ್ಧಿ ಮಾದರಿಗಳ ಬದಲು ಸ್ಥಳೀಯ ಪರಿಸ್ಥಿತಿಗಳಿಗೆ ಸೂಕ್ತವಾದ ರಾಷ್ಟ್ರೀಯ ಮಾದರಿಗಳನ್ನು ಅನುಸರಿಸಬೇಕೆಂದರು. ಚೀನಾ, ಯುಗೋಸ್ಲೊವಿಯಾ ಮತ್ತು ಟಾನ್‌ಜಾನಿಯ ರಾಷ್ಟ್ರಗಳಲ್ಲಿ ಇಂತಃ ಕೆಲವು ಪ್ರಯೋಗಗಳು ನಡೆದವು. ಆದರೆ ಇಂತಃ ಬದಲೀ ಪ್ರಯೋಗಗಳು ಹೆಚ್ಚಿಲ್ಲ. ಭಾರತದ "ಗಾಂಧೀ-ಮಾದರಿ" ಅಭಿವೃದ್ಧಿಯದೂ ಇಂತಹದೊಂದು ಕನಸು. ಅದರೆ ಇವುಗಳ "ಸ್ವಾಯತ್ತ" ಪ್ರಯೋಗಕ್ಕೆ ಇಂದು ಅವಕಾಶ ಕಡಿಮೆ. ಇವುಗಳ ಬಿಡಿ ಬಿಡಿ ಅಥವಾ ಭಾಗಶಃ ಪ್ರಯೋಗಗಳೂ ಮಾತ್ರ ನಡೆದಿದೆ. ಇಂದಿನ ಅಂತರರಾಷ್ಟ್ರೀಯ ಪರಿಸ್ಥಿತಿ ಮತ್ತು ರಾಷ್ಟ್ರೀಯ ಆಂತರಿಕ ಒತ್ತಡಗಳ ನಡುವೆ ಈ "ಬದಲೀ" ಮಾದರಿಗಳ ಪ್ರಯೋಗಕ್ಕೆ ಇತಿಮಿತಿ ಇದೆ. ಆದರೆ ಈ "ಬದಲಿ" ಕನಸುಗಳು ಮತ್ತು ಸಲಹೆಗಳಿಂದಾಗಿ ಮಾನವನ ಅಭಿವೃದ್ಧಿ ಪಥದ ಮೇಲೆ ಸಕಾರಾತ್ಮಕ ಬೆಳಕು ಬಿದ್ದು ಕೆಲವು ಸುಧಾರಣೆಗಳು ನಿಧಾನವಾಗಿಯಾಗಿಯಾದರೂ ಆಗುತ್ತಾ ಇವೆ. ಸಮಕಾಲೀನ ಅಭಿವೃದ್ಧಿ ಚಿಂತನೆಗಳು ಈ ಬದಲೀ ಮಾದರಿಗಳ ಪ್ರಭಾವ ಹೊಂದಿ ರೂಪುಗೊಳ್ಳುತ್ತಿವೆ.

### 3.3.4 ಅಭಿವೃದ್ಧಿಯ ಬಗೆಗಿನ ಸಮಕಾಲೀನ ಸಿದ್ಧಾಂತಗಳು ಅಥವಾ ಮಾರ್ಗಗಳು

ಅಭಿವೃದ್ಧಿಯ ಸಮಕಾಲೀನ ಸಿದ್ಧಾಂತಗಳು ಅಭಿವೃದ್ಧಿಗೆ ಹೆಚ್ಚು ಪ್ರಸ್ತುತವಾಗಿದೆ. ಇವುಗಳು ಹೆಚ್ಚು ಜನಪ್ರಿಯವೂ ಆಗಿವೆ. ಅಭಿವೃದ್ಧಿಯ ಅರಿವಿಗೆ ಇವು ಕಳಶಪ್ರಾಯವಾಗಿಯೂ ಇವೆ.

1950 ಮತ್ತು 1960ರ ದಶಕಗಳಲ್ಲಿ ಪ್ರಬಲವಾಗಿದ್ದ ಮುಂಚಿನ ಸಿದ್ಧಾಂತಗಳು ಆರ್ಥಿಕ ಬೆಳವಣಿಗೆಯ ಕೇಂದ್ರೀಕೃತವಾಗಿದ್ದವು. ರಾಷ್ಟ್ರೀಯ ಒಟ್ಟಾರೆ ಉತ್ಪಾದನೆ, ತಲಾವಾರು ಆದಾಯಗಳನ್ನು ಕೈಗಾರಿಕರಣ ಮತ್ತು ನಗರಿಕರಣ ನೀತಿಗಳಿಂದ ಹೆಚ್ಚಿಸುವ ಗುರಿ ಇವುಗಳದಾಗಿತ್ತು. ಈ ಮೊದಲಿನ ಸಿದ್ಧಾಂತಗಳ ಬಗ್ಗೆ ಮುಖ್ಯವಾಗಿ ಮೂರು ಟೀಕೆಗಳಿದ್ದವು : (1) ಇವುಗಳಿಂದ ಪರಿಸರ ವಿನಾಶವಾಗುತ್ತದೆ. (2) ಇವುಗಳು ತರುವ ಅಭಿವೃದ್ಧಿಯು ಸಮದರ್ಶತ್ವದಿಂದ ಕೂಡಿಲ್ಲ. ಮತ್ತು (3) ಆರ್ಥಿಕ ಬೆಳವಣಿಗೆಯು ಅಭಿವೃದ್ಧಿ ಎಂಬ ಸಂಕುಚಿತದೃಷ್ಟಿ ಇವುಗಳದಾಗಿದೆ.

ಸಮಕಾಲೀನ ಸಿದ್ಧಾಂತಗಳು ಈ ಮೇಲಿನ ಟೀಕೆಗಳಿಗೆ ಉತ್ತರ ಒದಗಿಸುವ ಪ್ರಯತ್ನವಾಗಿವೆ. ಇವುಗಳು ಅನೇಕವಿದೆ. ಇವುಗಳನ್ನು, ನಾವು ಇಲ್ಲಿ ಕೆಳಕಂಡಂತೆ ವರ್ಗೀಕರಿಸಿ ಪರಿಚಯ ಮಾಡಿಕೊಳ್ಳುತ್ತೇವೆ : (1) ಉಳಿಸಿ-ಬೆಳೆಸುವ ಅಭಿವೃದ್ಧಿ ಮಾರ್ಗ, (2) ಸಮದರ್ಶತ್ವದ ಅಭಿವೃದ್ಧಿ ಮಾರ್ಗ ಮತ್ತು 3) ಅಮಾರ್ತ್ಯ ಸೇನ್‌ರ ಅಭಿವೃದ್ಧಿ ಸಿದ್ಧಾಂತ ಇವುಗಳ ಸಂಕ್ಷಿಪ್ತ ಪರಿಚಯ ನಮ್ಮ ಕೆಳಗಿನ ಗುರಿ.

## 1. ಉಳಿಸಿ-ಬೆಳೆಸುವ ಅಭಿವೃದ್ಧಿ ಮಾರ್ಗ (ಸೆಸ್ಟೈನಬಲ್ ಡೆವಲಪ್‌ಮೆಂಟ್ ಅಪ್ರೋಚ್)

ನಿರಂತರವಾದ ಆರ್ಥಿಕ ಬೆಳವಣಿಗೆ ಕಾಲಕ್ರಮೇಣ ಮಾನವನ ಆರ್ಥಿಕ ವ್ಯವಸ್ಥೆ ಮತ್ತು ಸಮಾಜದೆರಡರ ಅಸ್ತಿತ್ವಕ್ಕೂ ಅಪಾಯ ತರುತ್ತದೆ. ಪ್ರಾಕೃತಿಕ ಸಂಪನ್ಮೂಲಗಳನ್ನು ಈಗಾಲೇ ಹೆಚ್ಚು ಬಳಸುವುದರಿಂದ ಮುಂದಿನ ಬೆಳವಣಿಗೆಗೆ ಅವು ಇಲ್ಲವಾಗುತ್ತದೆ. ಏರು ಮುಖವಾದ ಉತ್ಪಾದನೆ ಮತ್ತು ಉಪಭೋಗಗಳಿಂದ ಪರಿಸರದ ಮಾಲಿನ್ಯ ಮತ್ತು ಪರಿಸರ ವಿನಾಶವಾಗುತ್ತದೆ. ಇದು ಮುಂದಿನ ಪೀಳಿಗೆಯ ಬೆಳವಣಿಗೆಯ ಹಕ್ಕಿನಲ್ಲದೇ ಬದುಕು ಉಳಿಯುದ್ದಕೆಗೂ ಧಕ್ಕೆ ತರುತ್ತದೆ.

ಉಳಿಸಿ-ಬೆಳೆಸುವ ಅಭಿವೃದ್ಧಿ ಮಾರ್ಗವು ಆರ್ಥಿಕ ಬೆಳವಣಿಗೆ ಮತ್ತು ಪರಿಸರ ರಕ್ಷಣೆಗಳೆರಡರನ್ನು ನಡುವೆ ಸಮತೋಲನೆ ತರುವ ಮಾರ್ಗವಾಗಿದೆ. ವಿಶ್ವ ಅಭಿವೃದ್ಧಿ ಮತ್ತು ಪರಿಸರ ಅಯೋಗ (1987) ಈ ಉಳಿಸಿ-ಬೆಳೆಸುವ ಅಭಿವೃದ್ಧಿ ಮಾರ್ಗವನ್ನು ಜನಪ್ರಿಯಗೊಳಿಸಿತು. ಉಳಿಸಿ-ಬೆಳೆಸುವ ಅಭಿವೃದ್ಧಿಯನ್ನು ಈ ಆಯೋಗ "ಮುಂದಿನ ಪೀಳಿಗೆಯ ಅಭಿವೃದ್ಧಿ ಅಗತ್ಯಗಳನ್ನು ಮೊಟಕುಗೊಳಿಸುವ ಇಂದಿನ ಪೀಳಿಗೆಯ ಅಭಿವೃದ್ಧಿ ಅವಶ್ಯಕತೆಗಳನ್ನು ಪೂರೈಸುವ ಅಭಿವೃದ್ಧಿ" ಎಂದು ಬಣ್ಣಿಸಿತು. ಮಾನವಪರಿಸರ, ಮುಂದಿನ ಪೀಳಿಗೆಯ ಅಭಿವೃದ್ಧಿ ಹಕ್ಕು ಹಾಗೂ ಭೂಮಿಯ ಮೇಲಿನ ಮಾನವ ಜೀವನದ ಒಟ್ಟಾರೆ ಗುಣಮಟ್ಟವನ್ನು ಕಾಪಾಡುವುದು ಇದರ ಗುರಿಗಳಾಗಿವೆ.

ಈ ಗುರಿಗಳನ್ನು ಸಾಧಿಸಲು ಉಳಿಸಿ-ಬೆಳೆಸುವ ಅಭಿವೃದ್ಧಿ ಮಾರ್ಗವು ಪರಿಸರ ರಕ್ಷಿಸುವ ಹೊಸ ನೀತಿ ಮತ್ತು ಕ್ರಮಗಳನ್ನು ಶಿಫಾರ್ಸುಮಾಡುತ್ತದೆ. ಪರಿಸರದ ಬಗ್ಗೆ "ಪ್ರಾಕೃತಿಕ ಬಂಡವಾಳ", "ಪರಿಸರ ಲೆಕ್ಕಾಚಾರ", "ಪರಿಸರ ಅನುಮತಿ" "ಸಾರ್ವಜನಿಕ ಆಸ್ತಿ ಸಂಪನ್ಮೂಲಗಳು ಹಾಗೂ ಅವುಗಳ ದುರಂತ" ಮತ್ತು "ಪರಿಸರವು ಒಂದು ಜಾಗತಿಕ ಸಾರ್ವಜನಿಕ ಆಸ್ತಿ" ಎಂಬ ಪರಿಕಲ್ಪನೆ ಮತ್ತು ಪಙ್ಗಳನ್ನು ಮುಂದಿಟ್ಟಿದೆ.

ಇದನ್ನು ಅನುಸರಿಸಿ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದ ಪರಿಸರ ರಕ್ಷಣೆ ಪ್ರಯತ್ನಗಳು ಇತ್ತೀಚೆಗೆ ಹೆಚ್ಚು ಹೆಚ್ಚಾಗಿ ಬೆಳೆಯುತ್ತಿದೆ. ಅಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವ ಅಂತರ ರಾಷ್ಟ್ರೀಯ ಸಂಸ್ಥೆಗಳಾದ ವಿಶ್ವಬ್ಯಾಂಕ್, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ, ವಿಶ್ವ ವ್ಯಾಪಾರ ಸಂಸ್ಥೆ, ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ಹಾಗೂ ವಿಶ್ವಸಂಸ್ಥೆ ಮುಂತಾದ ಸಂಸ್ಥೆಗಳು ಈ ನಿಟ್ಟಿನಲ್ಲಿ ಕೆಲಸಮಾಡುತ್ತಿವೆ. ಈ ಪ್ರಯತ್ನಗಳಿಂದ ಹೊರಬಂದಿರುವ ವಿಶ್ವಸಂಸ್ಥೆಯ ವರದಿಗಳಾದಂತಹ: "ವಿಶ್ವ ಸಂರಕ್ಷಣಾ ತಂತ್ರ", "ನಮ್ಮ ಸಾಮಾನ್ಯ ಭವಿಷ್ಯ" ಮುಂತಾದ ವರದಿಗಳು ಹಾಗೂ "ರೆಯೋ ಅರ್ಡ್ ಸುಮಿಟ್" ಎಂಬ ಅಭಿವೃದ್ಧಿ ಮತ್ತು ಪರಿಸರದ ಬಗೆಗಿನ 1992ರಲ್ಲಿವಿಶ್ವ ಸಂಸ್ಥೆ ನಡೆಸಿದೆ ಸಮ್ಮೇಳನ ಮತ್ತು ಜಪಾನಿನ ಕ್ಯೋಟೋದಲ್ಲಿ ನಡೆದ "ಹವಾಮಾನ ಬದಲಾವಣೆ" ಕುರಿತ 1997 ರಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನಗಳ ಕೊಡುಗೆ ಪರಿಸರ ರಕ್ಷಣೆಗೆ ಪ್ರೋತ್ಸಾಹದಾಯಕವಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರೀಯ ಸರ್ಕಾರಗಳು, ಉದಾಹರಣೆಗೆ ಭಾರತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಕೈಗೆತ್ತುಕೊಂಡಿರುವ ಪರಿಸರ ರಕ್ಷಣಾ ನೀತಿಗಳು, ಕಾನೂನುಗಳು ಮತ್ತು ಕ್ರಮಗಳಿಗೂ ಹಾಗೂ ಸ್ಥಾಪಿಸಿರುವ ಮಾಲಿನ್ಯ ನಿಯಂತ್ರಣ ಮಂಡಳಿಗಳು ಮತ್ತು ಇಲಾಖೆಗಳೂ ಕಂಡುಬಂದಿವೆ. ಹೀಗಿದ್ದರೂ, "ಲಾಭಂಶುಭಂ" ಎಂಬ ದುರಾಸೆಪೂರ್ಣ ಅರ್ಥಿಕ ವಹಿವಾಟು ಸಂದರ್ಭ ಮತ್ತು ಮಾನವ ಪರಿಸರ ರಕ್ಷಣೆಗಾಗಿ ಬಿಗಿಕ್ರಮಗಳನ್ನು ಜಾರಿಗೊಳಿಸಬಲ್ಲ ಅಂತರರಾಷ್ಟ್ರೀಯ ಸರ್ಕಾರದ ಕೊರತೆಯಿಂದಾಗಿ ಉಳಿಸಿ-ಬೆಳೆಸುವ ಮಾರ್ಗವನ್ನು ಅನುಸರಿಸುವುದೋ ಇನ್ನು ಸಾಕಷ್ಟು ಆಗುತ್ತಿಲ್ಲ. ಮಾನವ ಸಮುದಾಯವು ಟಿಕ್ ಟಿಕ್ ಎನ್ನುತ್ತಿರುವ "ಪರಿಸರ ಸಿಡಿತ" ಎಂಬುವ ಬಾಂಬಿನ ಮೇಲೆ ಕುಳಿತೇ ಇದೆ.

ಉಳಿಸಿ-ಬೆಳೆಸುವ ಅಭಿವೃದ್ಧಿ ಮಾರ್ಗದ ಸಫಲತೆಗೆ ಸಮದರ್ಶಿತ್ವ ಅಭಿವೃದ್ಧಿ ಮಾರ್ಗದ ಬೆಂಬಲ ಅನಿವಾರ್ಯವಾಗಿದೆ. ವಿಶ್ವದಲ್ಲಿ ಬಡ ಜನರ ಮತ್ತು ರಾಷ್ಟಗಳ ಸಂಖ್ಯೆ ಅಧಿಕವಾಗಿದ್ದು ಅವರ ಅಭಿವೃದ್ಧಿಯನ್ನು ಸಮದರ್ಶತ್ವ ಅಭಿವೃದ್ಧಿ ಮಾರ್ಗ ಮತ್ತು ಉಳಿಸಿ-ಬೆಳೆಸುವ ಅಭಿವೃದ್ಧಿ ಮಾರ್ಗಗಳ ಸಮನ್ವಯಗೊಳಿಸಿದೆ ಜಾರಿಯಿಂದ ಮಾತ್ರ ಮಾನವನ ಅಭಿವೃದ್ಧಿಯು ಪರಿಸರ ರಕ್ಷಣೆ ಮತ್ತು ನ್ಯಾಯಯುತ ಅಭಿವೃದ್ಧಿಗಳೆರಡನ್ನೂ ಸಾಧಿಸಲು ಸಾಧ್ಯವಾಗುತ್ತದೆ.

## 2. ಸಮದರ್ಶತ್ವದ ಅಭಿವೃದ್ಧಿ ಮಾರ್ಗ (ಈಕ್ವಿಟಬಲ್ ಡೆವೆಲಪ್‌ಮೆಂಟ್ ಅಪ್ರೋಚ್)

ಎರಡನೇ ಮಹಾಯುದ್ಧದ ನಂತರದ ರಾಷ್ಟ್ರಗಳ ಅಭಿವೃದ್ಧಿ ಪ್ರಯತ್ನಗಳು ಮೊದಲಿನಂತೆಯೇ ಸಾಮಾನ್ಯವಾಗಿ ಸಮದರ್ಶತ್ವದಿಂದ ವಂಚಿತವಾಗಿವೆ. ಅಭಿವೃದ್ಧಿಯು ಹಂಚಿಕೆ ಅಥವಾ ಅಭಿವೃದ್ಧಿಯು ಫಲಗಳ ಹಂಚಿಕೆಯಲ್ಲಿ ಅಂತರರಾಷ್ಟ್ರೀಯವಾಗಲೀ ಅಥವ ರಾಷ್ಟ್ರಗಳ ಒಳಗಾಗಲೀ ಸಮಾನತೆ ಮತ್ತು ನ್ಯಾಯಯುತ ವಿರತಣೆ ಆಗಿಲ್ಲ. ಆರ್ಥಿಕ ಬೆಳವಣಿಗೆಯ ಮೇಲೆ ಗಮನ ಕೇಂದ್ರೀಕರಿಸಿದ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಇದರ ಬಗ್ಗೆ ಕಾಳಜಿಯೇ ಇರಲಿಲ್ಲ. ಇದಕ್ಕೆ ಬದಲಾಗಿ, 1950ರ ದಶಕದಲ್ಲಿ ಅರ್ಥಶಾಸ್ತ್ರಜ್ಞರಾದ ಕಾಲ್ಡರ್, ಕುಜ್‌ನೆಟ್ಸ್ ಮತ್ತು ಲೆವಿಸ್ ಮುಂತಾದವರು ಅಭಿವೃದ್ಧಿಯ ಆರಂಭದ ಕೆಲವು ಕಾಲ ಅಸಮಾನತೆ ಅನಿವಾರ್ಯವೆಂಬ ಸಿದ್ಧಾಂತವನ್ನೇ ಪ್ರತಿಪಾದಿಸಿದ್ದರು. ಅಭಿವೃದ್ಧಿಯು ಮೊದಲು ಕೆಲವು ಕ್ಷೇತ್ರಗಳಲ್ಲಿ ಮತ್ತು ಕೆಲವರಿಗೇ ತಲುಪಿ ಅವರು ಮಾಡುವ ಉಳಿತಾಯ, ಬಂಡವಾಳ ಹೊಡಿಕೆ ಮತ್ತು ಉದ್ಯಮಗಳಿಂದಾಗಿ ಇತರರಿಗೆ ಹನಿ ಹನಿಯಾಗಿ ಮತ್ತು ನಿಧಾನವಾಗಿ ವಿತರಣೆಯಾಗುತ್ತದೆ ಎಂಬುದು ಅವರ ವಾದವಾಗಿತ್ತು. 1960ರ ದಶಕದಲ್ಲಿ ಮಿಲಿಕಾನ್ ರವರು ಮೂರನೇ ವಿಶ್ವ ರಾಷ್ಟ್ರಗಳಲ್ಲಿ ಅಭಿವೃದ್ಧಿಯ "ವಿತರಣೆಯಲ್ಲಿ ನ್ಯಾಯ" (ಡಿಸ್ಟ್ರಿಬ್ಯೂಟಿವ್ ಜಸ್ಟೀಸ್), ಮತ್ತು "ಸಾಮಾಜಿಕ ನ್ಯಾಯ" (ಸೋಷಿಯಲ್ ಜಸ್ಟೀಸ್) ಅಥವಾ ಸಮದರ್ಶತ್ವಗಳ ಅವಶ್ಯಕತೆಯನ್ನು ಗುರುತಿಸಿದರು. ಆದರೂ, ಬೆಳವಣಿಗೆ ಮತ್ತು ಸಮದರ್ಶಿತ್ವಗಳೆರಡರಲ್ಲಿ ಆದ್ಯತೆ ಬೆಳವಣಿಗೆಗೇ ಇರಬೇಕೆಂಬುದೂ ಅವರ ನಿಲುವಾಗಿತ್ತು.

1970ರ ದಶಕದಲ್ಲಿ ಅಭಿವೃದ್ಧಿ ವಿತರಣೆಯಲ್ಲಿನ ಅನ್ಯಾಯ ಮತ್ತು ಅಸಮಾನತೆಗಳ ಅಥವಾ ಸಮದರ್ಶತ್ವದ ಅಭಾವದ ಬಗ್ಗೆ ಸ್ಪಷ್ಟವಾದ ಅಸಮಾಧಾನ ಮತ್ತು ಕೂಗುಗಳು ಏಳಲಾರಂಭಿಸಿದವು. "ಪುನರ್ವಿತರಣೆಯುತ ಬೆಳವಣಿಗೆ", "ವಿತರಣೆಯಲ್ಲಿ ನ್ಯಾಯ" "ಸಾಮಾಜಿಕ ನ್ಯಾಯ" ಮುಂತಾದ ಪದಗಳು ಮತ್ತು ಪರಿಕಲ್ಪನೆಗಳು ಅಭಿವೃದ್ಧಿ ಚಿಂತನೆಯಲ್ಲಿ ಸ್ಪಷ್ಟವಾಗಿ ಸೇರಿದವು. ವಿಶ್ವಸಂಸ್ಥೆಯ ಯು.ಎನ್.ಡಿ.ಪಿ. (ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಪ್ರೊಗ್ರಾಮ್) ಎಂಬ ಸಂಸ್ಥೆಯಲ್ಲಿ ಕೆಲಸಮಾಡುತ್ತಿದ್ದ ಪಾಕಿಸ್ಥಾನದ ಅರ್ಥಶಾಸ್ತ್ರಜ್ಞರಾದ ಮಹಬೂಬು ಉಲ್ ಹಕ್‌ರವರು 1970ರದಲ್ಲಿ ಅಭಿವೃದ್ಧಿ ತಂತ್ರಗಳ ಬಗ್ಗೆ ಒಂದು 'ಟಿಪ್ಪಣಿ" (ನೋಟ್) ಬರೆದು ಅದರಲ್ಲಿ "ಆರ್ಥಿಕ ಬೆಳವಣಿಗೆಗೆ ವಿತರಣಾ ತಂತ್ರ"ವು ಸಾಧನವಾಗಬೇಕೆಂದೂ ಹಾಗು ಇದು "ಉದ್ಯೋಗಾವಕಾಶಗಳನ್ನು ಹೆಚ್ಚಿಸುವ "ಆಧಾರದ ಮೇಲೆ ನಡೆಯಬೇಕೆಂದು ಪ್ರತಿಪಾದಿಸಿದರು. ಇಂತಹ ಅಭಿವೃದ್ಧಿ ಸೂತ್ರವನ್ನು ತಂತ್ರದಿಂದ ಹೆಚ್ಚಿನವರು ಭಾಗವಹಿಸುವಿಕೆಯ ಅಭಿವೃದ್ಧಿ" (ಪಾರ್ಟಿಸಿಪೆಟೆವ್ ಡೆವಲಪ್‌ಮೆಂಟ್) ಮತ್ತು ಫಲಾನುಭವದಲ್ಲಿ ಎಲ್ಲರನ್ನೂ "ಒಳಗೊಂಡ ಅಭಿವೃದ್ಧಿ" (ಇನ್ ಕ್ಲೂಸಿವ್ ಡೆವಲಪ್‌ಮೆಂಟ್) ಸಾಧ್ಯವಾಗುತ್ತದೆ. ಇಂತಹಾ ಅಭಿವೃದ್ಧಿಯು ಹೆಚ್ಚು ನ್ಯಾಯಯುತ ಅಥವಾ ಸಮದರ್ಶಿತ್ವದ ಅಭಿವೃದ್ಧಿ ಆಗುವುದಷ್ಟೇ ಅಲ್ಲದೆ ಆರ್ಥಿಕ ಬೆಳವಣಿಗೆಯನ್ನು ದಕ್ಷವಾಗಿ ನಿರ್ವಹಿಸಿಲೂ ಸಹಾಯಕವಾಗುತ್ತದೆಂಬುದಾಗಿತ್ತು.

ಸಮದರ್ಶಿತ್ವದ ಅಭಿವೃದ್ಧಿಗಾಗಿ ಇದೇ ಕಾಲದಲ್ಲಿ ಬಿ.ಹೆಚ್.ಎನ್ (ಬೇಸಿಕ್ ಹ್ಯೂಮನ್ ನೀಡ್ಸ್) ಅಂದರೆ, "ಮೂಲಭೂತ ಮಾನವ ಅಗತ್ಯಗಳು" ಎಂಬ ಇನ್ನೊಂದು ಸೂತ್ರವೂ ಬಳಕೆಗೆ ಬಂದಿತ್ತು. ಇದರ ಪ್ರಕಾರ, ದೇಶದ ಜನರ ಮೂಲಭೂತ ಅಗತ್ಯಗಳಾದ, ಆಹಾರ, ಬಟ್ಟೆ, ಮನೆ, ಆರೋಗ್ಯ ಮತ್ತು ವಿದ್ಯಾಭ್ಯಾಸಗಳಂತವುಗಳನ್ನು ಪೂರೈಸಲು ನೇರವಾಗಿ ಬಂಡವಾಳ ಹೂಡುವುದು ಅವಶ್ಯಕವೆಂದಾಯಿತು. ಹೀಗೆ ಮಾಡುವುದರಿಂದ ಕ್ಷಿಪ್ರಕಾದಲ್ಲಿಯೇ ಉತ್ಪಾದಕತೆಯಲ್ಲಿ ಹೆಚ್ಚಳ, ಬಡತನ ನಿವಾರಣೆ ಮತ್ತು ಜನರ ಕಲ್ಯಾಣ ಸಾಧನೆ ಸಾಧ್ಯವೆಂದು ವಾದ ಮಾಡಲಾಯಿತು. ಅಭಿವೃದ್ಧಿ ಪ್ರಯತ್ನದಲ್ಲಿ ಆರ್ಥಿಕ ಬೆಳವಣಿಗೆಯ ಜೊತೆಗೆ "ಮಾನವ ಅಭಿವೃದ್ಧಿ" ಯುನ್ನು ಈ ತಂತ್ರದಿಂದ ಸಾಧಿಸಬಹುದು ಎಂಬ ಸಲಹೆ ಇದರಲ್ಲಿತ್ತು.

1970ರ ದಶಕದ ಉತ್ತರಾರ್ಧದಲ್ಲಿ ಮತ್ತು ಇನ್ನು ಹೆಚ್ಚಾಗಿ 1980ರ ದಶಕದಲ್ಲಿ "ಮಾನವ ಅಭಿವೃದ್ಧಿ"ಯು ಅಭಿವೃದ್ಧಿಯು ಗಮನದ ಕೇಂದ್ರ ಬಿಂದುವಾಗಬೇಕೆಂಬ ವಾದ ಪ್ರಬಲವಾಯಿತು. ಇದಕ್ಕೆ ಬೆಂಬಲ ನೀಡಲು

ಪಿ.ಕ್ಯ ಎಲ್.ಐ (ಫಿಸಿಕಲ್ ಕ್ವಾಲಿಟಿ ಆಫ್ ಲೈಫ್ ಇಂಡೆಕ್ಸ್), ಅಂದರೆ "ಉತ್ತಮ ದೈಹಿಕ ಜೀವನ ಗುಣಮಟ್ಟ ಸೂಚಕಗಳೂ" ಎಂಬ ಗುಣಸೂಚಕ ಸೂತ್ರ ಹೊರ ಹೊಮ್ಮಿತು. ಅಮೇರಿಕಾದ "ಸಾಗರೋತ್ಸರದ ಅಭಿವೃದ್ಧಿ ಮಂಡಳಿ"ಯು 1979ರಲ್ಲಿ ಇದನ್ನು ಮುಂದಿಟ್ಟಿತು. ಒಂದು ಸಮುದಾಯದಲ್ಲಿ 1) ಒಂದು ವರ್ಷದ ಮಗುವಿನ ಸಾಮಾನ್ಯ ಜೀವನಾವಧಿಯ ವರ್ಷಗಳು, 2) ಮಕ್ಕಳ ಸಾವಿನ ಸಂಖ್ಯೆ ಹಾಗೂ 3) ಅಕ್ಷರಸ್ತರ ಸಂಖ್ಯೆ ಎಂಬು ಮೂರು ಅಂಶ ಅಥವಾ ಸೂಚಕಗಳನ್ನು ಅಳೆಯುವ ಸಂಖ್ಯೆ ಎಂಬು ಮೂರು ಅಂಶ ಅಥವಾ ಸೂಚಕಗಳನ್ನು ಅಳೆಯುವ ಸೂತ್ರ ಇದಾಗಿತ್ತು. ನಂತರದಲ್ಲಿ ಮಹಬೂಬ್ ಉಲ್ ಹಕ್‌ರವರ ನೇತೃತ್ವದಲ್ಲಿ ಯು ಎನ್ ಡಿ ಪಿ ಸಂಸ್ಥೆಯು "ಮಾನವ ಅಭಿವೃದ್ಧಿ ಸೂಚಕ" (ಹ್ಯೂಮನ್ ಡೆವಲಪ್‌ಮೆಂಟ್ ಇಂಡೆಕ್ಸ್ (ಹೆಚ್.ಡಿ. ಐ)) ಎಂಬ ಹೊಸ ಸೂತ್ರವನ್ನು ಮುಂದಿಟ್ಟಿತು. ಇದು ಒಂದು ದೇಶದಲ್ಲಿನ 1) ಮಗು ಹುಟ್ಟಿದಾಗಿನಿಂದ ಬದುಕಬಹುದಾದ ವರ್ಷಗಳು, 2) ವಯಸ್ಕರಲ್ಲಿ ಅಕ್ಷರಸ್ಥರ ಸಂಖ್ಯೆ, ಮತ್ತು 3) ತಲಾವಾರು ಆದಾಯಗಳನ್ನು ಅಳೆದು ಆ ರಾಷ್ಟ್ರದ ಮಾನವ ಅಭಿವೃದ್ಧಿಯ ದರವನ್ನು ಸೂಚಿಸುತ್ತದೆ. 1990ರಲ್ಲಿ ವಿಶ್ವದ ಪ್ರಥಮ "ಮಾನವ ಅಭಿವೃದ್ಧಿ ವರದಿ" (ಹ್ಯೂಮನ್ ಡೆವಲಪ್‌ಮೆಂಟ್) ರಿಪೋರ್ಟ್‌ನ್ನು ಹೊರತಂದು ಯು.ಎನ್.ಡಿ.ಪಿ ಸಂಸ್ಥೆಯು ಈಗ ಇದ್ನು ಪ್ರತೀ ವರ್ಷ ಹೊರತರುತ್ತಿದೆ. ಈ ವರದಿಯಲ್ಲಿ ವಿಶ್ವದ ರಾಷ್ಟ್ರಗಳ ಮಾನವ ಅಭಿವೃದ್ಧಿ ಸ್ಯೂಚ್ಯಂಕಗಳೂ ಹಾಗೂ ಶ್ರೇಣಿಕೃತಸ್ಥಾನಗಳೂ ಕಂಡುಬರುತ್ತದೆ. ಕ್ರಮೇಣ ಮಾನವ ಅಭಿವೃದ್ಧಿಯನ್ನು ಇನ್ನೂ ನಿಖರವಾಗಿ ಅಳೆಯುವ ಈ ಹೆಚ್.ಡಿ.ಐ ಅನ್ನು ಬೆಂಬಲಿಸುವ ಜಿ.ಡಿ.ಐ (ಜೆಂಡರ್ ಡೆವಲಪ್ ಮೆಂಟ್ ಇಂಡೆಕ್ಸ್) ಅಂದರೆ "ಲಿಂಗಾಧಾರಿತ ಅಭಿವೃದ್ಧಿ ಸೂಚಕ" ಮತ್ತು ಜಿ.ಎಂ.ಐ (ಜೆಂಡರ್ ಎಂಪವರ್‌ಮೆಂಟ್ ಸೂಚಕ) ಎಂದರೆ "ಲಿಂಗಾಧಾರಿತ ಸಬಲೀಕರಣ ಸೂಚಕ"ಗಳನ್ನು 1995 ರಲ್ಲೂ ಮತ್ತು ಹೆಚ್.ಪಿ.ಐ (ಹ್ಯೂಮನ್ ಪಾವರ್ಟಿ ಇಂಡೆಕ್ಸ್) ಅಂದರೆ, "ಮಾನವ ಬಡತನದ ಸೂಚಕ"ವನ್ನು 1997ರಲ್ಲೂ ಯು.ಎನ್.ಡಿ.ಪಿಯವರು ಹೊರತಂದರು. ಈ ಕೊನೆಯದಾದ ಹೆಚ್.ಪಿ.ಐ ಅಂದರೆ "ಮಾನವ ಬಡತನದ ಸೂಚಕವೂ" ದೇಶಗಳಿಲ್ಲಿನ ಬಡತನ ಅಂದರೆ ಅಭಿವೃದ್ಧಿಯಿಂದ ವಂಚಿತ ಸ್ಥಿತಿಯನ್ನು ಸೂಚಿಸುತ್ತದೆ.

ಈ ತರಹದ ಮಾನವ ಅಭಿವೃದ್ಧಿಯ ಮಾಪಕಗಳು ದೇಶಗಳ ಅಭಿವೃದ್ಧಿ ಸಾಧನೆಗಳಿಗೆ ವಾರ್ಷಿಕವಾಗಿ ಕನ್ನಡಿ ಹಿಡಿದು, ನೂನ್ಯತೆಗಳನ್ನು ಬೆಳಕಿಗೆ ತಂದು, ಮಾನವ ಅಭಿವೃದ್ಧಿಯನ್ನು, ಸಮದರ್ಶಿತ್ವದ ಅಭಿವೃದ್ಧಿಯ ದಿಕ್ಕಿನಲ್ಲಿ ಅಗತ್ಯವಾದ ತಿದ್ದುಪಡಿಗಳನ್ನು ತಂದು, ಉತ್ತಮಪಡಿಸಲು ಸಹಾಯಕವಾಗಿವೆ. ಆದರೂ 1990ರ ದಶಕದಿಂದೀಚೆಗೆ ಅರ್ಥವ್ಯವಸ್ಥೆಯಲ್ಲಿ ಮಾರುಕಟ್ಟೆಗೆ ನೀಡಿರುವ ಪ್ರಬಲ ಪಾತ್ರದಿಂದಾಗಿ ಇಂತಹಾ ತಿದ್ದುಪಡಿಗಳು ಅಗತ್ಯಕ್ಕಿಂತ ತುಂಬಾ ಅಸಮಾಧಾನಕರ ಮತ್ತು ನಿಧಾನಗತಿಯಲ್ಲಿ ಚಲಿಸುತಿವೆ. ಇಂತಹಾ ಸಂಧರ್ಭದಲ್ಲಿ ವಿವೇಕದ ಕನ್ನಡಿಯನ್ನು ಒಂದು ಕೈಯಲ್ಲಿ ಹಿಡಿದು, ನೈತಿಕತೆಯ ಕನ್ನಡಿಯನ್ನು ಮತ್ತೊಂದು ಕೈಯಲ್ಲಿ ಹಿಡಿದು ಸಂಪೂರ್ಣ ಮಾನವ ಅಭಿವೃದ್ಧಿಯ ಕಡೆಗೆ ರಾಷ್ಟ್ರಗಳನ್ನು ಎಚ್ಚರಿಸುತ್ತಿರುವ, ನೊಬೆಲ್ ಪ್ರಶಸ್ತಿ ಪಡೆದ ಅಮಾರ್ತ್ಯ ಸೇನ್ ರಂಥಾ ಅಭಿವೃದ್ಧಿ ದಾರ್ಶನಿಕರ ಪಾತ್ರ ಪ್ರಮುಖವಾಗಿದೆ. ಅಮಾರ್ತ್ಯ ಸೇನ್‌ರ ಅಭಿವೃದ್ಧಿ ಸಿದ್ಧಾಂತದ ಕಿರುಪರಿಚಯ ಇಲ್ಲಿ ಅಗತ್ಯವಿದೆ.

## 3. ಅಮಾರ್ತ್ಯ ಸೇನ್‌ರ ಅಭಿವೃದ್ಧಿ ಸಿದ್ಧಾಂತ

ಸಮಕಾಲೀನ ಅಭಿವೃದ್ಧಿ ಸಿದ್ಧಾಂತಕ್ಕೆ ಅಮಾರ್ತ್ಯ ಸೇನ್‌ರು ನೀಡಿರುವ ಕೊಡುಗೆ ವಿಶಿಷ್ಠ ಹಾಗೂ ಮೌಲ್ಯಯುತವಾಗಿದೆ. ಲೆವಿಸ್, ಜಾನ್ ರಾಲ್ಸ್ ಹಾಗೂ ಮಹಬೂಬ್ ಉಲ್ ಹಕ್‌ರ ಕೊಡುಗೆಗಳ ಆಧಾರದ ಮೇಲೆ ಅಭಿವೃದ್ಧಿ ಸಿದ್ಧಾಂತವನ್ನು ಅದ್ಭುತವಾಗಿ ಬೆಳೆಸಿದ್ದಾರೆ.

ಅಮಾರ್ತ್ಯಸೇನ್‌ರು "ಅಭಿವೃದ್ಧಿ" ಎಂದರೆ 'ಸ್ವಾತಂತ್ರ್ಯ" ಎನ್ನುತ್ತಾರೆ. ಇದಕ್ಕಾಗಿಯೇ ಅವರು ಡೆವಲಪ್‌ಮೆಂಟ್ ಆಸ್ ಫ್ರೀಡಮ್ (2000) ಎಂಬ ಗ್ರಂಥವನ್ನು ರಚಿಸಿದರು. :ಜನರು ಅನಂದಿಸುವ ನಿಜವಾದ ಸ್ವಾತಂತ್ರ್ಯಗಳನ್ನು ವಿಸ್ತರಿಸುವ ಪ್ರಕ್ರಿಯೆಯೇ "ಅಭಿವೃದ್ಧಿ ಪ್ರಕ್ರಿಯೇ" ಎಂಬುದು ಅವರ ನಿಲುವು. "ಆರ್ಥಿಕ ಬಡತನ, ಸಾಮಾಜಿಕ ವಂಚನೆ ರಾಜಕೀಯ

ನಿರಂಕುಶತ್ವ ಅಥವಾ ಸಾಂಸ್ಕೃತಿಕ ಸರ್ವಾಧಿಕಾರದಿಂದಾಗಿ" ಈಗ ಕೋಟ್ಯಾಂತರ ಜನ "ಸ್ವಾತಂತ್ರ್ಯ ರಹಿತ" (ಅನ್ ಫ್ರೀ) ಆಗಿದ್ದಾರೆ. ಅಮಾರ್ತ್ಯಸೇನ್‌ರ ಪ್ರಕಾರ ಅಭಿವೃದ್ಧಿಯನ್ನು ಸ್ವಾತಂತ್ರ್ಯವೆನ್ನುವ ಅಗತ್ಯ ಎರಡು ಕಾರಣಗಳಿಂದಾಗಿದೆ. ಮೊದಲನೆಯದು "ಪರಿಣಾಮಕಾರಿ ಕಾರಣ" ಮತ್ತು ಎರಡನೆಯದು "ಮೌಲ್ವೀಕರಣ ಕಾರಣ" ಇವುಗಳಾಗಿವೆ. ಮೊದಲನೆಯದಾಗಿ, ಸ್ವಾತಂತ್ರ್ಯದಿಂದ ಮಾತ್ರವೆ ಜನರು ಅಭಿವೃದ್ಧಿಗೆ ಮುಕ್ತವಾಗಿ, ಪರಿಣಾಮಕಾರಿಯಾಗಿ ಹಾಗೂ ಸೃಜನಾತ್ಮಕವಾಗಿ ಕೊಡುಗೆ ನೀಡಲು ಸಾಧ್ಯವಾಗುತ್ತದೆ. ಎರಡನೆಯದಾಗಿ, ಈ ಸ್ವಾತಂತ್ರ್ಯ ವೃದ್ಧಿಯನ್ನು ಅಭಿವೃದ್ಧಿಯು ಎಷ್ಟರಮಟ್ಟಿಗೆ ಸಾಧಿಸಿದೇ ಎಂಬುದೇ ಅಭಿವೃದ್ಧಿಯು ನಿಜವಾದ ಮೌಲ್ವಿಕರಣವಾಗುತ್ತದೆ. ಅಮಾರ್ತ್ಯ ಸೇನ್ ಪ್ರಕಾರ "ನಮ್ಮ ಜೀವನದ ಗುಣಮಟ್ಟವನ್ನು ಮತ್ತು ಅಭಿವೃದ್ಧಿಯನ್ನು ನಮ್ಮ "ಐಶ್ವರ್ಯ"ದಿಂದ ಅಳೆಯುವ ಬದಲು ನಮ್ಮ "ಸ್ವಾತಂತ್ರ್ಯ"ದಿಂದ ಅಳೆಯಬೇಕು"

"ಸ್ವಾತಂತ್ರ್ಯ" ಚಲಾಯಿಸಬೇಕಾದರೆ ಮನುಷ್ಯನಿಗೆ "ಸಾಮರ್ಥ್ಯ"ವಿರಬೇಕು. ಅಭಿವೃದ್ಧಿಯಾಗಬೇಕಾದರೆ ಸಾಮರ್ಥ್ಯಗಳು ವೃದ್ಧಿಯಾಗಬೇಕೆಂಬುದು ಅಮಾರ್ಥ್ಯ ಸೇನ್‌ರ ಇನ್ನೊಂದು ಹೆಸರಾಂತ ಕೊಡುಗೆಯಾಗಿದೆ. ಪದಾರ್ಥಗಳು ಮತ್ತು ಸಾಮಾರ್ಥ್ಯಗಳು (1998) (ಕಮಾಡಿಟೀಸ್ ಅಂಡರ ಕೇಪಬಲಿಟೀಸ್). ಎಂಬ ತಮ್ಮ ಪುಸ್ತಕದಲ್ಲಿ ಈ ಕೊಡುಗೆಯನ್ನು ಮಾಡಿದ್ದಾರೆ.

"ಪದಾರ್ಥ"ಗಳನ್ನು (ಉಪಯುಕ್ತವಾದ) ಹೊಂದಿರುವುದಿಲ್ಲ ಅಭಿವೃದ್ಧಿಯಲ್ಲಿ ಅವುಗಳನ್ನು ಸರಿಯಾಗಿ ಬಳಸುವ "ಸಾಮರ್ಥ್ಯ"ವನ್ನು ಹೊಂದಿರುವುದರಿಂದ ಅಭಿವೃದ್ಧಿ ಎಂಬುದು ಇವರ ನಿಲುವು. ಪದಾರ್ಥಗಳಿಗಾಗಲೀ ಅವುಗಳ ವಿಧ ಅಥವಾ ಗುಣಗಳಿಗಾಗಲೀ ಅಭಿವೃದ್ಧಿಯನ್ನು ಸ್ವಯಂ ತರುವ ಶಕ್ತಿಯಿಲ್ಲ. ಅಭಿವೃದ್ಧಿಯು ಆ ಪದಾರ್ಥಗಳನ್ನು ಸೂಕ್ತವಾಗಿ ಬಳಸುವ ವ್ಯಕ್ತಿಯ ಸಾಮರ್ಥ್ಯವನ್ನು ಇದು ಅವಲಂಬಿಸಿರುತ್ತದೆ. ಯಾವ ರೀತಿಯಲ್ಲಿ ಯಾವ ಉದ್ದೇಶಕ್ಕಾಗಿ ವ್ಯಕ್ತಿ ಇದನ್ನು ಬಳಸುತ್ತಾನೆ ಎಂಬುದು ಮುಖ್ಯವಾಗುತ್ತದೆ. ಉದಾಹರಣೆಗೆ, ಓದುವುದಕ್ಕೆ ಬರದವನಿಗೆ ಪುಸ್ತಕದಿಂದ ಅಭಿವೃದ್ಧಿ ಬರುವುದಿಲ್ಲ. ಆದ್ದರಿಂದ ಪದಾರ್ಥಗಳನ್ನು ಹೊಂದಿರುವುದು ಅಭಿವೃದ್ಧಿ ಅಲ್ಲ. ಪದಾರ್ಥಗಳನ್ನು ಅಥವಾ ನಮ್ಮ ಸಂಪತ್ತನ್ನು ನಮ್ಮ ಮುಕ್ತ ಆಯ್ಕೆಗೆ ಅಥವಾ ಸ್ವಾತಂತ್ರ್ಯವನ್ನು ಚಲಾಯಿಸುವುದಕ್ಕೆ ಬಳಸುವುದು ಅಭಿವೃದ್ಧಿಯಾಗುತ್ತದೆ. ನಮ್ಮನ್ನು ಸ್ವಾತಂತ್ರರಹಿತರನ್ನಾಗಿರಸುವ ಅಥವಾ ಬಂಧಿಗಳನ್ನಾಗಿಸುವ ಅಂಶಗಳು ನಮ್ಮ ನೈಜ ಪರಿಸ್ಥಿತಿಯಲ್ಲಿ ಅನೇಕವಿದೆ. ನಮ್ಮ ಆರೋಗ್ಯ, ವಿದ್ಯಾಭ್ಯಾಸ, ಲಿಂಗದಂತಃ ವೈಯಕ್ತಿಕ ಅಂಶಗಳು; ನಮ್ಮ "ಸಾಮಾಜಿಕ ಹವಾಮಾನ" (ಸೋಷಿಯಲ್ ಕ್ಲೈಮೆಟ್), ಸಮುದಾಯದ ಅಗತ್ಯಗಳು (ಕಮ್ಯೂನಿಟಿ ರಿಕ್ವೈರ್‌ಮೆಂಟ್ಸ್ ) ಕುಟುಂಬದೊಳಗಿನ ಸಂಪನ್ಮೂಲ(ಶಕ್ತಿ)ಗಳ ವಿತರಣೆ ಮುಂತಾದ ಸಾಮಾಜಿಕ ಮತ್ತು ಆರ್ಥಿಕ ಅಂಶಗಳು ನಮ್ಮನ್ನು ಬಂಧಿಸುತ್ತವೆ. ಅಭಿವೃದ್ಧಿಗೋಸ್ಕರ ಇವುಗಳನ್ನೆಲ್ಲ ಸರಿಯಾಗಿ ಗಃ ನಿಸಿ ವ್ಯವಸ್ಥಿತಿಸಬೇಕಾಗಿದೆ. ಈ ವ್ಯವಸ್ಥೆ ವ್ಯಕ್ತಿ ವ್ಯಕ್ತಿಯ ಸಾಮರ್ಥ್ಯಗಳನ್ನು ವೃದ್ಧಿಸುವಂತಿರಬೇಕಾಗುತ್ತದೆ. ಹೀಗಾಗಲು, ವ್ಯಕ್ತಿಯ ಆದಾಯ ಮತ್ತು ಐಶ್ವರ್ಯಗಳಲ್ಲಿನ ಹೆಚ್ಚಳಗಳೇ ಅಲ್ಲದೆ ಅವನಿಗೆ ಆರೋಗ್ಯ, ಶಿಕ್ಷಣ ಹಾಗೂ ಉತ್ತಮ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಗಳನ್ನು ಒದಗಿಸಬೇಕೆಂಬ ವಿಶಾಲ ನಿಲುವು ಅಮಾರ್ಥ್ಯ ಸೇನ್‌ರದಾಗಿದೆ. ಇವುಗಳನ್ನೆಲ್ಲಾ ಅಭಿವೃದ್ಧಿಗಾಗಿ ಮಾನವನ "ಹಕ್ಕುಗಳು" (ಎನ್‌ಟೈಟಲ್‌ಮೆಂಟ್ಸ್) ಎಂದು ಇವರು ಪರಿಗಣಿಸುತ್ತಾರೆ. ವ್ಯಕ್ತಿಗಾಗಲೀ ಅಥವಾ ಸಮಾಜಕ್ಕಾಗಲೀ ಅಭಿವೃದ್ಧಿಯ ಮುಕ್ತಿ ದೊರೆಯಬೇಕಾದರೆ ಐಶ್ವರ್ಯದಿಂದಲ್ಲ ಅದನ್ನು ಸರಿಯಾಗಿ ಬಳಸುವ ಶಕ್ತಿ ಅಥವಾ ಸಾಮರ್ಥ್ಯದಿಂದ ಸಾಧ್ಯವಾಗುತ್ತದೆ ಎಂಬ ನಿಲುವು ಇವರದು. ಇದಕ್ಕಾಗಿ, ಅಮಾರ್ಥ್ಯ ಸೇನ್‌ರ ಅಭಿವೃದ್ಧಿ ಸಿದ್ಧಾಂತವು ವ್ಯಕ್ತಿ ಮತ್ತು ಸಮಾಜಗಳ ಬರೀ ಆರ್ಥಿಕ ಬೆಳವಣಿಗೆಯಲ್ಲಿ ಅದರ ಜೊತೆಗೆ ಅವುಗಳ ಸಂಪೂರ್ಣ ಪರಿವರ್ತನೆಯನ್ನು ಒತ್ತಾಯಿಸುತ್ತದೆ.

## ಮುಕ್ತಾಯ

ಮೇಲಿನ ಎಲ್ಲಾ ಅಭಿವೃದ್ಧಿ ಚಿಂತನೆಗಳ ಪರಿಣಾಮದಿಂದ ಸಮಕಾಲೀನ ಅಭಿವೃದ್ಧಿ ಸಿದ್ಧಾಂತವು ಕೇವಲ ರಾಷ್ಟ್ರೀಯ ಆರ್ಥಿಕಾಭಿವೃದ್ಧಿಯ ಸಿದ್ಧಾಂತವಾಗಿ ಉಳಿದಿಲ್ಲ. ಅದು, ಈಗ, ಇಡೀ ಮಾನವ ಕುಲದ ಸಂಪೂರ್ಣ ಪರಿವರ್ತನೆಯನ್ನು ಮತ್ತು ನಿಜವಾದ ಸ್ವಾತಂತ್ರ್ಯ ಮತ್ತು ಪೂರ್ಣ ಅಭಿವೃದ್ಧಿಯನ್ನು ಬಯಸುತ್ತದೆ. ಇದಕ್ಕಾಗಿಯೇ ವಿಶ್ವಸಂಸ್ಥೆಯು ಅಭಿವೃದ್ಧಿಯು ಮಾನವನ ಹಕ್ಕೆಂದು ಘೋಷಿಸಿದೆ. ಮೇಲೆ ನಾವು ವಿಚಾರ ಮಾಡಿರುವ ಮಾನವ ಅಭಿವೃದ್ಧಿ ಸೂಚಕಗಳ ಜೊತೆಗೆ ಮಾನವ "ಸ್ವಾತಂತ್ರ್ಯ"ವನ್ನು ಅಳೆಯುವ 'ಮಾನವ ಸ್ವಾತಂತ್ರ್ಯ ಸೂಚಕ" (ಹ್ಯೂಮನ್ ಫ್ರೀಡಮ್ ಇಂಡೆಕ್ಸ್ [ಹೆಚ್ ಎಫ್ ಐ]) 1991, "ರಾಜಕೀಯ ಸ್ವಾತಂತ್ರ್ಯ ಸೂಚಕ (ಪೊಲಿಟಿಕಲ್ ಫ್ರೀಡಮ್ ಇಂಡೆಕ್ಸ್ [ಪಿ.ಎಫ್.ಐ]) 1992 ಮತ್ತು ರಾಜಕೀಯ ಹಾಗೂ ನಾಗರೀಕ ಸ್ವಾತಂತ್ರ್ಯಗಳನ್ನು ಒಳಗೊಂಡ ಹ್ಯೂಮನ್ ಡೆವಲಪ್‌ಮೆಂಟ್ ಇಂಡೆಕ್ಸ್ 2002 ಗಳು ಮಾನವ ಕುಲದ ಪ್ರಯತ್ನಕ್ಕೆ ಕನ್ನಡಿ ಹಿಡಿಯುತ್ತಿವೆ.

## ನಿಮ್ಮ ಪ್ರಗತಿ ಪರಿಶೀಲನೆ –II

ಸೂಚನೆ : 1. ಕೆಳಗೆ ನೀಡಲಾಗಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ.

2. ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವ ಮಾದರಿ ಉತ್ತರದೊಂದಿಗೆ ಪರಿಶೀಲಿಸಿ.

1. ಅಭಿವೃದ್ಧಿಯ "ಪಾಶ್ಚಿಮಾತೀಕರಣ" ಮಾದರಿಯನ್ನು ವಿವರಿಸಿ.

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

2. ಅಭಿವೃದ್ಧಿಯ ಬಗೆಗಿನ ವಿವಿಧ ಪಾಶ್ಚಿಮಾತ್ರಯ ಆರ್ಥಿಕ ಸಿದ್ಧಾಂತಗಳನ್ನು ಸಂಕ್ಷಿಪ್ತವಾಗಿ ವಿಚಾರ ಮಾಡಿ.

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

3. ಕೆಳಕಂಡವುಗಳನ್ನು ಕುರಿತು ಸಂಕ್ಷಿಪ್ತ ಟಿಪ್ಪಣಿಗಳನ್ನು ಬರೆಯಿರಿ

i ಅಭಿವೃದ್ಧಿಯ ಬಗ್ಗೆ ಮಾರ್ಕ್ಸ್ ವಾದಿಗಳ ಸಿದ್ಧಾಂತ

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

ii ಆರ್ಥಿಕ ಬೆಳವಣಿಗೆಯ ಬಗೆಗಿನ ಸಿದ್ಧಾಂತಗಳು

------------------------------------------------------------

------------------------------------------------------------

------------------------------------------------------------

------------------------------------------------------------

iii ರೊಸ್ಟೋವ್‌ರವರ ಬೆಳವಣಿಗೆಯ ಹಂತಗಳ ಸಿದ್ಧಾಂತ

------------------------------------------------------------

------------------------------------------------------------

------------------------------------------------------------

------------------------------------------------------------

iv ಪ್ರಸರಣ ಸಿದ್ಧಾಂತ

------------------------------------------------------------

------------------------------------------------------------

------------------------------------------------------------

------------------------------------------------------------

v ಪರಾವಲಂಬನ ಸಿದ್ಧಾಂತ

------------------------------------------------------------

------------------------------------------------------------

------------------------------------------------------------

------------------------------------------------------------

vi ನವ ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ಮಾರ್ಗ

------------------------------------------------------------

------------------------------------------------------------

------------------------------------------------------------

------------------------------------------------------------

vii ಅಭಿವೃದ್ಧಿಯ ಬಗೆಗಿನ ಮನಃಶಾಸ್ತ್ರೀಯ ಸಿದ್ಧಾಂತ

---------------------------------------------------------------

---------------------------------------------------------------

---------------------------------------------------------------

---------------------------------------------------------------

4. ಸಮಕಾಲೀನ ಅಭಿವೃದ್ಧಿ ಸಿದ್ಧಾಂತಗಳನ್ನು ಕುರಿತು ವಿಚಾರ ಮಾಡಿ

---------------------------------------------------------------

---------------------------------------------------------------

---------------------------------------------------------------

---------------------------------------------------------------

5. ಕೆಳಕಂಡವುಗಳನ್ನು ಕುರಿತು ಸಂಕ್ಷಿಪ್ತ ಟಿಪ್ಪಣಿಗಳನ್ನು ಬರೆಯಿರಿ.

i ಉಳಿಸಿ-ಬೆಳೆಸುವ ಅಭಿವೃದ್ಧಿ ಸಿದ್ಧಾಂತ

---------------------------------------------------------------

---------------------------------------------------------------

---------------------------------------------------------------

---------------------------------------------------------------

ii ಸಮದರ್ಶತ್ವದ ಅಭಿವೃದ್ಧಿ ಸಿದ್ಧಾಂತ

---------------------------------------------------------------

---------------------------------------------------------------

---------------------------------------------------------------

---------------------------------------------------------------

iii ಅಮಾರ್ತ್ಯ ಸೇನ್‌ರ ಅಭಿವೃದ್ಧಿ ಸಿದ್ಧಾಂತ

---------------------------------------------------------------

---------------------------------------------------------------

---------------------------------------------------------------

---------------------------------------------------------------

## 3.4 ಸಾರಾಂಶ

ಈ ಘಟಕ 3ರಲ್ಲಿ ಅಭಿವೃದ್ಧಿಯ ಪರಿಕಲ್ಪನೆ, ಅರ್ಥ ಮತ್ತು ಸಿದ್ಧಾಂತಗಳನ್ನು ತಿಳಿಯುವ ಪ್ರಯತ್ನ ಮಾಡಿದ್ದೇವೆ.

ಈ ಪ್ರಯತ್ನದಲ್ಲಿ ಮೊದಲನೆಯದಾಗಿ, ಅಭಿವೃದ್ಧಿಯ ಪ್ರಾಮುಖ್ಯತೆಯನ್ನು 'ಪರಿಚಯ'ದಲ್ಲಿ ಅರಿತೆವು. ಎರಡನೆಯದಾಗಿ ಅಭಿವೃದ್ಧಿ ಪರಿಕಲ್ಪನೆ ಮತ್ತು ಅದರ ಅರ್ಥ ಕುರಿತು ವಿಚಾರ ಮಾಡಿದೆವು ಮೂರನೆಯದಾಗಿ i) ಪಾಶ್ಚಿಮಾತ್ಯಕರಣ ಮಾದರಿ, ii) ಅಭಿವೃದ್ಧಿಯ ಬಗೆಗಿನ ವಿವಿಧ ಪಾಶ್ಚಿಮಾತ್ಯ ಸಿದ್ಧಾಂತಗಳು, iii) ಅಭಿವೃದ್ಧಿಯ ಬಗೆಗಿನ ಬದಲೀ ಸಿದ್ಧಾಂತಗಳು ಹಾಗೂ iv) ಸಮಕಾಲೀನ ಅಭಿವೃದ್ಧಿ ಸಿದ್ಧಾಂತಗಳನ್ನು ಕುರಿತು ತಿಳಿದಿದ್ದೇವೆ.

ಅಭಿವೃದ್ಧಿಯು ಈಗ ವಿಶ್ವಸಂಸ್ಥೆಯು ಘೋಷಿಸಿರುವ ಮಾನವನ ಒಂದು ಹಕ್ಕಾಗಿದೆ. ಅಭಿವೃದ್ಧಿಯು ಕೇವಲ ಆರ್ಥಿಕಾಭಿವೃದ್ಧಿಯಾದರೆ ಸಾಲದು ಅದು ಇಡೀ ಮಾನವ ಕುಲದ ವೈಯಕ್ತಿಕ ಮತ್ತು ಸಾಮುದಾಯಿಕ ಸ್ವಾತಂತ್ರ್ಯ ಮತ್ತು ಸಾಮರ್ಥ್ಯಗಳ ನೈಜ ಅಭಿವೃದ್ಧಿಯು ಕಡೆಗಿನ ಸಂಪೂರ್ಣ ಪರಿವರ್ತನೆಯಾಗಬೇಕು ಎಂಬುದು ಇಂದಿನ ಅಭಿವೃದ್ಧಿ ಸಿದ್ಧಾಂತವಾಗಿದೆ.

## 3.5 ಕಠಿಣ ಪದಗಳು

| | | |
|---|---|---|
| 1. ಮೂರನೇ ವಿಶ್ವರಾಷ್ಟ್ರಗಳು | – | ಎರಡನೇ ಮಹಾಯುದ್ಧದ ನಂತರದ ಸ್ವಾತಂತ್ರ್ಯ ಪಡೆದ ರಾಷ್ಟ್ರಗಳು |
| 2. ಆರ್ಥಿಕ ಬೆಳವಣಿಗೆ | – | ರಾಷ್ಟ್ರೀಯ ಒಟ್ಟಾರೆ ಉತ್ಪಾದನೆ, ಆದಾಯ ಹಾಗೂ ತಲಾವಾರು ಆದಾಯಗಳಲ್ಲಿ ವೃದ್ಧಿ |
| 3. ಮಾನವನ ಅಭಿವೃದ್ಧಿ | – | ರಾಷ್ಟ್ರದ ಆರ್ಥಿಕ ಬೆಳವಣಿಗೆಯಲ್ಲದೇ ಮಾನವ ವ್ಯಕ್ತಿಗಳ ನೈಜ ಜೀವನದ ಗುಣಮಟ್ಟದಲ್ಲಿ ಉತ್ತಮ ಬದಲಾವಣೆ ತರುವ ಅಭಿವೃದ್ಧಿ |
| 4. ಉಳಿಸಿ – ಬೆಳೆಸುವ ಅಭಿವೃದ್ಧಿ | – | ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪರಿಸರ ರಕ್ಷಿಸುತ್ತಾ ಅಭಿವೃದ್ಧಿಯನ್ನು ಮುಂದಿನ ಪೀಳಿಗೆಗೂ ಸಾಧ್ಯವಾಗುವಂತೆ ಮಾಡುವ ಪ್ರಕ್ರಿಯೆ. |
| 5. ಸಮದರ್ಶಿತ್ವದ ಅಭಿವೃದ್ಧಿ | – | ಅಭಿವೃದ್ಧಿಯು ವಿತರಣೆಯುನ್ನು ಕೇವಲ ಉಳ್ಳವರಿಗೇ ಮಾತ್ರ ಮಾಡದೇ ಅಭಿವೃದ್ಧಿ ವಂಚಿತ ಶ್ರೀ ಸಾಮಾನ್ಯನಿಗೂ ತಲುಪಿಸುವ ಪ್ರಕ್ರಿಯೆ. |
| 6. ನವವಿಶ್ವ ಆರ್ಥಿಕ ವ್ಯವಸ್ಥೆ | – | ವಿಶ್ವದ ಎಲ್ಲಾ ವ್ಯಕ್ತಿ ಮತ್ತು ರಾಷ್ಟ್ರಗಳಿಗೆ ಅಭಿವೃದ್ಧಿ ವಿತರಿಸುವ ಒಂದು ನ್ಯಾಯಯುತ ಆರ್ಥಿಕ ವ್ಯವಸ್ಥೆ. |
| 7. ಸ್ವಾಯತ್ತ ಮಾದರಿ | – | ಪ್ರತೀ ದೇಶದ ಸ್ಥಳೀಯ ಅವಶ್ಯಕತೆಗಳಾಧಾರಿತ ಅಭಿವೃದ್ಧಿ ಮಾದರಿ |
| 8. "ಸಾಮಾರ್ಥ್ಯಗಳು" | – | ವ್ಯಕ್ತಿಯು ತನ್ನ ಅಭಿವೃದ್ಧಿಯುನ್ನು ಅಂದರೆ, ಸ್ವಾತಂತ್ರ್ಯವನ್ನು ಹೆಚ್ಚಿಸಿಕೊಳ್ಳಲು ಪದಾರ್ಥಗಳನ್ನು ಸರಿಯಾಗಿ ಬಳಸುವ ಶಕ್ತಿ. |

## 3.6 ಕೆಲವು ಉಪಯುಕ್ತ ಪುಸ್ತಕಗಳು


1. ಎಂ. ಉಮಾಪತಿ : *ಡೆವೆಲಪ್‌ಮೆಂಟ್ ಡಿಬೇಟ್ :ದಿ ಮಿಸ್ಸಿಂಗ್ ಕ್ವಶ್ವನ್ಸ್ (1994)*

2. ಫೆಲಿಕ್ಸ್ ರಾಜ್ ಮತ್ತಿತರರು : *ಕಾಂಟೆಂಪೊರರಿ ಡೆವೆಲಪ್‌ಮೆಂಟ್ ಎಕನಾಮಿಕ್ಸ್ (2006)*

3. ಸ ಪ್ರು ಆರ್.ಕೆ : *ಡೆವೆಲಪ್‌ಮೆಂಟ್ ಅಡ್ಮಿನಿಸ್ಟ್ರೇಷನ್ (1994)*


## 3.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರ

ನಿಮ್ಮ ಪ್ರಗತಿ ಪರಿಶೀಲನೆ – 1

1. ನೋಡಿ ವಿಭಾಗ 3.2
2. (i) ನೋಡಿ ವಿಭಾಗ 3.2.4
   (ii) ನೋಡಿ ವಿಭಾಗ 3.2.5

ನಿಮ್ಮ ಪ್ರಗತಿ ಪರಿಶೀಲನೆ – 11

1. ನೋಡಿ ವಿಭಾಗ 3.3.1
2. ನೋಡಿ ವಿಭಾಗ 3.3.2(ಅ)
3. (i) ನೋಡಿ ವಿಭಾಗ 3.3.2. (ಅ) (ii)
   (ii) ನೋಡಿ ವಿಭಾಗ 3.3.2. (ಅ) (iii)
   (iii) ನೋಡಿ ವಿಭಾಗ 3.3.2 (ಅ) (iii)
   (iv) ನೋಡಿ ವಿಭಾಗ 3.3.2 (ಅ) (iv)
   (v) ನೋಡಿ ವಿಭಾಗ 3.3.2 (ಅ) (v)
   (vi) ನೋಡಿ ವಿಭಾಗ 3.3.2 (ಅ) (vi)
   (vii) ನೋಡಿ ವಿಭಾಗ 3.3.2 (ಆ)
4. ನೋಡಿ ವಿಭಾಗ 3.3.4
5. (i) ನೋಡಿ ವಿಭಾಗ 3.3.4 (1)
   (ii) ನೋಡಿ ವಿಭಾಗ 3.3.4 (2)
   (iii) ನೋಡಿ ವಿಭಾಗ 3.3.4 (3)

# ಘಟಕ – 4 : ಅಭಿವೃದ್ಧಿಗೂ ಆಡಳಿತಕ್ಕೂ ಇರುವ ಸಂಬಂಧ

ರಚನೆ


4.0 ಉದ್ದೇಶಗಳು

4.1 ಪರಿಚಯ

4.2 ಅನಿವಾರ್ಯವಾದ ಮತ್ತು ನಿರಂತರವಾದ ನಂಟು

4.3 ಮೂರನೇ ವಿಶ್ವರಾಷ್ಟ್ರಗಳಲ್ಲಿ ಈ ನಂಟು

4.4 "ಆಡಳಿತಾಭಿವೃದ್ಧಿ" ಪರಿಕಲ್ಪನೆ

4.5 ಆಡಳಿತ ಮೊದಲೊ–ಅಭಿವೃದ್ಧಿ ಮೊದಲೊ ಎಂಬ ಮೊಟ್ಟೆ–ಕೋಳಿಗಳ ನಡುವಿನಂತಃ ಸಂಬಂಧ

4.6 ಅಭಿವೃದ್ಧಿ–ಆಡಳಿತದಿಂದ ಮಾತ್ರವೇ ಅಲ್ಲ

ನಿಮ್ಮ ಪ್ರಗತಿ ಪರಿಶೀಲನಾ ಪ್ರಶ್ನೆಗಳು

4.7 ಸಾರಾಂಶ

4.8 ಕಠಿಣ ಪದಗಳು

4.9 ಕೆಲವು ಉಪಯುಕ್ತ ಗ್ರಂಥಗಳು

4.10 ನಿಮ್ಮ ಪ್ರಗತಿ ಪರಿಶೀಲನಾ ಪ್ರಶ್ನೆಗಳಿಗೆ ಉತ್ತರಗಳು

## 4.0 ಉದ್ದೇಶಗಳು

- ಆಡಳಿತ ಮತ್ತು ಅಭಿವೃದ್ಧಿಗಳ ನಡುವಿನ ಸಂಬಂಧವನ್ನು ಅರಿಯುವುದು.
- ಮೂರನೇ ವಿಶ್ವರಾಷ್ಟ್ರಗಳಿಗೇ ವಿಶೇಷವಾಗಿ ಸಂಬಂಧಿಸಿದಂತೆ ಇದನ್ನು ತಿಳಿಯುವುದು.
- "ಆಡಳಿತಾಭಿವೃದ್ಧಿ" ಪರಿಕಲ್ಪನೆಯನ್ನು ಅರಿಯುವುದು
- ಮೊಟ್ಟೆ-ಕೋಳಿಗಳಂತಹದೇ ಆದ ಆಡಳಿತ-ಅಭಿವೃದ್ಧಿಗಳ ನಡುವಿನ ಪರಸ್ಪರಾವಲಂಬಿತ ಸಂಬಂಧವನ್ನು ತಿಳಿಯುವುದು. ಮತ್ತು
- ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಮಿತಿಗಳನ್ನು ಅರ್ಥಮಾಡಿಕೊಳ್ಳುವುದು

## 4.1 ಪರಿಚಯ

ಸ್ವಾತಂತ್ರ್ಯ ಪಡೆದ ಮೇಲೆ ರಾಷ್ಟ್ರೀಯ ಅಭಿವೃದ್ಧಿ ಬಯಸಿದ ಮೂರನೆ ವಿಶ್ವರಾಷ್ಟ್ರಗಳಲಿ ಅಭಿವೃದ್ಧಿ ಯಾರು ತರುವವರು ಎಂಬ ಪ್ರಶ್ನೆ ಮುಂದಾಯಿತು. ರಾಷ್ಟ್ರದಲ್ಲಿನ ಸರ್ಕಾರ ಮತ್ತು ಸಾರ್ವಜನಿಕ ಆಡಳಿತಗಳು ಇದಕ್ಕೆ ಜವಾಬ್ದಾರರೆಂಬುದು ಅನಿವಾರ್ಯವಾಯಿತು. ಆದರೆ ಈ ದೇಶಗಳಲ್ಲಿ ಸಾರ್ವಜನಿಕ ಆಡಳಿತವೇ ಹಿಂದುಳಿದಿರುವುದು ಒಂದು ಆತಂಕದ ವಿಷಯವಾಗಿತ್ತು. ಮೊದಲು, ಆಡಳಿತವನ್ನು ಅಭಿವೃದ್ಧಿಪಡಿಸಿ ಅದರ ಮೂಲಕ ಸಮಾಜದ ಇತರ ಕ್ಷೇತ್ರಗಳನ್ನು ಅಭಿವೃದ್ಧಿ ಪಡಿಸಬೇಕೆಂಬುದು ಗಮನ ಸೆಳೆಯಿತು.

ಆಡಳಿತದ ಅಭಿವೃದ್ಧಿಗೆ ದೇಶದ ಒಳಗಿನ ಮತ್ತು ಹೊರಗಿನಿಂದ ಬಂದ ಎರಡು ತರಹದ ಪ್ರಯತ್ನಗಳು ಆದವು. ಆಂತರಿಕವಾಗಿ ಆಡಳಿತದ ಇಂದಿನ ಪರಿಸ್ಥಿತಿ ಮತ್ತು ಆಗಬೇಕಾದ ಬದಲಾವಣೆಗಳನ್ನು ಅಧ್ಯಯನವ ಮಾಡಿ ತಿಳಿಸಲು ಸಮಿತಿಗಳು ಮತ್ತು ಆಯೋಗಗಳು ಕಾರ್ಯನಿರ್ವಹಿಸಿದವು. ಇದನ್ನು ಬೆಂಬಲಿಸಲು ಹೊರಗಿನಿಂದ ಆಸಕ್ತ ದೇಶಗಳು ತಾಂತ್ರಿಕ ಮತ್ತು ಹಣಕಾಸಿನ ವಿದೇಶಿ ನೆರವು ನೀಡಲು ಮುಂದಾದವು. ಅಭಿವೃದ್ಧಿಯನ್ನು ಹೊಂದಿದ್ದ ಮೂರನೇ ವಿಶ್ವರಾಷ್ಟ್ರಗಳಿಂದ ಆಡಳಿತ ತಜ್ಞರು ಮೂರನೇ ವಿಶ್ವರಾಷ್ಟ್ರಗಳಿಗೆ ಆಗಮಿಸಿದರು. ಅಭಿವೃದ್ಧಿಯಲ್ಲಿ ತೊಡಗಿದ್ದ ಆಡಳಿತಗಳ ಅಧ್ಯಯನ ಮಾಡಲಾರಂಭಿಸಿದವು.

"ಅಭಿವೃದ್ಧಿ ಆಡಳಿತ"ವೆಂಬ ಪರಿಕಲ್ಪನೆ ಮತ್ತು ಒಂದು ಅಧ್ಯಯನ ಶಾಖೆ ಈ ಸಂದರ್ಭದಲ್ಲಿ ಹುಟ್ಟಿದವು. "ಆಡಳಿತಾಭಿವೃದ್ಧಿ" ಎಂಬ ಪರಿಕಲ್ಪನೆ, ಆಡಳಿತ ಮತ್ತು ಅಭಿವೃದ್ಧಿಗಳ ನಡುವಿನ ಪರಸ್ಪರಾವಲಂಬಿತ ಸಂಬಂಧಗಳು ಹಾಗೂ ರಾಷ್ಟ್ರದ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರದ ಇತಿಮಿತಿಗಳು ಬೆಳಕಿಗೆ ಬಂದವು.

ಈ ಹಿನ್ನೆಲೆಯಲ್ಲಿ ನಾವು ಈ ಘಟಕ 4ರಲ್ಲಿ ಈ ಅಂಶಗಳನ್ನು ಕೆಳಗಿನಂತೆ ಕ್ರಮವಾಗಿ ಅಧ್ಯಯನ ಮಾಡುತ್ತೇವೆ:

1.ಸಾರ್ವಜನಿಕ ಆಡಳಿತ ಮತ್ತು ಅಭಿವೃದ್ಧಿಗಳ ನಡುವಿನ ಸಂಬಂಧಗಳು:

2. ಮೂರನೇ ವಿಶ್ವರಾಷ್ಟ್ರಗಳಲ್ಲಿನ ಈ ಸಂಬಂಧಗಳ ಪರಿಸ್ಥಿತಿ:

3. "ಆಡಳಿತಾಭಿವೃದ್ಧಿ' ಎಂಬ ಪರಿಕಲ್ಪನೆಯ ಸ್ವರೂಪ:

4. ಅಭಿವೃದ್ಧಿ-ಆಡಳಿತಗಳ ನಡುವೆ ಇರುವ ಮೊಟ್ಟೆ-ಕೋಳಿಗಳಂತಃ ಸಂಬಂಧ ಮತ್ತು

5. ರಾಷ್ಟ್ರದ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರದ ಇತಿಮಿತಿಗಳು.

## 4.2 ಅನಿವಾರ್ಯವಾದ ಮತ್ತು ನಿರಂತರವಾದ ನಂಟು

ರಾಷ್ಟ್ರಾಭಿವೃದ್ಧಿಯು ಒಂದು ನಿರಂತರವಾದ ಮತ್ತು ಬೃಹತ್ತಾದ ಪ್ರಯಾಸವಾಗಿದೆ. ಇದರಲ್ಲಿ ಸಾರ್ವಜನಿಕ ಹಾಗೂ ಖಾಸಗೀ ಕ್ಷೇತ್ರಗಳ ವ್ಯಕ್ತಿಗಳೂ, ಗುಂಪುಗಳೂ, ಸಂಸ್ಥೆಗಳೂ ಹಾಗೂ ಸಮುದಾಯಗಳೂ ನೇರವಾಗಿಯೋ ಅಥವಾ ಪರೋಕ್ಷವಾಗಿಯಾಗಿಯೋ ಭಾಗವಹಿಸುತ್ತಾರೆ.

ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಭಾಗವಹಿಸುವುದರಿಂದ ರಾಜ್ಯಸರ್ಕಾರ ಹಾಗೂ ಸಾರ್ವಜನಿಕ ಆಡಳಿತಗಳು ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ. ರಾಷ್ಟ್ರದ ಸಂವಿಧಾನದ ಮೌಲ್ಯಗಳು ಮತ್ತು ಗುರಿಗಳು ಅಭಿವೃದ್ಧಿಯ ದಿಕ್ಕನ್ನು ಸೂಚಿಸುತ್ತವೆ. ಸರ್ಕಾರದ ಆರ್ಥಿಕ ಮತ್ತು ಸಾಮಾಜಿಕ ನೀತಿಗಳು ಅದನ್ನು ನಿರ್ದೇಶಿಸುತ್ತವೆ. ಬೊಕ್ಕಸದ, ಹಣಕಾಸಿನ, ಬ್ಯಾಂಕಿಗೆ ಸಂಬಂಧಿಸಿದ, ಕೈಗಾರಿಕಾ, ವ್ಯವಸಾಯ ಮತ್ತು ವ್ಯಾಪಾರ ವಹಿವಾಟು ಮುಂತಾದವುಗಳಿಗೆ ಸಂಬಂಧಿಸಿದ ನೀತಿ ನಿಯಮಗಳು ಅಭಿವೃದ್ಧಿಯನ್ನು ನಿಯಂತ್ರಿಸುತ್ತವೆ. ಆರೋಗ್ಯ, ಶಿಕ್ಷಣ ಹಾಗೂ ಸಮಾಜಕಲ್ಯಾಣ ನೀತಿಗಳು ಅಭಿವೃದ್ಧಿಗೆ ಬೆಂಬಲ ನೀಡುತ್ತವೆ. ಇವುಗಳಲ್ಲದೆ ಎಲ್ಲಾ ದೇಶಗಳಲ್ಲೂ ಒಂದಲ್ಲ ಒಂದು ತರಹದ ಸಾರ್ವಜನಿಕ ಅಂದರೆ ಸರ್ಕಾರೀ ಯೋಜನೆಗಳು, ಕಾರ್ಯಕ್ರಮಗಳು, ಘಟಕಗಳು, ಉದ್ದಿಮೆಗಳೂ ಹಾಗೂ ಸಂಘಸಂಸ್ಥೆಗಳೂ ನೇರವಾಗಿ ಅಭಿವೃದ್ಧಿಕಾರ್ಯದಲ್ಲಿ ತೊಡಗಿರುತ್ತದೆ.

ರಾಜ್ಯ ಮತ್ತು ಸಾರ್ವಜನಿಕ ಆಡಳಿತಗಳು ಅಭಿವೃದ್ಧಿಯಲ್ಲಿ ಭಾಗವಹಿಸುವ ಗಾತ್ರ ದೇಶದಿಂದ ದೇಶಕ್ಕೆ ಭಿನ್ನವಾಗಿರಬಹುದು. ಕಮ್ಯೂನಿಸ್ಟ್ ರಾಜ್ಯಗಳಲ್ಲಿ ಈ ಭಾಗವಹಿಸುವಿಕೆ ಗರಿಷ್ಠ, ನೇರ ಮತ್ತು ಬೃಹತ್ತಾಗಿರುತ್ತದೆ. ಇದಕ್ಕೆ ವಿರುದ್ಧವಾಗಿ ವಿಪರೀತವಾಗಿ ಉದಾರವಾದ, ಅಥವಾ ನವ-ಶಾಸ್ತ್ರೀಯ ಆರ್ಥಿಕವಾದವನ್ನು ಅನುಸರಿಸುವ ರಾಜ್ಯಗಳಲ್ಲಿ ಇದು ಕನಿಷ್ಠ, ಪರೋಕ್ಷ ಮತ್ತು ಕಡಿಮೆ ಗಾತ್ರದ್ದಿರಬಹುದು. ಭಾರತದಂತಃ ಮಿಶ್ರ ಆರ್ಥಿಕ ನೀತಿ ಅನುಸರಿಸುವ ರಾಷ್ಟ್ರಗಳಲ್ಲಿ ಈ ಭಾಗವಹಿಸುವಿಕೆ ಮಧ್ಯ ಗಾತ್ರದ್ದಾಗಿರಬಹುದು. ಏನೇ ಆಗಲೀ ಈ ಭಾಗವಹಿಸುವಿಕೆ ಎಲ್ಲಾ ರಾಜ್ಯಗಳಲ್ಲೂ ಇದ್ದೇ ಇರುತ್ತದೆ. ರಾಜ್ಯದ ಮೇಲಿರುವ ಸಾರ್ವಭೌಮ ನೈತಿಕ ಜವಾಬ್ದಾರಿ ಮತ್ತು ಅದರ ಸಾರ್ವಭೌಮ ಅಧಿಕಾರಗಳು ಈ ಭಾಗವಹಿಸುವಿಕೆಯನ್ನು ಅನಿವಾರ್ಯವಾಗಿಸುತ್ತವೆ.

ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಹಾಗೂ ರಾಜ್ಯಕ್ಕಿಂತ ಮಾರುಕಟ್ಟೆಗೆ ಬೃಹತ್ ಪಾತ್ರಗಳಿರುವ ಇತ್ತೀಚಿನ ದಿನಗಳಲ್ಲೂ ರಾಜ್ಯವು ತನ್ನ ಆರ್ಥಿಕ ಕ್ಷೇತ್ರದ "ಎಂಪೈರ್" ಬಿಟ್ಟರೂ "ಅಂಪೈರ್" ಕಾರ್ಯವನ್ನು ಬಿಟ್ಟಿಲ್ಲ. ಸ್ವಲ್ಪ ಮಟ್ಟಿಗೆ ಸಾರ್ವಜನಿಕ ಉದ್ದಿಮೆಗಳಲ್ಲೂ ಹಾಗೂ ಸಾರ್ವಜನಿಕ-ಖಾಸಗೀ ಪಾಲುದಾರಿಕೆಗಳಲ್ಲೂ ಮುಂದುವರೆಯುತ್ತಿದೆ. ಕೈಮೀರಿದ ಹಣದೊತ್ತಡ (ಇನ್‌ಫ್ಲೇಷನ್) ಅಥವಾ ಮಾರುಕಟ್ಟೆ ಕುಸಿತಗಳಾದಾಗ ಅವುಗಳನ್ನು ಸರಿಪಡಿಸಲು ರಾಜ್ಯದ ಭಾಗವಹಿಸುವಿಕೆ ಅನಿವಾರ್ಯವಾಗಿ ನಡೆಯುತ್ತಲೇ ಇದೆ. ಆದ್ದರಿಂದ ರಾಷ್ಟ್ರಗಳ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರ ಅನಿವಾರ್ಯವೂ ಹಾಗೂ ನಿರಂತರವೂ ಆಗಿದೆ.

## 4.3 ಮೂರನೇ ವಿಶ್ವರಾಷ್ಟ್ರಗಳಲ್ಲಿ ಈ ನಂಟು

ಮೂರನೇ ವಿಶ್ವರಾಷ್ಟ್ರಗಳಲ್ಲಿ ಅಭಿವೃದ್ಧಿ ಮತ್ತು ಆಡಳಿತಗಳ ನಡುವಿನ ಸಂಬಂಧ ಗಾಢವಾಗಿದೆ. ಇದಕ್ಕೆ ಕಾರಣಗಳು ಅನೇಕವಿದೆ. ಮೊದಲನೆಯದು ಈ ದೇಶಗಳು ಅಭಿವೃದ್ಧಿಯಲ್ಲಿ ತೊಡಗಿರುವುದು. ಎರಡನೆಯದು, ಈ ದೇಶಗಳಲ್ಲಿ ಸ್ವತಂತ್ರ ಬಂದ ಕಾಲದಲ್ಲಿ ಮಾರುಕಟ್ಟೆ, ಖಾಸಗೀಕ್ಷೇತ್ರ ಹಾಗೂ ನಾಗರೀಕ ಸಮಾಜಗಳು ಹಿಂದುಳಿದವುಗಳಾಗಿದ್ದುದು. ಮೂರನೆಯದಾಗಿ, ಇವುಗಳಿಗೆ ಹೋಲಿಸಿದರೆ, ಸಾರ್ವಜನಿಕ ಆಡಳಿತ ವ್ಯವಸ್ಥೆಗಳು ಹೆಚ್ಚು ವ್ಯವಸ್ಥಿತ ಮತ್ತು ಶಿಸ್ತಿನ ವ್ಯವಸ್ಥೆಗಳಾಗಿ ಕಂಡದ್ದು. ಈ ಕಾರಣಗಳಿಂದಾಗಿ, ಈ ದೇಶಗಳಲ್ಲಿ ಅಭಿವೃದ್ಧಿಯು ಹೆಚ್ಚು ಸರ್ಕಾರಾವಲಂಬಿತವಾಗಿಯೂ ಹಾಗೂ ಸ್ವಲ್ಪ ಮಟ್ಟಿಗೆ ಮಿಶ್ರ-ಆರ್ಥಿಕ ನೀತಿಗಳಾಧಾರಿತವಾಗಿಯೂ ಆಗಿ ಆರಂಭವಾಯಿತು.